# ಹಿಂದು ವಾಣಿ

ಸಂಪುಟ – 22
ಸಂಚಿಕೆ – 10
ಫಾಲ್ಗುಣ – ಚೈತ್ರ
ಏಪ್ರಿಲ್ 2024
ಬೆಲೆ ರೂ. 15.00

**HINDU VANI**
KANNADA MONTHLY

VOL-22 ISSUE-10 APRIL 2024 BENGALURU PAGES-44 Rs:15/-
















ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭಾ





ಶಿವಾಜಿ ಮಹಾರಾಜ ಸಾಮ್ರಾಜ್ಯೋತ್ಸವ

ಕಳಸ



ಶೃಂಗೇರಿ



ದುರ್ಗಾವಾಹಿನಿ ಪರಿಚಯ ವರ್ಗ

ಹುಬ್ಬಳ್ಳಿ



ಮಂಗಳೂರು



ಶ್ರೀ ಸ್ಥಾಣು ಮಾಲಯನ್ – ಪತ್ರಿಕಾಗೋಷ್ಠಿ



ಅರ್ಚಕರ ಸಮ್ಮೇಳನ –
ಸಂವಾದ ಜಯನಗರ,
ಬೆಂಗಳೂರು

# ಹಿಂದುವಾಣಿ

hinduvani@yahoo.com

ಶ್ರೀ ಶೋಭಕೃತು-ಕ್ರೋಧಿ ಸಂವತ್ಸರ
ಫಾಲ್ಗುಣ - ಚೈತ್ರ

ಏಪ್ರಿಲ್ 2024

**ಗೌರವ ಸಂಪಾದಕ**

ಟಿ.ಎ.ಪಿ. ಶೆಣೈ

**ಪ್ರಕಾಶಕರು**

ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು - 560 004.
ದೂ. 080-26604641

**ಪ್ರಸಾರ ಸಲಹೆ**

ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

**ಚಂದಾವಿವರ**

| | |
|---|---|
| ಬಿಡಿಪ್ರತಿ | ರೂ. 15/- |
| ವಾರ್ಷಿಕ ಚಂದಾ | ರೂ. 130/- |
| ದ್ವೈವಾರ್ಷಿಕ ಚಂದಾ | ರೂ. 250/- |

**ಮುದ್ರಕರು**

ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು - 560 018.
rmudrana@gmail.com


## ಸೂಕ್ತಿಶ್ರೀ

# ಎಲ್ಲಿದೆ ಸುಖಸಂತೋಷ?

**ಆರೋಗ್ಯಮಾನೃಣ್ಯಮವಿಪ್ರ ವಾಸಃ**
**ಸದ್ಭಿರ್ಮನುಷ್ಯೈಃ ಸಹ ಸಂಪ್ರಯೋಗಃ ।**
**ಸ್ವಪ್ರತ್ಯಯಾ ವೃತ್ತಿರಭೀತವಾಸಃ**
**ಷಡ್ ಜೀವಲೋಕಸ್ಯ ಸುಖಾನಿ ರಾಜನ್ ॥**

**ಉದ್ಯೋಗ ಪರ್ವ, ಮಹಾಭಾರತ**

"ರಾಜನೇ, ಆರೋಗ್ಯದಿಂದ ಇರುವುದು; ಸಾಲವಿಲ್ಲದಿರುವುದು, ಪ್ರಯಾಸದ ಪ್ರವಾಸ ಇಲ್ಲದಿರುವುದು, ಸಜ್ಜನರೊಡನೆ ನಡೆಸುವ ವ್ಯವಹಾರ, ಸ್ವತಂತ್ರವಾಗಿ ಜೀವನವನ್ನು ನಡೆಸುವುದು, ನಿರ್ಭಯವಾಗಿ ಬದುಕಬಹುದಾದ ಪ್ರದೇಶಗಳು ಸಿಗುವ ಈ ಆರು ವಿಚಾರಗಳು ಜನರಿಗೆ ಸುಖಸಂತೋಷಗಳನ್ನು ನೀಡುವುವು".

ಆಗಾಗ ಮನಸ್ಸು ಭೀತವಾಗಿರುವಾಗ ಅಥವಾ ಒಂಟಿತನವು ಕಾಡಿದಾಗಲೆಲ್ಲ ಧೃತರಾಷ್ಟ್ರನು ವಿದುರನ ಬಳಿ ತನ್ನ ಮನಸ್ಸಿನ ಆವೇಗವನ್ನು ಬರಿದು ಮಾಡುತ್ತಿದ್ದನು. ಇಂತಹದೊಂದು ಸಂದರ್ಭದಲ್ಲಿ ಧೃತರಾಷ್ಟ್ರನು ಕೇಳಿದ ಪ್ರಶ್ನೆಗೆ ವಿದುರನು ಮೇಲಿನಂತೆ ಹೇಳಿದನು.

ಸುಖವು ಸಿಗುವುದೆಲ್ಲಿ ಎಂದು ಕೇಳಿದರೆ ವಿದುರನು ಹೇಳಿದ್ದು ಅದು ಆರೋಗ್ಯದಿಂದ ಇರುವುದರಲ್ಲಿದೆ ಎಂದು. ವಿದುರನಿಗೆ ಸುಖವು ಧನ ಧಾನ್ಯಗಳಲ್ಲಿದೆ ಎಂದು ಅನಿಸಲೇ ಇಲ್ಲ. ಹಣವು ತುಂಬಿ ತುಳುಕುತ್ತಿದ್ದರೂ ಅನಾರೋಗ್ಯದಿಂದ ಬಳಲುವವನು ಪಡುವ ಸಂಕಟವು ಆತನಿಗೊಬ್ಬನಿಗೆ ಮಾತ್ರ ಗೊತ್ತು. ಮಕ್ಕಳ ಆರೋಗ್ಯಕ್ಕಾಗಿ ಸಂಪತ್ತಿನ ಸಮಸ್ತವನ್ನು ನೀಡಲು ಸಿದ್ಧನಿರುವ ಶ್ರೀಮಂತನು ಅದನ್ನು ಸಾಧಿಸಲಿಕ್ಕಾಗದೆ ನೋವನ್ನು

ಅನುಭವಿಸುತ್ತಿರುವುದನ್ನು ನಾವು ಕಾಣುತ್ತಲೇ ಇರುವೆವು. ಆರೋಗ್ಯವೆಂಬ ಸುಖವು ಅರ್ಥವಾಗುವುದು ಅದು ಇಲ್ಲದೆ ಬಳಲುವ ಶ್ರೀಮಂತನನ್ನು ಕಂಡಾಗ ಮಾತ್ರ.

ಹಣ ಕಳೆದು ಹೋಯಿತೇನು? ಅದರಿಂದ ಏನೂ ನಷ್ಟವಾಯಿತೆಂದುಕೊಳ್ಳಬೇಕಾಗಿಲ್ಲ. ಆರೋಗ್ಯವಿಲ್ಲದೇ ಹೋಯಿತೇ? ಏನೋ ಒಂದಿಷ್ಟು ಕಳೆದುಕೊಂಡೆ ಎನ್ನಬಹುದೇನೋ? ಆದರೆ ಗುಣಸ್ವಭಾವವೇ ವಿಪರೀತವಾಯಿತು ಎಂದರೆ ಎಲ್ಲವನ್ನೂ ಕಳೆದುಕೊಂಡಂತಾಗುತ್ತದೆ. ಇದು ಶ್ರೀರಾಮಕೃಷ್ಣ ಪರಮಹಂಸರ ಹಿತವಚನ. ಪರಮಹಂಸರು ಕೂಡಾ ತಮ್ಮ ಮಾತಿನಲ್ಲಿ ಹಣವನ್ನು ನಗಣ್ಯವೆಂದುಕೊಂಡವರು.

ಉದ್ಯೋಗ ಪರ್ವದ ಈ ಸೂಕ್ತಿಯು ಹಣದ ನಕಾರಾತ್ಮಕ ರೂಪವಾದ ಸಾಲವನ್ನೂ ಉಲ್ಲೇಖಿಸಿದೆ. ಶ್ರೀಮಂತಿಕೆಯು ಹಣವೆಷ್ಟಿದೆ ಎನ್ನುವುದರಿಂದ ಲೆಕ್ಕ ಮಾಡುವುದಲ್ಲ. ಇರುವುದಕ್ಕಿಂತ ಹೆಚ್ಚಿನ ಮೊತ್ತವನ್ನು ವ್ಯಯಿಸಬೇಕಾದಲ್ಲಿ ಅವನು ಶ್ರೀಮಂತನಾಗಲಾರ. ಆಗ ಅವನು ಸಾಲಗಾರನಾಗಬೇಕಾಗುತ್ತದೆ. ಅದು ಅವಮಾನದ ಕಡೆಗೆ ಹೋಗುವ ಹೆದ್ದಾರಿ.

ಇನ್ನು ಸದಾ ಪ್ರಯಾಣದಲ್ಲಿರುವುದನ್ನು ವಿದುರ ನೀತಿಯು ಉಲ್ಲೇಖಿಸುತ್ತದೆ. ಕುಟುಂಬದಿಂದ ದೂರವಿರುವುದು, ಶಾಂತ ಚಿತ್ತನಾಗಿರಲು ವ್ಯವಧಾನವಿಲ್ಲದಿರುವುದು, ಸ್ವಾಧ್ಯಾಯವಾಗಲೀ ಉತ್ತಮ ದಿನಚರಿಗಳಲ್ಲಿ ಭಾಗವಹಿಸಲು ಅಸಾಧ್ಯವಾದುದೆಲ್ಲವೂ ಪ್ರವಾಸದಲ್ಲಿರುವ ಕಾರಣದಿಂದ. ಸಜ್ಜನರೊಂದಿಗೆ ನಡೆಸುವ ವ್ಯವಹಾರವು ಜೀವನವನ್ನೂ ಮನಸ್ಸನ್ನೂ ಪ್ರಫುಲ್ಲವಾಗಿಸುವುದು. ಜೊತೆಗಾರರು ದುರ್ಜನರಾಗಿದ್ದರೆ ದಿನವೂ ಚಿಂತೆಯು ಕಾಡುವುದು ತಪ್ಪಿದ್ದಲ್ಲ. ಇನ್ನು ಜೀವನದ ಹಾದಿಯೂ ಸ್ವತಂತ್ರವಾಗಿರಬೇಕು. ಪರರ ಮರ್ಜಿಯಲ್ಲಿ ಬದುಕುವುದನ್ನು ಪ್ರಾಣಿಗಳೂ ಧಿಕ್ಕರಿಸುವುದನ್ನೂ ಕಂಡಿದ್ದೇವೆ. ಹಂಗಿನ ಅರಮನೆಗಿಂತಲೂ ವಿಂಗಡದ ಗುಡಿಲೇಸು ಎನ್ನುವ ಮಾತನ್ನು ಸರ್ವಜ್ಞ ಕವಿ ಹೇಳುತ್ತಾನೆ. ಬಡವನಾಗಿರುವುದು ತಪ್ಪಲ್ಲ. ದೀನನಾಗಿರುವುದು ಮಾತ್ರ ಸಲ್ಲದು.

ಇನ್ನು ನಿರ್ಭಯವಾದ ಜೀವನದ ಅವಕಾಶವು ಆಡಳಿತದ ಮೇಲೆ ಅವಲಂಬಿಸಿದೆ. ಅದು ಅಂದಿನ ರಾಜನ ಆಡಳಿತವೇ ಇರಬಹುದು ಅಥವಾ ಇಂದಿನ ಪ್ರಜಾಧಿಕಾರವೇ ಇರಬಹುದು. ಎರಡೂ ಕಡೆ ಪ್ರಜಾರಕ್ಷಣೆಯನ್ನೇ ಪ್ರಥಮವೆಂದುಕೊಂಡ ಸರ್ಕಾರಗಳಿದ್ದವು. ಅದೇ ರೀತಿ ಪ್ರಜೆಗಳಿಗೆ ಕಂಟಕಕಾರಿಯಾದ ಆಡಳಿತದ ಕಾಲವೂ ಇದ್ದಿತು. ಇಂತಹ ಆಡಳಿತವು ಅರಾಜಕ ಸಂತತಿ, ಪುಂಡರ ಹಾವಳಿ, ಸುಲಿಯುವ ಅಧಿಕಾರಿಗಳು; ಇವೆಲ್ಲಕ್ಕೂ ಕುಮ್ಮಕ್ಕು ಕೊಡುವ ಮೂಲವಾಗಿದೆ. ಇದನ್ನು ಕಂಡೇ ಕೆಲವು ಮುಖ್ಯಮಂತ್ರಿಗಳ ಆಡಳಿತ ಕಾಲವನ್ನು 'ಜಂಗಲ್‌ರಾಜ್' ಅರಣ್ಯ ಆಡಳಿತವೆಂದು ಕರೆದಿದ್ದರು. ಎಂದೂ ಕೂಡಾ ಅಂತಹ ಸ್ಥಿತಿಯು ಭಾರತಕ್ಕೆ ಬರಬಾರದು. ರಾಜನೀತಿಯ ಪ್ರಾಥಮಿಕ ಮಾಹಿತಿಯೂ ತಿಳಿಯದೆ ಹೇಳಿಕೊಟ್ಟಿದುದನ್ನು ಗಿಣಿಪಾಠದಂತೆ ಒಪ್ಪಿಸುವ ರಾಜಕಾರಣಿಗಳಿಗೆ ಭಾರತದಂತಹ ಸುಸಂಸ್ಕೃತ ದೇಶದಲ್ಲಿ ಅವಕಾಶವಿರಬಾರದು. ಸಜ್ಜನ ದೇಶದಲ್ಲಿ ಪ್ರಜೆಗಳನ್ನು ಸುಲಿದು ಬದುಕಬೇಕೆನ್ನುವ ಆಡಳಿತಕ್ಕೆ ಕಿಂಚಿತ್ತೂ ಬೆಂಬಲವಿರಬಾರದು. ಹೆಣ್ಣುಮಕ್ಕಳು ಅಸಹಾಯಕರಾಗಿ ಕಣ್ಣೀರಿಡುವ ದಿನಗಳು ಬರಬಾರದು. ಕಂಗೆಡುವ ಹಸಿವು ಇರಬಾರದು. ಅದಕ್ಕಾಗಿ ಬೇಕು ಸಜ್ಜನರ ಸರ್ಕಾರ. ಯೋಗಿ ಪುರುಷರ ಆಡಳಿತ.




## ಎಂದಿನಂತೆ


3 **ಸೂಕ್ತಿಶ್ರೀ** ಎಲ್ಲಿದೆ ಸುಖಸಂತೋಷ?

6 **ಪ್ರತಿಧ್ವನಿ**

7 **ಸಂಪಾದಕೀಯ** ಮಹಾಭಾರತದ ಸಂದೇಶ

32 **ಕವನ** ಚಿಟ್ಟೆ

34 **ಶಬ್ದಶೋಧ 196**

36 **ನಿಮಗೆಷ್ಟು ಗೊತ್ತು?**

39 **ಪ್ರಸ್ತುತ** ಬೀಜವೊಂದು ಮೊಳಕೆಯಾಗಿ


## ತಿಂಗಳ ವಿಶೇಷ


10 ರಾಷ್ಟ್ರ–ಋಷಿ ಶ್ರೀಗುರೂಜಿ

17 ನಿಮ್ಮ ಹೇಳಿಕೆಯ ಪರಿಣಾಮ

18 ಆಚಾರ್ಯ ಚಾಣಕ್ಯ

21 ಹಿಂದು ನಿರಾಶ್ರಿತರಿಗೆ ಸಿ.ಎ.ಎ. ಅಭಯ


24 ಮೊದಲ ನೌಕಾ ಸೇನಾಪತಿ ಕಾನ್ಹೋಜಿ ಆಂಗ್ರೆ

27 ಎಲ್. ಶ್ರೀಧರ್ ಭಟ್ ಅಗಲಿದ ಹಿರಿಯರು

29 ಸಮರಸತೆಯ ಸಂಕೇತ ಕೆರೆಗೋಡು

30 ಸತೀಶ್ ಅಳಿಯದ ಸ್ನೇಹ

37 ವಿಶ್ವ ಹಿಂದು ಪರಿಷದ್–ಗೊತ್ತುವಳಿಗಳು




## ಅಸಮಾನ ವ್ಯಕ್ತಿತ್ವ ಅನುಪಮ ಮಾರ್ಗದರ್ಶನ

ಪೂಜ್ಯ ಗುರೂಜಿಯವರಿಂದ, ಮನುಷ್ಯನ ವ್ಯಕ್ತಿತ್ವಕ್ಕೂ; ಸಮಾಜಕ್ಕೆ ನೀಡುವ ಮಾರ್ಗದರ್ಶನಕ್ಕೂ ಹೊಸ ವ್ಯಾಖ್ಯೆಯೇ ಬಂದು ಬಿಟ್ಟಿತು. ರಾಷ್ಟ್ರ, ರಾಷ್ಟ್ರಪ್ರಜ್ಞೆ, ಹಿಂದು ಹಿಂದುತ್ವ, ಸಮಾಜ ಮತ್ತು ಸಾಮಾಜಿಕತೆಗಳಿಗೆ ಹೊಸ ನರೇಟಿವ್‌ಗಳೇ ಬಂದವು. ಕಾಲಾತೀತವಾದ ಹಿಂದು ಪ್ರಜ್ಞೆಯು ಮತ್ತೆ ಭಾರತವನ್ನು ಆವರಿಸಿತು. ಭಾವನೆಗಳೇ ತುಳುಕಾಡುವ ಮನೋಜ್ಞ ಲೇಖನ. ಮುಂದಿನ ಕಂತನ್ನು ತವಕದಿಂದ ನಿರೀಕ್ಷಿಸುವಂತೆ ಮಾಡಿದ ಸುಂದರ ಪುಟಗಳು.

– **ಜ್ಞಾನೇಶ ಮೂರ್ತಿ,** ಹೊನ್ನಾವರ

## ಬಾಲರಾಮನ ದರ್ಶನ

ಅಯೋಧ್ಯೆಗೆ ಭೇಟಿ ನೀಡಿದ ಯಾತ್ರಿಕರ ಅನುಭವವು ವಿಶಿಷ್ಟ. ಅದರಲ್ಲೂ ಶ್ರೀರಾಮಜನ್ಮಭೂಮಿಯ ಹಲವು ಹಂತಗಳ ಸಂಘರ್ಷದಲ್ಲಿ ಪಾಲ್ಗೊಂಡವರು ಕಾಣುವುದು ಮತ್ತು ಕಾಣಬಯಸುವ ಆ ವಿಶಿಷ್ಟ ಲೋಕವೇ ಬೇರೆ! ಲೇಖಕರ ಬಾಲರಾಮನ ದರ್ಶನ ವಿಶಿಷ್ಟವಾದುದು. ಅವರ ಅನುಭವವೇ ಲಕ್ಷಾವಧಿ ಮನಸ್ಸುಗಳಲ್ಲಿ ಪಡಿಮೂಡಿರಬಹುದು.

– **ಷಡಕ್ಷರ ಸ್ವಾಮಿ,** ಕೆರೂರು

## ಯಾನ್ ಮಿರಾ ಮತ್ತು ಶಮೀಮಾ

ಹೊಸದನಿಯೆಂದು ಪರಿಚಯಿಸಿದ ಯಾನ್ ಮಿರಾ; ಕಾಶ್ಮೀರದ ಕಲ್ಲು, ಬಾಂಬು, ಗುಂಡುಗಳ ಸದ್ದನ್ನು ಅಡಗಿಸುವ ಮಧುರ ಮಂಜುಳ ದನಿಯಾಗಬಲ್ಲಳೇ? ಶಮಿಮಾ ಬೇಗಮಳ ಹುಚ್ಚು ಆವೇಶದ ದುರಂತವು ಯುವ ಮನಸ್ಸುಗಳ ವೈಫಲ್ಯವನ್ನು ಮನಗಾಣಿಸಬಹುದೇ?

– **ರತ್ನಮಾಲಾ,** ಬೆಂಗಳೂರು

## ಕೆರೆಗೋಡಿನ ಧ್ವಜಸ್ತಂಭ

ಲೇಖನವು ಹಲವು ಹತ್ತು ತಿರುವುಗಳನ್ನು ಪಡೆಯಬಹುದಾದ ರಾಜಕೀಯ ಬೆಳವಣಿಗೆಯ ಉತ್ತಮ ಅಧ್ಯಯನ ವಿಚಾರವಾಗಿದೆ.

– **ರಾಜರಾಮ,** ಹಾವೇರಿ

## ಗುರೂಜಿ – ಗೀತೆ ಲೇಖನ

ಶ್ರೀ ಗುರೂಜಿಯವರ ಬಗ್ಗೆ ಪ್ರಕಟವಾದ ಗೀತೆ ತುಂಬಾ ಅರ್ಥಗರ್ಭಿತವಾಗಿದೆ

– **ವಿಷ್ಣುಮೂರ್ತಿ ಮೈಕೋ ಬಡಾವಣೆ,** ಬೆಂಗಳೂರು

ಶ್ರೀ ಗುರೂಜಿಯವರ ಪರಿಚಯದ ರಾಷ್ಟ್ರ ಋಷಿ ಗುರೂಜಿ ವಿಶಿಷ್ಟ ಲೇಖನಕ್ಕಾಗಿ ಧನ್ಯವಾದಗಳು. ಗುರೂಜಿಯವರ ವ್ಯಕ್ತಿತ್ವದ ಅಂತರ್ಮುಖಿ ದರ್ಶನದ ಎರಡನೇ ಭಾಗವನ್ನು ನಿರೀಕ್ಷಿಸುತ್ತಿದ್ದೇನೆ.

–**ನಾರಾಯಣನ್,** ಬೆಂಗಳೂರು

ಸಂಪಾದಕೀಯ

# ದುರ್ಗಗಳಲ್ಲಿ ಪ್ರಜಾದುರ್ಗವೇ ಬಲವಾದುದು
# ಮಹಾಭಾರತದ ಸಂದೇಶ

ರಾಷ್ಟ್ರದ ಮತ್ತು ಅಲ್ಲಿರುವ ಸಂಪೂರ್ಣ ಸಮೂಹದ ಮುನ್ನಡೆಗೆ ಪುಟನೀಡುವ ನೀತಿ ನಿರ್ಧಾರಗಳನ್ನು ಕೈಗೊಳ್ಳಲು ಆಧಾರವಾದುದು ಅಲ್ಲಿಯ ರಾಜಕಾರಣದ ವ್ಯವಸ್ಥೆ. ಭಾರತದಲ್ಲಿ ಇದಕ್ಕೆ ಮೂಲವಾಗಿರುವುದು ಧರ್ಮದ ಮೂಲ ತತ್ವಗಳು. ಸರ್ವರ ಒಳಿತು ಮತ್ತು ಸಾರ್ವಜನಿಕರ ಹಿತವನ್ನು ಒಳಗೊಂಡು ಸಮತೋಲನದಿಂದ ರಾಷ್ಟ್ರವನ್ನು ಪ್ರಗತಿಯತ್ತ ಕೊಂಡೊಯ್ಯುವುದು ಹಿಂದೆ ರಾಜರ ಕರ್ತವ್ಯವಾಗಿದ್ದರೆ ಈಗ ಅದು ಚುನಾಯಿತ ಪ್ರಧಾನಿಯ ಪಾಲಿಗೆ ಬಂದಿದೆ.

ದೇಶಕ್ಕಾಗಿ ಒಬ್ಬ ಯೋಧನ ಬಲಿದಾನವು ಸರ್ವರ ಒಳಿತಿಗಾಗಿ ನಡೆಯುತ್ತದೆ. ಅಲ್ಲಿ ಸಾರ್ವಜನಿಕ ಹಿತವಿಲ್ಲ. ಅದರ ಬದಲು ಅಲ್ಲಿ ಸಾರ್ವಜನಿಕ ನೋವೇ ಇರಬಹುದೇನೋ? ಉದಾಹರಣೆಗೆ ಕೊರೊನಾ ಕಾಲದ ನಿರ್ಬಂಧಗಳು ಸಾರ್ವಜನಿಕ ಹಿತ ಮತ್ತು ಆಸಕ್ತಿಯ ರಕ್ಷಣೆಗಾಗಿ ಹೇರಲಾಗುತ್ತದೆ. ಆ ಮೂಲಕ ಸರ್ವರ ಒಳಿತಿನ ಉದ್ದೇಶವನ್ನು ಕಾಯಲಾಗಿದೆ. ಇದನ್ನು ದೇಶಕ್ಕೆ ಮನಗಾಣಿಸಬಲ್ಲವನು ರಾಜನಾದವನು. ಹೀಗಾಗಿ ರಾಜನನ್ನು ಕಾಲಕ್ಕೆ ಕಾರಣನಾಗಿರುತ್ತಾನೆ ಎಂದರು ನಮ್ಮ ಹಿರಿಯರು.

ಮಹಾಭಾರತದ ಶಾಂತಿಪರ್ವದಲ್ಲಿ 'ರಾಜದಂಡವೇ ಧರ್ಮ ಅರ್ಥಗಳನ್ನೂ ಧನಧಾನ್ಯಗಳನ್ನೂ ರಕ್ಷಿಸತಕ್ಕದ್ದು. ದಂಡದ ಭಯವು ದುರ್ಜನರನ್ನು ತೆಪ್ಪಗಿರಿಸುತ್ತದೆ. ಸಜ್ಜನರು ಶಾಂತಿಯಿಂದ ಬದುಕುತ್ತಾರೆ. ಆದುದರಿಂದ ಸಮಯಾನುಸಾರ ಮಾಡುವ ದಂಡದ ಪ್ರಯೋಗವು ರಾಜನ ಪಾಲಿಗೆ ಪಾಪಕೃತ್ಯವೆನಿಸುವುದಿಲ್ಲ; ಎಂದು ಭೀಷ್ಮರು ಯುಧಿಷ್ಠಿರನಿಗೆ ಹೇಳುತ್ತಾರೆ. ಈ ದಿನಗಳ ರಾಜನೀತಿಯನ್ನು ಗಮನಿಸಿದಾಗ ಮಹಾಭಾರತ ಮತ್ತು ರಾಮಾಯಣಗಳ ರಾಜನೀತಿಯ ರೀತಿಯನ್ನು ಸೂಕ್ಷ್ಮಗ್ರಾಹಿಯಾದವರು ಮಾತ್ರ ಅರಿತು, ಭಾರತದಂತಹ ವಿಶಾಲ ದೇಶವನ್ನು ಆಂತರಿಕ ಮತ್ತು ಬಾಹ್ಯ ಆಕ್ರಮಣಗಳಿಂದ ಯಶಸ್ವಿಯಾಗಿ ರಕ್ಷಿಸಬಲ್ಲರು. ಪ್ರಜಾಪ್ರಭುತ್ವದ ಅತ್ಯುಚ್ಚ ದೇಗುಲವಾದ ಸಂಸತ್ತಿನಲ್ಲಿ ಚೋಳರ ಕಾಲದ ರಾಜನೀತಿಯ ದೃಢತೆ ಮತ್ತು ವಿನಯಗಳನ್ನು ಪ್ರತಿನಿಧಿಸುವ 'ಸೆಂಗೋಲ'ನ್ನು ಸ್ಥಾಪಿಸಿರುವುದು ಇದನ್ನೇ ಪ್ರತಿನಿಧಿಸುತ್ತದೆ.

ಮಮಕಾರವನ್ನು ತ್ಯಾಗಮಾಡಿ ರಾಜ್ಯಪರಿಪಾಲನೆ ಮಾಡುವುದರಿಂದ ಧರ್ಮವೂ ಉಂಟು. ಆದರಿಂದ ಸರ್ವರ ಸುಖವೂ ಉಂಟು ಎನ್ನುವುದು ಕೂಡಾ ಮಹಾಭಾರತದಲ್ಲಿ ವಿದುರನು ಹೇಳುವ ಮಾತು. ದೇಶದ ಪ್ರಧಾನಿಗೆ ಮನೆಯಿಲ್ಲ ಮಠವಿಲ್ಲ ಪರಿವಾರವೇ ಇಲ್ಲ ಆತನಿಗೆ ದೇಶವಾಳುವ ಯೋಗ್ಯತೆ ಹೇಗೆ ಬರುತ್ತದೆ? ಎಂದು ಭ್ರಷ್ಟಾಚಾರದ ಪ್ರತಿರೂಪವೇ ಆದ ಮಾಜಿ ಮುಖ್ಯಮಂತ್ರಿಯೊಬ್ಬರು ಅವರ ಬಗ್ಗೆ ಗೇಲಿಮಾಡಿದರು. ಹೀಗೆ ಆರೋಪಿಸುತ್ತಿರುವುದರಿಂದ ಜನಸಾಮಾನ್ಯರಿಗೆ ಮಹಾಭಾರತದ ಮಹಾತತ್ವಗಳ ನೆನಪಾಗುತ್ತದೆ. ಮತ್ತು ಆಳುತ್ತಿರುವ ಪ್ರಧಾನಿಯ ಮಹತ್ವವು ಅರಿವಾಗುತ್ತದೆ.

'ರಾಜನು ದೇವತೆಗಳ ಮತ್ತು ಜ್ಞಾನಿಗಳ ಮುಂದೆ ಭಕ್ತಿಯಿಂದ ವರ್ತಿಸಬೇಕು. ಆಗಲೇನೆ ಧರ್ಮದ ಋಣವು ಹರಿದು ಹೋಗುತ್ತದೆ. ರಾಜನು ಲೋಕಕ್ಕೆ ಪ್ರೀತಿ ಪಾತ್ರನಾಗುತ್ತಾನೆ' ಇದು ರಾಮಾಯಣದ ಅರಣ್ಯ ಕಾಂಡದಲ್ಲಿ ಬರುವ ಮಾತು. ಶ್ರೀರಾಮನು ಈ ರೀತಿ ನಡೆದು ತೋರಿಸಿದನು. ಹಾಗಾಗಿ ವಾಲ್ಮೀಕಿ ಹೇಳುತ್ತಾರೆ 'ಶ್ರೀರಾಮನು ಹೋದ ಕಡೆಗಳಲಲ್ಲೆಲ್ಲಾ ಪ್ರಜೆಗಳು ಅವನನ್ನು ಸಲುಗೆಯಿಂದ ಮತ್ತು ಪ್ರೀತಿಯಿಂದ ರಾಮ, ರಾಮ ಎಂದು ಕರೆಯುತ್ತಿದ್ದರಂತೆ.' ಇಂತಹ ಪ್ರಸಂಗಗಳನ್ನೂ ಈಗಲೂ ನಾವು ಕಾಣುತ್ತಿದ್ದೇವೆ. 'ಸರಿಯಾದ ಕಾಲದಲ್ಲಿ ಕೊಡಬೇಕಾಗಿರುವುದನ್ನು ಕೊಟ್ಟು ಬಿಡಬೇಕು' ಇದು ರಾಜನಿಗೆ ಭೀಷ್ಮರು ಬೋಧಿಸಿದ ಮಾತು. ಕೊಡುವ ಗ್ಯಾರಂಟಿ 'ಓಟಿ'ಗಾಗಿಯಲ್ಲ. ಕೊಡುವುದು ಪ್ರಜೆಗಳ ಅತಿ ಅವಶ್ಯಕ್ಕಾಗಿ. ಅಂತಹ ಸಂದಿಗ್ಧದಲ್ಲಿ ಅದಕ್ಕೆಷ್ಟು ಖರ್ಚಾಗುತ್ತದೆ. ಎಂದು ಯೋಚಿಸಬಾರದು. ಅದನ್ನು ಕೊಡಲೇ ಬೇಕಾದುದು ಎಂದು ಪರಿಗಣಿಸಬೇಕು. ಕೋವಿಡ್ 19ರ ಕಾಲದಲ್ಲಿ ಜಗತ್ತು ಕ್ಷೋಭೆಯಲ್ಲಿತ್ತು. ಸುತ್ತು ಹತ್ತು ಹಲವು ಸಮಸ್ಯೆಗಳು. ಅಂತಹ ಪರಿಸ್ಥಿತಿಯಲ್ಲಿ ಪ್ರಧಾನಿ ನಿರ್ಧರಿಸಿಬಿಟ್ಟರು; 80ಕೋಟಿ ಕುಟುಂಬಗಳಿಗೆ ಉಚಿತ ಆಹಾರ ಧಾನ್ಯ ನೀಡುವುದೆಂದು. ಕಳೆದ ಐದು ವರ್ಷಗಳಿಂದ ಜಾರಿಯಲ್ಲಿರುವ ಈ ನಿರ್ಧಾರವನ್ನು ಮತ್ತೆ ಐದು ವರ್ಷಗಳಿಗೆ ಮುಂದುವರಿಸಿದರು. ಕೆಲವು ರಾಜ್ಯ ಸರ್ಕಾರಗಳು ಇದನ್ನೇ ತಮ್ಮ ಸರ್ಕಾರವು ನೀಡುತ್ತಿರುವ ಗ್ಯಾರಂಟಿಗಳು ಎಂದು ಬಿಂಬಿಸಿದವು.

'ರಾಜನು ತನಗೆ ಇಷ್ಟವಾಗಿರಬಹುದಾದ ವ್ಯಸನಗಳನ್ನು ಬಿಡಬೇಕು. ಗರ್ಭಿಣಿ ತಾಯಿಯೊಬ್ಬಳು ತನ್ನ ಸುಖವನ್ನು ಬದಿಗಿಟ್ಟು ಹೊಟ್ಟೆಯಲ್ಲಿರುವ ಮಗುವಿನ ಯೋಗಕ್ಷೇಮವನ್ನು ಚಿಂತಿಸುವಂತೆ; ರಾಜನು ಪ್ರಜೆಗಳ ಹಿತವನ್ನು ಚಿಂತಿಸಬೇಕು. ಇದು ಕೂಡಾ ಮಹಾಭಾರತದ ಚಿಂತನೆ. ಪ್ರವಾಸದಲ್ಲೂ ಪ್ರಧಾನಿಯೊಬ್ಬರು ಪ್ರಯಾಣಕಾಲದಲ್ಲಿ ಸಮಾಲೋಚನೆಯ ಅವಧಿಯನ್ನು ನಿರ್ಧರಿಸುವುದು, ರಾತ್ರಿ ಹಗಲುಗಳ ವ್ಯತ್ಯಾಸದ ಶಾರೀರಿಕ ಬಳಲುವಿಕೆಯನ್ನು ಬದಿಗಿಟ್ಟು ಸದಾ ಪ್ರಫುಲ್ಲರಾಗಿರಲು ಯೋಗ, ಆಹಾರ ಧರ್ಮಗಳನ್ನು ಅಳವಡಿಸುವ ದಿನಚರಿ; ಇವು ಗರ್ಭಿಣಿ ತಾಯಿಯ ರೀತಿ. ಪ್ರಜಾರಕ್ಷಣೆಯೇ ರಾಜಧರ್ಮದ ಸಾರ ಎಂದು ಭೀಷ್ಮರು ಅಂದು ನುಡಿದ ಮಾತನ್ನು ಅರ್ಥೈಸಿಕೊಂಡವರು ಈಗಿನ ಪ್ರಧಾನಿ. ಒಂದು ವಾರ ಪ್ರವಾಸ ಮಾಡಿದ 'ಸುಸ್ತ'ನ್ನು ಪರಿಹರಿಸಿಕೊಳ್ಳಲು ಇದಕ್ಕೆ ವ್ಯತಿರಿಕ್ತವಾಗಿ ಹತ್ತು ದಿನ ವಿದೇಶದಲ್ಲಿದ್ದು ಸುತ್ತಾಡಿ ಬರುತ್ತಿರುವುದನ್ನು, ನಾವು ನೋಡುತ್ತಲೇ ಇದ್ದೇವೆ. ಮುಂಬೈ ಸರಣಿ ಬಾಂಬು ಧಾಳಿಯಲ್ಲಿ ದೇಶವಿಡೀ ತುದಿಕಾಲಲ್ಲಿ ನಿಂತ ಕಾತರದ ಕ್ಷಣಗಳಲ್ಲಿ; ಐಶಾರಾಮಿ ಕ್ಲಬ್ಬಿನಲ್ಲಿ ಕಾಲಕಳೆಯುತ್ತಿದ್ದ ರಾಜಕಾರಣಿಯ ಬಗ್ಗೆಯೂ ನಾವು ಕೇಳಿದ್ದೇವೆ. ಅದೇ ಪಾಕಿಸ್ತಾನಕ್ಕೆ ಪಾಠಕಲಿಸಲು ಭಾರತದ ಸಾರ್ವಭೌಮತೆಯನ್ನು ಸಾರಲೆಂದು ಪಾಕಿಸ್ತಾನದ ಒಳಗೆ ಉಗ್ರಗಾಮಿಗಳ ಸಮೂಲ ನಾಶಮಾಡಲು ಭಾರತೀಯ ವಾಯುಸೇನೆಯ ಯೋಧರು ಕಾರ್ಯಾಚರಣೆಯನ್ನು ಕೈಗೊಂಡರು. ಅವರು ಹೊರಟು ಮತ್ತೆ ಹಿಂದಿರುಗುವವರೆಗೆ ಕಾರ್ಯಾಚರಣೆಯ ಮಾಹಿತಿ ಪಡೆಯುತ್ತಾ ಅವರ ಸುರಕ್ಷತೆಗಾಗಿ ಉಪವಾಸದಲ್ಲಿದ್ದು ಪ್ರಾರ್ಥಿಸುತ್ತಿದ್ದ ಪ್ರಧಾನಿಯು ಭಾರತದಂತಹ ತಪೋಭೂಮಿಯಲ್ಲಿ ಮಾತ್ರ ಕಾಣಬಲ್ಲರು.

'ಜಗತ್ತು ಮಾನ್ಯರೆಂದುಕೊಂಡವರನ್ನು ಬಿಗುಮಾನ ಬಿಟ್ಟು ಗೌರವಿಸಬೇಕು' ಪಂಚವಟಿಯಲ್ಲಿ ಭರತನಿಗೆ ಶ್ರೀರಾಮನು ಹೇಳಿದ ನುಡಿಗಳು. ಕರ್ನಾಟಕದಿಂದ

ಪ್ರಧಾನಿಯಾದ ವಯೋವೃದ್ಧರನ್ನು ಪ್ರತಿ ಬಾರಿ ಭೇಟಿಯಾದಾಗಲೂ ಹಿರಿಯರನ್ನು ಮನೆಯ ಮಗನಂತೆ ಪ್ರೀತಿ, ವಿನಯಗಳಿಂದ ದೇಶದ ಪ್ರಧಾನಿ ಕಾಣುತ್ತಿದ್ದುದ್ದನ್ನು ನಾವು ಕಂಡಿದ್ದೇವೆ. ಹಿರಿಯರನ್ನು ವೃದ್ಧರನ್ನೂ ಗೌರವಿಸುವುದು ಹೇಗೆ ಎಂಬುದನ್ನು ದೇಶದ ಕಿರಿಯರನೇಕರು ಇದರಿಂದ ಕಲಿತಿರಬೇಕು. ದೇಶಕ್ಕೆ ಕೀರ್ತಿ ತಂದ ಆಟಗಾರರನ್ನೂ ವಿದ್ವಾಂಸರನ್ನೂ ಆಹ್ವಾನಿಸಿ ಅವರೊಂದಿಗೆ ಸಮಯ ಕಳೆಯಲು ನಿರ್ಧರಿಸುವ ಕಾಲ ನಿರ್ವಹಣೆಯ ಜಾಣ್ಮೆಯನ್ನೂ ಅವರಿಂದ ದೇಶವು ಕಲಿಸಿದೆ.

'ಯಾರು ದಕ್ಷರೋ, ಮಿತ ಭಾಷಿಗಳೋ, ಆತ್ಮಸ್ತುತಿಯಿಂದ ವಿಮುಖರೋ ಅವರು ಮಾತ್ರ ಅಮಾತ್ಯರಾಗಲು ಯೋಗ್ಯರು' ಶಾಂತಿಪರ್ವದ ಈ ಮಾತು ಇಂದಿನ ಭಾರತದ ಕೇಂದ್ರ ಮಂತ್ರಿ ಮಂಡಲಕ್ಕೆ ಅನ್ವಯಿಸುತ್ತದೆ. ಇದಕ್ಕೆ ಹೊರತಾದವರು ಅಲ್ಲಿ ಇರುವುದು ಅಸಾಧ್ಯ. ಇದು ಕಾಲವನ್ನು ನಿರ್ಧರಿಸಬಲ್ಲ ರಾಜನ ನಿಲುವು. ಭಾರತದ ಆ ಪೂರ್ವ ಅನುಭವ ಸಂಪನ್ನತೆ ಇಂದಿಗೂ ಯಶಸ್ವಿಯಾಗುವುದು ನಮ್ಮ ಕಣ್ಣ ಮುಂದೆಯೇ ಇದೆ. ಇಂದಿನ ಹಲವು ಮಹಿಳೆಯರ ಪರವಾದ ಯೋಜನೆಗಳೂ ಮತ್ತು ಕಾನೂನುಗಳೂ ನಮ್ಮ ಮಹಾಕಾವ್ಯಗಳ ಸಂದೇಶವನ್ನು ರಾಜಕಾರಣದಲ್ಲಿ ಯಶಸ್ವಿಯಾಗಿ ಪ್ರಯೋಗಿಸಲು ಸಾಧ್ಯವೆಂದು ತೋರಿಸಿಕೊಟ್ಟಿದೆ. ದುರ್ಗಗಳಲ್ಲಿ ಪ್ರಜಾದುರ್ಗವೇ ಬಲವಾದದ್ದು ಎಂದು ಭೀಷ್ಮರು ಹೇಳುತ್ತಾರೆ. ಇಂತಹ ಬಲಿಷ್ಟ ಪ್ರಜಾ ಪ್ರೀತಿಯನ್ನು ಈಗಿನ ಆಳುಗರು ಪಡೆದುಕೊಂಡಿರುವರು.

ಅಂತಹ ಪ್ರಜಾಸ್ನೇಹಿ, ಸ್ನೇಹಿಸೈನ್ಯ, ಸಂತುಷ್ಟ ವೃದ್ಧರು, ಉತ್ಸಾಹೀ ತರುಣರನ್ನು ಕಾಣುತ್ತಿರುವ ತಲೆಮಾರು ನಮ್ಮದು. ಜಾರ್ಜ್ ಫೆರ್ನಾಂಡೀಸ್ ಒಮ್ಮೆ ನಾವೆಲ್ಲ ಕಳೆದ 5 ದಶಕಗಳಿಂದ ನೀತಿ, ನಿರ್ಧಾರ, ಪಾಲಿಸಿ (policy) ಎಂದು ಮಾತನಾಡುತ್ತಲೇ ಬಂದೆವು. ನಾಗರಿಕ ಸುಖಕಾರಿ ಕಾರ್ಯಕ್ರಮಗಳನ್ನು ಕೈಬಿಟ್ಟೆವು' ಎಂದು ಹಳಹಳಿಸಿದ್ದರು. ಆದರೆ ಇಂದು ನಾವು ಪ್ರಜಾಸ್ನೇಹಿ ನೀತಿಯೇ ಕಾರ್ಯಕ್ರಮಗಳನ್ನೂ ರೂಪಿಸಬಲ್ಲದು. ಪೂರ್ವ ಜ್ಞಾನವು ಇಂದಿನ ದಿನದ ಅನ್ವಯಿಕ 'ಪಾಲಿಸಿ(policy)'ಯ ಪ್ರೋಗ್ರಾಮ್ ಆಗಲು ಸಾಧ್ಯವೆಂದು ನಾವು ಕಾಣುತ್ತಿದ್ದೇವೆ. ಇದು ಸ್ಥಾಯಿಯಾಗಲು ಇದೇ ಅನುಭವದ ರಾಜಕಾರಣವು ಮುಂದುವರಿಯಬೇಕು. ಪ್ರತಿಯೊಬ್ಬ ದೇಶಪ್ರೇಮಿಯ, ಧರ್ಮ ಪ್ರೇಮಿಯ, ಕರ್ತವ್ಯವಿದು. ■

## ಕಾರ್ಯಕರ್ತರ ಗಮನಕ್ಕಾಗಿ

**ಹಿಂದುವಾಣಿಗಾಗಿ ಪರಿಷತ್ತಿನ ಕಾರ್ಯಕ್ರಮಗಳ ಭಾವಚಿತ್ರಗಳನ್ನು ಕಳುಹಿಸುವಾಗ:**

1. ಭಾವಚಿತ್ರಗಳು ಜೆ.ಪಿ.ಜಿ. ಸ್ವರೂಪ (jpg Format) ದಲ್ಲಿರಬೇಕು.
2. ಭಾವಚಿತ್ರಗಳನ್ನೆಲ್ಲಾ ಒಂದು ಕಡೆ ಸೇರಿಸಿ (Combined) ಕಳುಹಿಸಬಾರದು. ಪ್ರತ್ಯೇಕವಾಗಿ ಕಳುಹಿಸಬೇಕು.
3. ಚಲಿಸುವ ಚಿತ್ರಗಳಾಗಿರದೆ (Vidio), ನಿಶ್ಚಲ (Still Photo) ಭಾವಚಿತ್ರಗಳಾಗಿರಲಿ.

# ರಾಷ್ಟ್ರಋಷಿ–ಶ್ರೀಗುರೂಜಿ

– ಟಿ.ಎ.ಪಿ.ಶೆಣೈ

*(ಕಳೆದ ಸಂಚಿಕೆಯಿಂದ....)*

## ಪ್ರಬುದ್ಧ ದೃಷ್ಟಿ

ಶ್ರೀಗುರೂಜಿಯವರ ಸಂದರ್ಶನಕ್ಕೆಂದು ಬಂದ 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯ ಆಗಿನ ಸಂಪಾದಕ ಖುಶವಂತಸಿಂಗ್, ಅವರ ಮುಂದೆ ಪ್ರಶ್ನೆ ಕೇಳುವುದನ್ನೂ ಮರೆತು ಮಂತ್ರಮುಗ್ಧರಂತೆ ಕುಳಿತಿದ್ದರು. ನಂತರ "ಅವರ ಮುಂದೆ ನನಗೆ ಏನೂ ಹೇಳಲು ಬರಲಿಲ್ಲ. ನಾನೊಬ್ಬ ಮುಗ್ಧ ಸರದಾರ್‌ಜೀ ಆದುದರಿಂದ ಅವರು ಹೇಳಿದ್ದನ್ನೆಲ್ಲ ಕೇಳುತ್ತಾ ಕುಳಿತೆ ಎಂದು ಕಾಣುತ್ತದೆ" ಎಂದು ತಮ್ಮ ಲೇಖನದಲ್ಲಿ ಬರೆದರು. ಅಕಾಲ್‌ತಖ್ತನ ಜತೆದಾರ ಸಂತೋಷಸಿಂಗ್ 'ಶ್ರೀಗುರೂಜಿಯವರೊಡನೆ ಮಾತನಾಡುತ್ತಿದ್ದಾಗ ಸಿಖ್ ಮತ್ತು ಹಿಂದು ಎನ್ನುವ ವ್ಯತ್ಯಾಸವೇ ನಮಗೆ ಮರೆತುಹೋಗಿತ್ತು" ಎಂದರು. ಸಂವಿಧಾನ ಸಭೆಯಲ್ಲಿ ಹಿಂದಿಯನ್ನು ರಾಷ್ಟ್ರಭಾಷೆಯೆಂದು ಒಪ್ಪುವುದನ್ನು ವಿರೋಧಿಸಿದ್ದ ಆರ್.ಕೆ. ಷಣ್ಮುಗಂ ಚೆಟ್ಟಿಯಾರ್ ಅವರು ಮುಂದೊಂದು ಸಾರಿ ಶ್ರೀಗುರೂಜಿಯವರೊಡನೆ ಚರ್ಚಿಸಿದ ನಂತರ "ಹಿಂದಿಯ ಬಗ್ಗೆ ಶ್ರೀಗುರೂಜಿಯವರ ನಿಲುವನ್ನು ಒಪ್ಪುವುದಾದರೆ ನಾನು ಹಿಂದಿಯ ಪರವಾಗಿದ್ದೇನೆ" ಎಂದರು.

ಪುರಿಯ ಪೂಜ್ಯ ಶಂಕರಾಚಾರ್ಯರೊಮ್ಮೆ ಕೇಂದ್ರ ಮಂತ್ರಿಗಳೊಬ್ಬರ ಹೇಳಿಕೆಯನ್ನು ವಿರೋಧಿಸಿದರು. "ವೇದಕಾಲದಲ್ಲಿ ಗೋಮಾಂಸ ಭಕ್ಷಣೆ ಪ್ರಚಲಿತವಾಗಿತ್ತು" ಎನ್ನುವ ಮಂತ್ರಿಗಳ ಮಾತನ್ನು ಕುರಿತು "ಈ ಬಗ್ಗೆ ನನ್ನೊಡನೆ ಒಂದೇ ವೇದಿಕೆಯಲ್ಲಿ ವಾದ ನಡೆಯಲಿ" ಎಂದು ಆಹ್ವಾನಿಸಿದರು. ಇದನ್ನು ಗಮನಿಸಿದ ಶ್ರೀಗುರೂಜಿಯವರು ಪೂಜ್ಯರಿಗೆ ಪತ್ರ ಬರೆದು ಅವರಿಂದ ನಡೆದ ತಪ್ಪನ್ನು ವಿನಯದಿಂದ ವಿವರಿಸಿದರು. "ಆಚಾರ್ಯ ಶಂಕರರು ದೇಶದ ನಾಲ್ಕು ಕಡೆ ಪೀಠಸ್ಥಾಪನೆ ಮಾಡಿದರು. ಎಲ್ಲೇ, ಯಾರಿಗಾದರೂ ಧರ್ಮಜಿಜ್ಞಾಸೆ ಕಂಡಾಗ ಈ ಪೀಠಗಳ ಗುರುಗಳನ್ನು ಕಂಡು ಅದಕ್ಕೆ ಉತ್ತರವನ್ನು ಕಂಡುಕೊಳ್ಳಬೇಕು




ವಿಶ್ವ ಹಿಂದು ಪರಿಷದ್ ಸ್ಥಾಪನಾ ಸಭೆಯಲ್ಲಿ ಪೂಜ್ಯ ಗುರೂಜಿ

ಎಂಬುದು ಅವರ ಉದ್ದೇಶವಾಗಿತ್ತು. ಹಾಗಿರುವಾಗ ತೀರ್ಪು ನೀಡಬೇಕಾದ ನೀವೇ ವಾದಕ್ಕೆ ಇಳಿದರೆ ಅದು ಸರಿಯೇ? ಅದು ತಮ್ಮ ಸ್ಥಾನಕ್ಕೆ ಒಪ್ಪಲಾರದು” ಎಂದು ಶ್ರೀಗುರೂಜಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಸಾಧು ಸಮ್ಮೇಳನವನ್ನು ಉದ್ದೇಶಿಸುತ್ತಾ “ಆತ್ಮೋದ್ಧಾರವನ್ನು ಮಾತ್ರ ಗುರಿಯಾಗಿಟ್ಟುಕೊಳ್ಳುವುದು ಸೂಕ್ತವೇ? ಅದರೊಂದಿಗೆ ಲೋಕೋದ್ಧಾರದ ಲಕ್ಷ್ಯವೂ ಅತಿ ಅವಶ್ಯವಲ್ಲವೇ” ಎಂದು ಸಾಧುವರ್ಯರಿಗೆ ಕರೆ ನೀಡುವಷ್ಟು ಖಚಿತತೆಯ ಆತ್ಮವಿಶ್ವಾಸ ಶ್ರೀಗುರೂಜಿಯವರಿಗಿತ್ತು. ಯಾವುದೋ ಕಾಲಖಂಡದಲ್ಲಿ ಭಾರತದ ಈಶಾನ್ಯ ಪ್ರದೇಶಗಳ ಹಿಂದುಗಳು ಗೋಮಾಂಸವನ್ನು ಆಹಾರವಾಗಿ ಸ್ವೀಕರಿಸುತ್ತಿದ್ದರು. ಆದರೆ ಅವರನ್ನು ಹಿಂದುಗಳಲ್ಲವೆಂದು ಸಾರುವುದರಿಂದ ಆಗಲಿರುವ ಪರಿಣಾಮವನ್ನು ಶ್ರೀಗುರೂಜಿಯವರು ಮನಗಂಡಿದ್ದರು. ಅವರ ಸಮ್ಮೇಳನವೊಂದರಲ್ಲಿ ದ್ವಾರಕಾಪೀಠದ ಶಂಕರಾಚಾರ್ಯರೂ, ಆ ಭಾಗಗಳ ವೈಷ್ಣವಪಂಥಗಳ ಆಚಾರ್ಯರೂ ಭಾಗವಹಿಸಿ “ಐತಿಹಾಸಿಕ ಕಾರಣಗಳಿಂದ ನಡೆದ ಲೋಪಗಳನ್ನು; ತಿದ್ದುವುದರಿಂದಲೇ ಘಟಿಸಿದ ಲೋಪವು ಪರಿಹಾರವಾದಂತೆ” ಎಂದು ಧರ್ಮನಿರ್ಣಯವನ್ನು ನೀಡುವಂತೆ ಮಾಡುವುದರಲ್ಲಿ ಶ್ರೀಗುರೂಜಿಯವರ ಪಾತ್ರ ಮಹತ್ತ್ವದ್ದು.

## ವ್ಯಕ್ತಿತ್ವದ ಔನ್ನತ್ಯ

ತಮ್ಮ ವಿದ್ವತ್ತು, ವಿನಯಗಳಿಂದ ದೇಶದ ಧರ್ಮಗುರುಗಳನ್ನು ಸಮಾಜದ ಅಗತ್ಯಗಳಿಗೆ ಸ್ಪಂದಿಸುವಂತೆ ಮಾಡಿದುದು ಶ್ರೀಗುರೂಜಿಯವರು ದೇಶಕ್ಕೆ ಮಾಡಿದ ಬಹುದೊಡ್ಡ ಉಪಕಾರ. ಹಾಗೆಯೇ ಗುರೂಜಿ ದೇಶದ ರಾಜಕೀಯ ನೇತಾರರಲ್ಲೂ ಪ್ರಸ್ತುತ ಸಮಸ್ಯೆಗಳ ಬಗ್ಗೆ ಅವರಲ್ಲಿ ಸರಿಯಾದ ಅರಿವನ್ನುಂಟು ಮಾಡುತ್ತಿದ್ದರು. ಸರ್ದಾರ್ ಪಟೇಲರೊಮ್ಮೆ ಶ್ರೀಗುರೂಜಿಯವರ ಪತ್ರಕ್ಕೆ ಉತ್ತರಿಸುತ್ತಾ “ಹೌದು ಶತಕಗಳಿಂದ ಸ್ಥಗಿತಗೊಂಡ ಕಾರ್ಯಭಾರದ ವೇಗವನ್ನು ಹೆಚ್ಚಿಸಬೇಕಾಗಿದೆ’ ಎಂಬ ತಮ್ಮ ಮನಸ್ಸಿನ ಆವೇಗವನ್ನು ತೋಡಿಕೊಂಡಿದ್ದರು.



ಶ್ರೀಗುರೂಜಿಯವರು ಕ್ಯಾನ್ಸರ್ ಪೀಡಿತರಾಗಿದ್ದ ಸಮಯ. ಇದನ್ನು ತಿಳಿದ ರಾಜ್ಯಸಭೆಯ ಉಪಾಧ್ಯಕ್ಷರಾದ ಜೋಕಿಂ ಆಳ್ವಾ ವಿದೇಶದಲ್ಲಿ ಶ್ರೀಗುರೂಜಿಯವರ ಚಿಕಿತ್ಸೆಗಾಗಿ ಸರ್ಕಾರದಲ್ಲಿ ಪ್ರಯತ್ನಿಸುವೆ ಎಂದು ದತ್ತೋಪಂತ ಠೇಂಗಡಿಯವರಿಗೆ ತಿಳಿಸಿದರು. ದೆಹಲಿ ವಿಶ್ವವಿದ್ಯಾಲಯದ ಉರ್ದು ಪ್ರಾಧ್ಯಾಪಕ ಡಾ॥ ಝೀಲಾನಿಯವರು ಶ್ರೀಗುರೂಜಿಯವರನ್ನು ದೇಶದ ಆಶಾಕಿರಣವೆಂದೇ ನಂಬಿದ್ದರು. ಯಾರಿಗೂ ಕೂಡಾ ಶ್ರೀಗುರೂಜಿಯವರ ಸಾತ್ವಿಕ ಪ್ರಭಾವದಿಂದ ಆಕರ್ಷಿತರಾಗದೆ ಉಳಿಯಲು ಸಾಧ್ಯವೇ ಇರಲಿಲ್ಲ. ಹಾಗಾಗಿ ತತ್ತ್ವ ಭೇದವನ್ನು ಮರೆತು ಸಂಸತ್ತಿನ ಸದಸ್ಯರಲ್ಲದವರಿಗೆ ಶ್ರದ್ಧಾಂಜಲಿ ನೀಡುವ ಸಂಪ್ರದಾಯವೂ ಪೂಜ್ಯ ಶ್ರೀಗುರೂಜಿಯವರಿಗೆ ನೀಡುವುದರಿಂದ ಪ್ರಾರಂಭವಾಯಿತು.

ವಿರೋಧವು ವ್ಯಕ್ತಿನಿರಪೇಕ್ಷವಾಗಿರಬೇಕು. ತಾತ್ವಿಕ ವಿರೋಧವು ಬುದ್ಧಿಯ ಮಟ್ಟದಲ್ಲಿ ನಿರ್ಧಾರವಾಗುವುದು. ಖಂಡನೆಯಾಗಬೇಕಾದುದು ವಿಚಾರ ಮಾತ್ರ. ಇದನ್ನು ಶ್ರೀಗುರೂಜಿಯವರು ಮನಗಾಣಿಸುತ್ತಲೇ ಬಂದರು. ಸರ್ದಾರ್ ಪಟೇಲರ ಜನ್ಮಶತಾಬ್ದಿಯ

ಸಭೆಯ ವೇದಿಕೆಯಲ್ಲಿ ಮೊದಲಬಾರಿಗೆ ಭೇಟಿಯಾದ ಡಾ॥ ರಾಮಮನೋಹರ ಲೋಹಿಯಾರವರು ವೇದಿಕೆಯಿಂದ ಇಳಿಯುವಾಗ ಆತ್ಮೀಯವಾಗಿ ಶ್ರೀಗುರೂಜಿಯವರ ಕೈಹಿಡಿದುಕೊಂಡೇ ಕೆಳಗಿಳಿದರು. ಆನಂತರವೂ ಮಾತನಾಡುತ್ತಲೇ ಇದ್ದು ಬೀಳ್ಕೊಡುವಾಗ ಆಗಾಗ ಭೇಟಿಯಾಗೋಣ ಎಂದರು, ಲೋಹಿಯಾ. ಅಂದಿನ ದಿನಗಳಲ್ಲಿ ಸಂಘವನ್ನು ತೀವ್ರವಾಗಿ ದ್ವೇಷಿಸುತ್ತಿದ್ದ ಸಮಾಜವಾದಿಗಳ ನಾಯಕರೇನು ಈ ಲೋಹಿಯಾ? ಎನ್ನುವಂತೆ ಅಂದಿನ ದೃಶ್ಯವಿತ್ತು. ಜಬಲಪುರದಲ್ಲಿ ಶ್ರೀಗುರೂಜಿಯವರು ಉಳಿದುಕೊಂಡಿದ್ದುದು ಹಿಂದೆ ತಮ್ಮ ಸಹಪಾಠಿಯಾಗಿದ್ದು ಆಗ ಕಮ್ಯೂನಿಸ್ಟ್ ಮುಖಂಡರಾಗಿದ್ದವರ ಮನೆಯಲ್ಲಿ. ಪ್ರತಾಪಗಡದಲ್ಲಿ ಶಿವಾಜಿ ಮಹಾರಾಜರ ಪ್ರತಿಮೆಯನ್ನು ಅನಾವರಣಗೊಳಿಸಲು ಬರುವ ನೆಹರುರವರ ಆಷಾಢಭೂತಿತನವನ್ನು ವಿರೋಧಿಸಿ ಪ್ರದರ್ಶನ ನಡೆಸಲು ಸಿದ್ಧತೆ ನಡೆಯುತ್ತಿದ್ದುದನ್ನು ಶ್ರೀಗುರೂಜಿ ತಡೆದರು. ನೆಹರುರವರ ಇಂಗ್ಲೆಂಡ್ ಪ್ರವಾಸಕಾಲದಲ್ಲಿ ಅವರ ವಿರುದ್ಧ ನಾಗಾ ವಿದ್ರೋಹಿಗಳು ಅಲ್ಲಿ ನಡೆಸಿದ ಪ್ರದರ್ಶನವನ್ನು ಕೇಳಿ ಶ್ರೀಗುರೂಜಿ ವ್ಯಥಿತರಾಗಿದ್ದರು. ಮಧ್ಯಪ್ರದೇಶದ ಕಾಂಗ್ರೆಸ್ ಮುಖ್ಯಮಂತ್ರಿ ರವಿಶಂಕರ ಶುಕ್ಲಾರನ್ನು ಕ್ರೈಸ್ತರು ತಡೆದುದನ್ನೂ ಶ್ರೀಗುರೂಜಿ ತಪ್ಪು ಎಂದು ಖಂಡಿಸಿದರು. "ನಾವಿಂದು ಐವರಲ್ಲ; ಒಂದು ನೂರ ಐದು ಜನ" ಎನ್ನುವ ಯುಧಿಷ್ಠಿರನ ಮಾತನ್ನು ಶ್ರೀಗುರೂಜಿ ಸದಾ ನೆನಪಿಸುತ್ತಿದ್ದರು.

## ಸಮಾಜದೊಡನೆ ತಾದಾತ್ಮತೆ

ರೂಢಿಯ ಚಿಪ್ಪನ್ನು ಒಡೆದು ಹೃದಯ ಹೃದಯಗಳಲ್ಲಿ ಹುದುಗಿದ ಸಮರಸತೆಯ ಅಂತರ್ಗಂಗೆಯನ್ನು ಚಿಮ್ಮಿಸಿದ ಭಗೀರಥ ಪ್ರಯತ್ನ ಶ್ರೀಗುರೂಜಿಯವರದ್ದು. 1969ರಲ್ಲಿ ನಡೆದ ವಿಶ್ವ ಹಿಂದು ಪರಿಷತ್ತಿನ ಉಡುಪಿಯ ಸಮ್ಮೇಳನದಲ್ಲಿ ಹಿಂದುಧರ್ಮದ ವಿವಿಧ ಪಂಥಗಳ ಆಚಾರ್ಯರು ಹಿಂದುಧರ್ಮದಲ್ಲಿ ಅಸ್ಪೃಶ್ಯತೆಯ ಕಳಂಕಕ್ಕೆ ಸ್ಥಾನವಿಲ್ಲ ಎಂದು ಒಕ್ಕೊರಳಿನಿಂದ ಘೋಷಿಸಿದಾಗ ಶ್ರೀಗುರೂಜಿಯವರು ಆನಂದಭಾಷ್ಪವನ್ನು ಸುರಿಸಿದರು. ಮೇಲೆದ್ದು "ಧರ್ಮಾಚಾರ್ಯರಿಗೆ ಎಲ್ಲರೂ ಸೇರಿ ಕೃತಜ್ಞತೆಯ ಅಭಿನಂದನೆಗಳನ್ನು ಸಲ್ಲಿಸೋಣ" ಎಂದರು. ಮಾನ್ಯ ಯಾದವರಾವ್‌ಜಿ ಜೋಶಿಯವರೊಡನೆ ಒಂದು ಸಂದರ್ಭದಲ್ಲಿ ಮಾತನಾಡುತ್ತ ಉಡುಪಿಯಲ್ಲಿ ಧರ್ಮಾಚಾರ್ಯರು ತೆಗೆದುಕೊಂಡ ಸ್ಮೃತಿನಿರ್ಣಯದ ಆ ಘಟನೆಯೇ ನನ್ನ ಜೀವನದ ಅಪೂರ್ವ ಕ್ಷಣ" ಎಂದು ಹೇಳಿದರು.

ನರ್ಮದೆಯ ದಡದ ಮಹಿಪುರದಲ್ಲಿ ವನವಾಸಿ ಬಂಧುಗಳ ಸಮಾವೇಶವೊಂದು ನಡೆಯಿತು. ಶ್ರೀಗುರೂಜಿಯವರು, ತಮಗಾಗಿ ಮಾಡಿದ ಎಲ್ಲ ವ್ಯವಸ್ಥೆಗಳನ್ನು ಬಿಟ್ಟು ವನವಾಸಿಗಳೊಡನೆ ಉಳಿಯುವ ನಿಶ್ಚಯ ಮಾಡಿದರು. ಸಂಘಶಿಕ್ಷಾವರ್ಗದಲ್ಲೊಮ್ಮೆ ಒಬ್ಬ ಶಿಕ್ಷಾರ್ಥಿಯು ತನಗೆ ಬಡಿಸಲು ಕೊಟ್ಟ ಪಾತ್ರೆಯೊಡನೆ ಮುಜುಗರಪಟ್ಟಂತೆ ಸುಮ್ಮನೆ ನಿಂತುದನ್ನು ಶ್ರೀಗುರೂಜಿ ಕಂಡರು. ತಾವೇ ಎದ್ದು ಅವನ ಕೈಯಿಂದ ಆ ಪಾತ್ರೆಯನ್ನು ತೆಗೆದುಕೊಂಡು ಇಬ್ಬರಿಗೆ ಬಡಿಸಿದರು. ಮುಂದೆ ಅದೇ ರೀತಿ ಬಡಿಸು ಎಂದು ಮತ್ತೆ ಆ ಪಾತ್ರೆಯನ್ನು ಅವನಿಗೆ ಕೊಟ್ಟರು. 'ಉಪೇಕ್ಷಿತ' ವರ್ಗದಿಂದ ಬಂದ ಆ ತರುಣನ ಸಂಕೋಚವೆಲ್ಲ ಮಾಯವಾಯಿತು. ತಮ್ಮ ಆರೋಗ್ಯಕ್ಕಾಗಿ ಹಿತೈಷಿಗಳೊಬ್ಬರು ಕಳುಹಿಸಿದ ಶುದ್ಧ ತುಪ್ಪವು ತಲುಪಿದುದರ ಬಗ್ಗೆ ಕೃತಜ್ಞತೆ ಸಲ್ಲಿಸುತ್ತ "ನನ್ನ ಸುತ್ತ ಇರುವ ಎಷ್ಟೋ ಜನರಿಗೆ ತುಪ್ಪ ಸಿಗದು. ಅವರಿಗಿಲ್ಲದ್ದನ್ನು ಉಪಯೋಗಿಸುವ ಮನಃಸ್ಥಿತಿ ನನ್ನದಲ್ಲ" ಎಂದರು.

ಇಂತಹ ಅಂತಃಕರಣದಾಳದ ಸ್ಪಂದನ ಶ್ರೀಗುರೂಜಿಯವರದ್ದು. ಶಾಸಕೀಯ ಅಧಿಕಾರದ ಬಲದಿಂದ ಬದಲಾವಣೆ ತರುವುದು ಒಂದು ರೀತಿಯಾದರೆ ಸಮಾಜದ ಘಟಕರೂಪೀ ವ್ಯಕ್ತಿ–ವ್ಯಕ್ತಿಗಳ ಸಂಕಲ್ಪಬಲವನ್ನು ಬೆಳೆಸುವುದರ ಮೂಲಕ ಬದಲಾವಣೆಯಾಗುವುದು ಇನ್ನೊಂದು. ಈ ಎಲ್ಲ ವಿಚಾರಗಳಲ್ಲೂ ಸ್ವಂತಿಕೆಯ ನೆಲೆಯಿಂದ ಯೋಚಿಸುವ ವಿಶಿಷ್ಟ ವೈಚಾರಿಕ ರೀತಿಯನ್ನೇ ಶ್ರೀಗುರೂಜಿಯವರು ಸದಾ ನಡೆದು ತೋರಿಸುತ್ತಲೇ ಬಂದರು.

ನಾಗಪುರದ ಕಾಲೇಜಿನಲ್ಲಿ ಓದುತ್ತಿರುವಾಗ ಮಹಾರಾಷ್ಟ್ರ ಪದ್ಧತಿಯ ಔತಣಕೂಟವನ್ನು ವಿದ್ಯಾರ್ಥಿಗಳು ಯೋಜಿಸಿದ್ದರು. ಆದರೆ ಪ್ರಾಧ್ಯಾಪಕರಲ್ಲಿ ಹಲವರು, 'ಆಹ್ವಾನಿತರಲ್ಲಿ ವಿದೇಶೀಯರು ಇರುವಾಗ ನೆಲದಲ್ಲಿ ಕುಳಿತು ಊಟ ಮಾಡುವ ವ್ಯವಸ್ಥೆ ಸರಿಯೆ?' ಎನ್ನುವ ಪ್ರಶ್ನೆಯನ್ನು ಎತ್ತಿದರು. ಆದರೆ ಗೋಳ್ವಲಕರ್ "ಮೊದಲು ಯೋಜಿಸಿರುವ ಹಾಗೆಯೇ ಇರಲಿ" – ಎಂದರು. ಇದರಿಂದ ಮೊದಲು ಪ್ರಿನ್ಸಿಪಾಲರು ಬರಲು ಹಿಂದೇಟು ಹಾಕಿದರೂ, ಬಂದ ನಂತರ ಇಂತಹ ಪದ್ಧತಿಯಲ್ಲಿ ಬೆರೆಯುವುದೇ ವಿಶಿಷ್ಟ ಅನುಭವ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಗುರೂಜಿ, ವಿದ್ಯಾರ್ಥಿ ಜೀವನದಲ್ಲೇ ಈ ನೆಲದ ಸಾಂಸ್ಕೃತಿಕ ವೈಶಿಷ್ಯವನ್ನು ಕಂಡುಕೊಂಡಿದ್ದರು.

ವಿದೇಶದಿಂದ ಮದರಾಸಿನ ಹಿಂದು ಸಮ್ಮೇಳನಕ್ಕೆ ಬರುವ ಅತಿಥಿಗಳಿಗೆಂದು ಊಟಕ್ಕೆ ಮೇಜಿನ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಶ್ರೀಗುರೂಜಿಯವರ ಸಲಹೆಯಂತೆ ಅನಂತರ ಎಲ್ಲರಿಗೂ ಮಾಡಿದ ಸಮಾನ ವ್ಯವಸ್ಥೆಯಲ್ಲಿ ಪಾಲ್ಗೊಂಡು ಅವರೆಲ್ಲರೂ ಹಿಂದು ಪದ್ಧತಿಯಂತೆ ನಡೆದುಕೊಳ್ಳುವ ಅವಕಾಶ ದೊರೆತುದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು. ಬೇರೆಯವರಿಗಾಗಿ ನಮ್ಮತನವನ್ನು ಬಿಡುವುದು ಸಾಧುವಲ್ಲ! ಇದು ಸ್ವಾಭಿಮಾನೀ ಸಮಾಜ ಕಲಿಯಬೇಕಾದ ಮೊದಲ ಪಾಠ.

ಪೂಜ್ಯ ಶ್ರೀಗುರೂಜಿಯವರು ಹಿಂದುತ್ವದ ಮೂಲ ಮಾದರಿಯಾಗಿ ಬದುಕಿದವರು, ದೇಶದ ಸಮಕಾಲೀನ ಸಾಮಾಜಿಕ ರಾಜಕೀಯ ತ್ರಿಶಂಕು ಜವುಗುಭೂಮಿಯಲ್ಲಿ ನಿಂತ ದೀಪಸ್ತಂಭ ಅವರು. ಸಮಾಜದಲ್ಲಿ ಭಾಷೆ, ರೂಢಿ, ಸಂಪ್ರದಾಯ, ರಾಜಕೀಯ ಗುಂಪು ಇಂಥ ಯಾವುದೇ ಕಾರಣದಿಂದಲೂ ಸಾಮರಸ್ಯವು ಕೆಡಬಾರದು" ಎಂದು ಸದಾ ಚಿಂತಿಸಿದವರು. ದಕ್ಷಿಣದ ಭಾಷೆಗಳೆಂದರೆ ಖಾಲಿ ಡಬ್ಬದೊಳಗೆ ಕೆಲವೊಂದು ಕಲ್ಲುಗಳನ್ನು ಹಾಕಿ ಅಲುಗಾಡಿಸಿದರೆ ಬರುವ ಶಬ್ದದಂತೆ ಎಂದು ಮರಾಠಿ ಕವಿ ರಾಮಗಣೇಶ ಗಡಕರಿಯವರು ಹೇಳಿದಾಗ, "ಭಾರತೀಯ ಭಾಷೆಗಳು ಯಾವುದೇ ಇರಲಿ ಅವೆಲ್ಲ ರಾಷ್ಟ್ರಭಾಷೆಗಳೆ, ಅವನ್ನು ಅಪಹಾಸ್ಯ ಮಾಡುವುದು ತಪ್ಪು" ಎಂದು ಶ್ರೀಗುರೂಜಿ ಹೇಳಿದರು. ಡಾ॥ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು "ಹಿಂದಿಯಲ್ಲಿರುವ ಬೃಹತ್ ಕೃತಿಗಳೆಂದರೆ ಒಂದು ತುಳಸಿ ರಾಮಾಯಣ, ಇನ್ನೊಂದು ರೈಲ್ವೇ ಟೈಮ್‌ಟೇಬಲ್" ಎಂದಾಗ, "ಇಂತಹ ಹಗುರ ಮಾತುಗಳು ಅಕ್ಷರಸ್ಥರು ಎಂದು ಕೊಂಡವರು ಅಜ್ಞಾನದಿಂದ ಹೇಳುವ ಮಾತುಗಳು" ಎಂದು ಗುರೂಜಿಯವರು ಪ್ರತಿಕ್ರಿಯಿಸಿದರು.

## ದೂರದೃಷ್ಟಿ

ಶ್ರೀಗುರೂಜಿಯವರ ಅಂತರ್ದೃಷ್ಟಿ ಆಶ್ಚರ್ಯಕರವಾದುದು. ಪ್ರಾಚೀನ ಋಷಿಗಳು ಸಾಕ್ಷಾತ್ಕರಿಸಿದ ದರ್ಶನಗಳು ಸಾರ್ವಕಾಲಿಕವಾದ ಬಗೆಯಂತೆ ಅವರ ವಿಚಾರಗಳಿದ್ದವು.

ಮಿತಿಯಿಲ್ಲದೆ ಕೊರೆದ ಕೊಳವೆಬಾವಿಗಳಿಂದ ಭೂಮಿಯ ಅಂತರ್ಜಲದ ಮಟ್ಟ ಕುಸಿಯುತ್ತದೆ ಎಂದು 1951ರಷ್ಟು ಹಿಂದೆಯೇ ಅವರು ಹೇಳಿದರು. ಭಿಲಾಯಿಯನಲ್ಲಿ ಉಕ್ಕಿನ ಕಾರ್ಖಾನೆಯನ್ನು ನಿರ್ಮಿಸಲು ಹೊರಟಾಗ, 30 ಮೈಲುಗಳ ದೂರ ಅದುರು ಎತ್ತುವ ಜಾಗದಲ್ಲಿ ಕಾರ್ಖಾನೆಯನ್ನು ಮಾಡದೆ 100 ಚದರಮೈಲುಗಳಷ್ಟು ಅಕ್ಕಿ ಬೆಳೆಯುವ ಪ್ರದೇಶವನ್ನು ಅದಕ್ಕಾಗಿ ವ್ಯಯಿಸುವುದರ ಬಗ್ಗೆ ಅವರು ವಿಮರ್ಶಿಸಿದ್ದರು. ಹಿಂದೆ ನಗರಗಳನ್ನು ಫಲವತ್ತಾಗಿರದ ಪ್ರದೇಶಗಳಲ್ಲಿ ಕಟ್ಟುತ್ತಿದ್ದರು. ಆದುದರಿಂದ ಅದರ ಎಲ್ಲೆಗಳನ್ನು ಈಗ ಬೆಳೆಸುತ್ತಿರುವುದು ತಪ್ಪು – ಎಂದು ನಾಗಪುರದ ಉದಾಹರಣೆ ನೀಡುತ್ತಿದ್ದರು. ನಾಗಪುರ ಹಿಂದೆ ಅಂತಹ ಪ್ರದೇಶದಲ್ಲಿತ್ತು. ಆದರೆ ಈಗ ಬೆಳೆಯುತ್ತ ಹೊಲಗಳನ್ನು ಕಬಳಿಸುತ್ತಾ ಹೋಗುತ್ತಿದೆ – ಎನ್ನುತ್ತಿದ್ದರು. ಸಗಣಿ, ಹಸಿರೆಲೆ ಗೊಬ್ಬರ ಮತ್ತು ಮಣ್ಣಿನ ಸತ್ತ್ವದ ಬಗ್ಗೆ 1960ರಲ್ಲಿ ಶ್ರೀಗುರೂಜಿ ಹೇಳುತ್ತಿದ್ದರು. 1967ರಲ್ಲಿ ಮಾತನಾಡುತ್ತ ಪಾಟಲಿಪುತ್ರ ಮತ್ತು ದೆಹಲಿಯನ್ನು ಬಿಟ್ಟರೆ ಭಾರತದ ಉಳಿದ ಚರಿತ್ರೆಯೇ ಪಾಠದಲ್ಲಿ ಇಲ್ಲ ಎನ್ನುತ್ತ, ಚೋಳ, ಪಾಂಡ್ಯ, ಪುಲಿಕೇಶಿ, ಖಾರವೇಲರ ಸಾಹಸೀ ಅಧ್ಯಾಯಗಳು ಇಲ್ಲವೇಕೆ? ಎನ್ನುತ್ತಿದ್ದರು. ಒಬ್ಬ ಪ್ರವಾದಿ, ಒಂದು ಪುಸ್ತಕ ಮತ್ತು ಜಿಹಾದಿನಂತೆ ಕಮ್ಯೂನಿಸಂ ಕೂಡಾ ಅದೇ ಮನೋಭಾವದ್ದು ಎಂದು ಎಚ್ಚರಿಸಿದ್ದರು.

ನಮ್ಮದು ಡೈನಮಿಕ್ ನ್ಯೂಟ್ರಾಲಿಟಿ ಎಂದು ಭಾರತದ ವಿದೇಶನೀತಿಯನ್ನು ಹೊಗಳುತ್ತಿದ್ದರೆ, "ಹೌದು, ಅದು ಫುಟ್‌ಬಾಲ್‌ನಂತೆ! ಒಂದು ಕಡೆಯಿಂದ ಒದ್ದಾಗ ಇನ್ನೊಂದು ಕಡೆ ಹೋಗುವಂತೆ ಡೈನಾಮಿಕ್" ಎಂದರು. ಕಾಮನ್‌ವೆಲ್ತ್ ಸಂಬಂಧವೆಂದರೆ ನಮ್ಮದು ಭಾವನಾತ್ಮಕ ಸಂಬಂಧವೆಂದು ವರ್ಣಿಸುತ್ತಿದ್ದರೆ "ಅದು ಕತ್ತೆಗೂ ಅದರ ಯಜಮಾನನಿಗೂ ಇರುವ ಭಾವನಾತ್ಮಕ ಸಂಬಂಧದಂತೆ: ಹೊರೆ ಹೊರುವಾಗ ಬಿಟ್ಟು ನಂತರ ತಾನೇ ಮೇಯುತ್ತ ಹೊಟ್ಟೆಹೊರೆಯುವ ಸ್ವಾತಂತ್ರ್ಯ ಕತ್ತೆಗಿದ್ದಂತೆ" ಎಂದು ವ್ಯಾಖ್ಯಾನ ಮಾಡಿದರು. ಕೇಂದ್ರಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕೆಂಬುದು ನಿಮ್ಮ ಭಾವನೆಯೆ? – ಎಂದು ಕೇಳಿದಾಗ, "ಅಲ್ಲ, ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರದ ಅಗತ್ಯವಿದೆ" ಎಂದಿದ್ದರು.

1949ರಲ್ಲಿಯೇ, ಕಾಶ್ಮೀರದಲ್ಲಿ ಜನಮತಗಣನೆ ಆಗುವುದಲ್ಲ, ಆ ಬಗ್ಗೆ ಇಡೀ ದೇಶದಲ್ಲಿ ಜನಮತವನ್ನು ಕೇಳಬೇಕು ಎನ್ನುವ ವಾದ ನಮ್ಮದಾಗಬೇಕು – ಎಂದಿದ್ದರು. ತೆಲಂಗಾಣಾ ಪ್ರತ್ಯೇಕ ಪ್ರಾಂತ ಆದರೇನು ತಪ್ಪು ಎಂದರು. 'ನಮ್ಮದು ಪಂಜಾಬಿ ಭಾಷೆ ಎಂದು ಬರೆಸಿ, ಗುರುಮುಖಿ ಲಿಪಿಯನ್ನು ಉಪಯೋಗಿಸಿ' ಎಂದುದಕ್ಕೆ ಜೊತೆಗಾರರು ಅಪಸ್ವರ ಎತ್ತಿದರೂ ಪಂಜಾಬಿನ ಜನರಿಗೆ ಶ್ರೀಗುರೂಜಿ ಹಾಗೆಯೇ ಸಲಹೆ ನೀಡಿದ್ದರು. ಹಾಗೆ ನಡೆದಿದ್ದರೆ ಬಹಳಷ್ಟು ಅನಾಹುತಗಳು ತಪ್ಪುತ್ತಿದ್ದವೇನೋ. ಬಾಂಗ್ಲಾದೇಶದ ನಿರ್ಮಾಣವಾದಾಗ ಪಾಕಿಸ್ತಾನ ಇಬ್ಭಾಗವಾಯಿತಲ್ಲ ಎಂದು ಸಂತೋಷಪಟ್ಟವರಿದ್ದರು. ಆದರೆ ಹಿಂದೆ ವಿಜಾಪುರವು ಐದು ಹೋಳಾದ ಮೇಲೂ ವಿಜಯನಗರವನ್ನು ಅವು ಮತ್ತೆ ಒಂದಾಗಿ ಆಕ್ರಮಿಸಿದ ನೆನಪು ನಮ್ಮನ್ನು ಎಚ್ಚರಿಸುತ್ತಿರಬೇಕು ಎಂದು ಹೇಳಿದರು. ಚೀನಾದ ಹುಟ್ಟುಗುಣವೇ ಮಹತ್ವಾಕಾಂಕ್ಷಿ ಎಂದು ಅವರು ಎಚ್ಚರಿಸಿದಾಗಲೂ, ಟಿಬೇಟನ್ನು ಚೀನಾಕ್ಕೆ ಒಪ್ಪಿಸಿದಾಗ ತಪ್ಪು ಅದು ಎಂದಾಗಲೂ ಶ್ರೀಗುರೂಜಿಯವರನ್ನು ಯುದ್ಧಪಿಪಾಸು ಎಂದು ಕೆಲವರು ಕರೆದಿದ್ದರು.

## ಸಮರ್ಪಣಭಾವ

1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಜಯಗಳಿಸಿತ್ತು. ಸಂಘದ ಸ್ವಯಂಸೇವಕರನೇಕರಿಗೆ ನಿರಾಶೆಯಾಗಿತ್ತು. ಶ್ರೀಗುರೂಜಿಯವರು ಮಾತ್ರ ಆ ಸಮಯದಲ್ಲಿ ಸಿಂಹಗಡದಲ್ಲಿ ಹಿರಿಯ ಕಾರ್ಯಕರ್ತರೊಂದಿಗೆ ಭಗವದ್ಗೀತೆಯ ಅಧ್ಯಯನದಲ್ಲಿ ತೊಡಗಿದ್ದರು. ವೈಚಾರಿಕ ಮನಸ್ಸು ತನ್ನ ಸುತ್ತಲೂ ಒಂದು ಪರಿಧಿಯಲ್ಲಿ ಬೇಲಿಯನ್ನು ನಿರ್ಮಿಸಿ ಯಾರನ್ನೂ ಅದರೊಳಗೆ ಬರಲು ಬಿಡದು. ಅಂತಹ ಗುರೂಜಿಯವರ ಮನಸ್ಸನ್ನು ಡಾಕ್ಟರ್‌ಜೀ ಪ್ರವೇಶಿಸಲು ಸಾಧ್ಯವಾದುದೆಂತು? ಅದಾದ ನಂತರ "ಯಾರು ತಂದೆಯಾಗಿ, ತಾಯಿಯಾಗಿ, ಬಂಧುವಾಗಿ, ಗೆಳೆಯನಾಗಿ, ಗುರುವಾಗಿ, ನಾಯಕನಾಗಿ ಪ್ರತಿಯೊಬ್ಬ ಸ್ವಯಂಸೇವಕನ ಬದುಕಿನಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿದ್ದರೋ, ಯಾವ ವ್ಯಕ್ತಿಯ ಕಡೆ ಎಲ್ಲರ ಅಂತಃಕರಣಗಳು ಆಕರ್ಷಿತವಾಗಿದ್ದವೋ, ಯಾರ ಬಗ್ಗೆ ಎಲ್ಲರ ಹೃದಯದಲ್ಲಿ ಕೊನೆಮೊದಲಿಲ್ಲದ ನಿಷ್ಠೆ ಇತ್ತೋ ಹಾಗೂ ಅದೇ ನಿಷ್ಠೆ ಮುಂದೆಯೂ ಉಳಿಯುವುದೋ..." – ಎಂದು ಡಾಕ್ಟರ್‌ಜೀಯವರ ಬಗ್ಗೆ ಒಂದು ಪತ್ರದಲ್ಲಿ ಬರೆಯುವ ಹಂತಕ್ಕೆ ಮುಟ್ಟಿದರು. ಈ ಪತ್ರದ ಅಕ್ಷರಗಳಂತೆ ಶ್ರೀಗುರೂಜಿಯವರ ಬಗ್ಗೆ ಸ್ವಯಂಸೇವಕರ ಭಾವನೆಯೂ ಹಾಗೆಯೇ ಇದೆ ಎನ್ನುವುದು ಕೂಡಾ ಅಕ್ಷರ ಸತ್ಯ. ■

## ವಿದ್ಯೆಯೆಂಬ ಆಸ್ತಿ

ವಿದ್ಯೆಯೆಂಬುದು ಸ್ವಯಾರ್ಜಿತ ಆಸ್ತಿಯಾಗಬೇಕೇ ವಿನಾ ಹೆತ್ತವರು ಉಯಿಲು ಬರೆದಿಡಬೇಕಾದ್ದಲ್ಲವಲ್ಲ? ಅರ್ಥವಿಲ್ಲದ ಅಹಂಕಾರದ ಬದಲು ವಿನಯವನ್ನು ಮೈಗೂಡಿಸಿಕೊಳ್ಳುವುದನ್ನು ಮೊದಲು ಕಲಿಸಬೇಕಿದೆ. ಶಿಕ್ಷಣಕ್ಷೇತ್ರದ ಮುಂದಿನ ಸ್ವರೂಪವೇನಿರಬಹುದು ಎಂದು ಯೋಚಿಸಿದರೆ ನಿಜಕ್ಕೂ ದಿಗಿಲಾಗುತ್ತದೆ. ಒಂದೇ ಮಗುವೆಂಬ ಕಾರಣಕ್ಕೆ ಪೋಷಕರು ತೋರುವ ಅತಿಯಾದ ಪ್ರೀತಿ ಮುಚ್ಚಟೆಗಳು ಮಕ್ಕಳನ್ನು ಈ ರೀತಿಯಾಗಿ ರೂಪಿಸುತ್ತವೆಯೆ? ಮನೆಯೊಳಗಿನ ಶ್ರೀಮಂತಿಕೆ ಮನದೊಳಗೂ ಬೆಳೆಯಬೇಕು ಎಂಬುದನ್ನು ಕಲಿಸುವಲ್ಲಿ ಎಡವುತ್ತಿದ್ದೇವೆಯೆ? ನಾವು ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕಾಗಿ, ಆವಶ್ಯಕ ವಸ್ತುಗಳಿಗಾಗಿ ಕಷ್ಟಪಟ್ಟಂತೆ ನಮ್ಮ ಮಕ್ಕಳು ಕಷ್ಟಪಡಬಾರದು ಎಂದು ನಮ್ಮ ಕಾಳಜಿಯೇ ಅವರನ್ನು ಬಹುತೇಕ ಜವಾಬ್ದಾರಿ ರಹಿತರನ್ನಾಗಿ ಮಾಡುತ್ತಿದೆ ಎಂದರೂ ತಪ್ಪಾಗಲಾರದೇನೋ. ಮೈಲುಗಟ್ಟಲೆ ನಡೆದು ಶಾಲೆಗೆ ಹೋಗಿ ಬಂದು, ಮನೆಗೆಲಸಗಳಲ್ಲಿ ಭಾಗಿಯಾಗುವ ಹೊಣೆಯನ್ನೂ ಹೊತ್ತುಕೊಂಡು ಓದು ಬರವಣಿಗೆಗಾಗಿ ಸಮಯ ಹೊಂದಿಸಿಕೊಳ್ಳಬೇಕಾಗಿದ್ದ ನಮ್ಮ ತಲೆಮಾರಿನವರಿಗೂ ಮನೆಯಂಗಳದಿಂದಲೇ ಸ್ಕೂಟರಿನಲ್ಲಿ ಭರ್ರನೆ ಕಾಲೇಜಿಗೆ ದೌಡಾಯಿಸುವ, ಅಂಕಗಳನ್ನಷ್ಟೇ ಬೆಂಬತ್ತಿ ನಡೆಯುವ ಇಂದಿನ ತಲೆಮಾರಿಗೂ ಅಜಗಜಾಂತರ. ಆದರೆ ನಮ್ಮ ಶಿಕ್ಷಣವೇನು ಎಂಬುದಕ್ಕೆ ಕನ್ನಡಿಯಾಗಬೇಕಾದದ್ದು ನಮ್ಮ ವರ್ತನೆ ಎಂಬುದನ್ನು ಅವರಿಗೆ ಅರ್ಥ ಮಾಡಿಸದ ಶಿಕ್ಷಣದ ಸಾರ್ಥಕ್ಯವೇನು?

# ನಿಮ್ಮ ಹೇಳಿಕೆಯ ಪರಿಣಾಮದ ಅರಿವು ನಿಮಗಿರಬೇಕು
## ಸರ್ವೋಚ್ಚ ನ್ಯಾಯಾಲಯ



"ನಿಮ್ಮ ಮಾತಿನ ಪರಿಣಾಮವೇನೆಂದು ನಿಮಗೆ ಗೊತ್ತಿದೆಯೇ? ನೀವೊಬ್ಬ ಸಾಮಾನ್ಯ ವ್ಯಕ್ತಿಯಲ್ಲ. ಒಬ್ಬ ಸಚಿವರಾಗಿ ನಿಮಗೆ ನಿಮ್ಮ ಹೇಳಿಕೆಯ ಪರಿಣಾಮವೇನೆಂಬುದು ನಿಮಗೆ ಅರಿವಿರಬೇಕು!"

ತಮ್ಮ ವಿರುದ್ಧ ಹಲವು ಉಚ್ಚ ನ್ಯಾಯಾಲಯಗಳಲ್ಲಿ ಹೂಡಿದ ಎಫ್.ಐ.ಆರ್ ಅರ್ಜಿಗಳನ್ನು ಒಟ್ಟಾಗಿಸಿ; ಸರ್ವೋಚ್ಚ ನ್ಯಾಯಾಲಯದಲ್ಲಿ ಅವುಗಳ ವಿಚಾರಣೆಯಾಗಬೇಕೆಂದು ತಮಿಳುನಾಡಿನ ಮಂತ್ರಿಯೂ ಮತ್ತು ಅಲ್ಲಿಯ ಮುಖ್ಯಮಂತ್ರಿ ಸ್ಟಾಲಿನ್ ಮಗನೂ ಆಗಿರುವ ಉದಯನಿಧಿ ಸ್ಟಾಲಿನ್ ಮಾಡಿದ ಈ ಅಹವಾಲಿನ ಅಂಗೀಕಾರದ ಹಂತದಲ್ಲೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಸಂಜೀವ ಖನ್ನಾ ಮತ್ತು ದೀಪಂಕರ ದತ್ತಾರವರು ಉದಯನಿಧಿಗೆ ಕೇಳಿದ ಪ್ರಶ್ನೆಗಳಿವು.

ಉದಯನಿಧಿ ಸ್ಟಾಲಿನ್ ಪರವಾಗಿ ವಾದಿಸುತ್ತಿದ್ದ ಅಭಿಷೇಕ್ ಮನು ಸಿಂಘ್ವಿಯವರ ವಾದದ ಸರಣಿಯು ಕೂಡಾ ಉದ್ಧಟತನದ ಶೈಲಿಯಲ್ಲೇ ಇದ್ದಿತು. ಅವರ ಕಕ್ಷಿದಾರರಾದ ಸ್ಟಾಲಿನರು ಸಾರ್ವಜನಿಕ ಹೇಳಿಕೆಯಲ್ಲಿ ಸನಾತನ ಧರ್ಮವೆಂದರೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ವಿರುದ್ಧವಾದುದು. ಅದನ್ನು ಡೆಂಗ್ಯೂ, ಮಲೇರಿಯಾಗಳನ್ನು ನಿರ್ಮೂಲ ಮಾಡುವಂತೆ ನಾಶಪಡಿಸಬೇಕು ಎಂದಿದ್ದರು. ಈ ರೀತಿಯಲ್ಲಿ ಮಾತನಾಡುತ್ತ ತನ್ನ ವಾಕ್ ಸ್ವಾತಂತ್ರ್ಯದ ಹಕ್ಕನ್ನು ದುರುಪಯೋಗಗೊಳಿಸಿದ ಈ ಸ್ಟಾಲಿನ್ ಸರ್ವೋಚ್ಚ ನ್ಯಾಯಾಲದ ಮುಂದೆ "ನನಗೆ ಈ ಪ್ರಕರಣದಲ್ಲಿ ಕಾನೂನಿನ ನ್ಯಾಯ ನನ್ನ ಪರವಾಗಿದೆಯೇ ಅಥವಾ ವಿರುದ್ಧವಾಗಿಯೇ ಎನ್ನುವುದರಲ್ಲಿ ಆಸಕ್ತಿಯಿಲ್ಲ. ಈ ಪ್ರಕರಣದ ವಿಚಾರಣೆ ನಡೆಯಬೇಕು. ಅದು ಸರ್ವೋಚ್ಚ ನ್ಯಾಯಾಲಯದಲ್ಲಿ ನಡೆಯಲಿ. ಹಾಗೆ ನಡೆಯದಿದ್ದರೆ ಈ ಹಲವು

ಎಫ್. ಐ. ಆರ್ (F. I. R) ಗಳ ವಿಚಾರಣೆ ಹಲವು ನ್ಯಾಯಾಲಯಗಳಲ್ಲಿ ನಡೆದು ಅಲ್ಲೆಲ್ಲಾ ಹಾಜರಾಗಬೇಕಾಗುವುದರಿಂದ ವಿಚಾರಣೆಗೆ ಮೊದಲೇ ನನಗೆ ಚಿತ್ರಹಿಂಸೆ ಕೊಟ್ಟಂತೆ ಆಗುತ್ತದೆ” ಎಂದು ವಾದಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಪೀಠದ ನ್ಯಾಯಮೂರ್ತಿಗಳು” ನಿಮಗೆ ಈ ವಿಚಾರಣೆಗಾಗಿ ಎಲ್ಲಾ ಕಡೆ ಹೋಗಲು ಸಾಧ್ಯವಿಲ್ಲವೆಂದಾದರೆ; ಕಾಶ್ಮೀರದಿಂದ ಸಾಕ್ಷಿ ನೀಡುವ ವ್ಯಕ್ತಿಯೊಬ್ಬನು ತನ್ನ ನ್ಯಾಯಾಲಯವನ್ನು ಬಿಟ್ಟು ತಮಿಳು ನಾಡಿಗೆ ಬರಬೇಕೇ?’ ಎಂದು ಕೇಳಿದರು. “ನೀವು ವಾಕ್ ಸ್ವಾತಂತ್ರ್ಯದ 19(1) A, ವಿವೇಚನಾ ಸ್ವಾತಂತ್ರ್ಯ ಅನುಚ್ಛೇದ 25, ಅನುಚ್ಛೇದ 32 A ನ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಚಲಾಯಿಸಲು ಸರ್ವೋಚ್ಚ ನ್ಯಾಯಾಲಯಕ್ಕೆ ನೇರವಾಗಿ ಬಂದುದು ವಾಕ್ ಸ್ವಾತಂತ್ರ್ಯದ ಹಕ್ಕಿನ ದುರುಪಯೋಗ ಮಾಡುವಂತೆ ಕಾಣುವುದಿಲ್ಲವೇ” ಎಂದು ಕೂಡಾ ಪ್ರಶ್ನಿಸಿದರು.



ಈ ಮೊದಲು 06.03.24ರಂದು ಮದ್ರಾಸ್ ಉಚ್ಚ ನ್ಯಾಯಾಲಯವು ತಮಿಳುನಾಡಿನ ಯುವ ಮತ್ತು ಕ್ರೀಡಾ ಅಭಿವೃದ್ಧಿ ಮಂತ್ರಿ ಉದಯನಿಧಿ ಸ್ಟಾಲಿನ್ ಮತ್ತು ನೀಲಗಿರಿಯ ಸಂಸದ ಎ. ರಾಜಾರವರ ಹೇಳಿಕೆಗಳ ವಿರುದ್ಧ ವಿಚಾರಣೆ ನಡೆಸಿ ತನ್ನ ತೀರ್ಪನ್ನು ನೀಡಿತು. ಅವರಿಬ್ಬರ ಹೇಳಿಕೆಗಳು “ಪೂರ್ಣ ತಪ್ಪು ಮಾಹಿತಿಗಳ, ಸಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿರುವ, ವಿಭಜಕ ಮನಸ್ಸು” ಎಂದು ಈ ತೀರ್ಪು ಉಲ್ಲೇಖಿಸಿತು. ಈ ಇಬ್ಬರು ಡಿ.ಎಂ.ಕೆ ಶಾಸಕರನ್ನು ಅನರ್ಹಗೊಳಿಸಬೇಕೆನ್ನುವ ಮನವಿಯ ಬಗ್ಗೆ ತೀರ್ಪುನೀಡುತ್ತ ‘ಈ ಮನವಿಯು ಅಕಾಲಿಕವಾದುದು. ಇನ್ನೂ ಶಿಕ್ಷೆಗೊಳಪಡದೆ ಇರುವುದರಿಂದ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗದು’ ಎಂದು ನ್ಯಾಯಮೂರ್ತಿ ಅನಿತಾ ಸುಮಂತರವರು ಅಭಿಪ್ರಾಯ ಪಟ್ಟರು. “ಸನಾತನ ಧರ್ಮವೆಂದರೆ ಹೆಚ್. ಐ. ವಿ, ಏಡ್ಸ್, ಕುಷ್ಠರೋಗ ಮಲೇರಿಯಾ, ಕೋರೋನಾ ಎಂದು ಕರೆಯುವುದು ಹಿಂದುತ್ವದ ಬಗ್ಗೆ ಅರ್ಥಮಾಡಿಕೊಳ್ಳುವಲ್ಲಿ ಇರುವ ಅವರ ಅಜ್ಞಾನ. ಆಡುವ ಮಾತು ಐತಿಹಾಸಿಕ ತಥ್ಯವಾಗಿರಬೇಕು. ಅದರಲ್ಲಿ ಔಚಿತ್ಯ ಜ್ಞಾನವಿರಬೇಕು. ವೈಚಾರಿಕ ಭಿನ್ನಾಭಿಪ್ರಾಯಗಳನ್ನು ಅಧಿಕಾರದಲ್ಲಿರುವವರು ಹೊಂದಿಸಿಕೊಂಡು ಹೋಗಬೇಕು. ಅಧ್ಯಯನದ ಮೂಲಕ ಅವುಗಳನ್ನು ಅರಿತಿರಬೇಕು. ಅಭಿಪ್ರಾಯಗಳು ಧನಾತ್ಮಕವಾಗಿರಬೇಕು. ಸಂವಿಧಾನಕ್ಕೆ, ನೈತಿಕತೆಯ ಆಶಯಗಳಿಗೆ ತಕ್ಕುದಾಗಿರಬೇಕು” ಎನ್ನುವ ಸಲಹೆಯನ್ನು ನ್ಯಾಯಮೂರ್ತಿ ಅನಿತಾ ಸುಮಂತ್ ಈ ರಾಜಕಾರಣಿಗಳಿಗೆ ನೀಡಿದರು. ■

ವಿಶ್ವ ಹಿಂದು ಪರಿಷದ್ ಮಾಹಿತಿ ಮತ್ತು ಹಿಂದುವಾಣಿ epaper
www.vhp.org



# ಆಚಾರ್ಯ ಚಾಣಕ್ಯ

**ಸಂಗ್ರಹ: ವಿ.ಸಿ. ಶೇಖರ್, ಬೆಂಗಳೂರು**

ಆಪತ್ಕಾಲದಲ್ಲಿ ಅಗೋಚರ ಬುದ್ಧಿಯನ್ನು ಉಪಯೋಗಿಸಿ ತನ್ನ ಕೆಲಸವನ್ನು ಸಾಧಿಸುವ ಕಲೆಗೆ ಚಾಣಕ್ಯ ನೀತಿ ಎಂಬ ವಾಡಿಕೆಯಿದೆ. ಚಾಣಕ್ಯ ಒಬ್ಬ ಇತಿಹಾಸ ಪುರುಷ. ಎಂದೂ ರಾಜ್ಯ ಆಳಿದವನಲ್ಲ, ರಾಜನಾಗಿ ಮೆರೆದವನಲ್ಲ. ರಾಜನನ್ನು ಸೃಷ್ಟಿಸಿ ರಾಜ್ಯಗಳನ್ನು ಕಟ್ಟುವ ಕೆಲಸ ಮಾಡಿ ನಿಸ್ವಾರ್ಥ ರಾಜಕಾರಣಿಯಾಗಿ ಪ್ರಖ್ಯಾತ ಪುರುಷನಾದವನು. ಭಾರತ ಇತಿಹಾಸದ ಮೇರು ಚಕ್ರಾಧಿಪತ್ಯಕ್ಕೆ ಕಾರಣಕರ್ತನೇ ಚಾಣಕ್ಯ. ಅನೇಕ ರಾಜರುಗಳನ್ನು ಸೋಲಿಸಿ ವಿಶಾಲವಾದ ಸಾಮ್ರಾಜ್ಯ ನಿರ್ಮಾಣ ಮಾಡಿ ತಾನು ಮಾತ್ರ ನಿರ್ಲಿಪ್ತನಾಗಿದ್ದುಕೊಂಡು ವೈರಾಗ್ಯ ಜೀವನ ನಡೆಸಿದ ವ್ಯಕ್ತಿ ಚಾಣಕ್ಯ.

ಚಾಣಕ್ಯನಿಗೆ ಬಾಲ್ಯದಲ್ಲಿಯೇ ವೇದ ವೇದಾಂಗಗಳನ್ನು ಕಲಿಸಿದ್ದರು. ಅತ್ಯಂತ ಸೂಕ್ಷ್ಮಮತಿ, ಪ್ರಾಜ್ಞ, ಹಿಡಿದ ಕೆಲಸವನ್ನು ಪಟ್ಟು ಹಿಡಿದು ಹೇಗೆ ಸಾಧಿಸಬೇಕೆಂಬುದು ಅವನಿಗೆ ಬಾಲ್ಯದಲ್ಲಿಯೇ ಅಭ್ಯಾಸವಾಯಿತು. ಈ ಬಗೆಯ ತಳಹದಿ ಚಾಣಕ್ಯನನ್ನು ಅತ್ಯಂತ ವೈಚಾರಿಕ ವ್ಯಕ್ತಿಯನ್ನಾಗಿ ರೂಪಿಸಿತು. ತಂದೆಯ ಪ್ರೋತ್ಸಾಹದಿಂದ ತತ್ವ ಶಾಸ್ತ್ರಗಳ ಪರಿಪೂರ್ಣ ಜ್ಞಾನವನ್ನು ಪಡೆದನು. ರಾಜ್ಯಶಾಸ್ತ್ರ, ಲೋಕವಿಜ್ಞಾನ, ಮಂತ್ರ, ಔಷಧ ವಿದ್ಯೆ ವಶೀಕರಣ, ರಸವಿದ್ಯೆ, ಅರ್ಥಶಾಸ್ತ್ರಗಳಲ್ಲಿ ಪರಿಣತಿ ಪಡೆದನು.

ರಾಜಕೀಯದಲ್ಲಿ ಕುಟಿಲ ನೀತಿಯನ್ನು ಉಪಯೋಗಿಸಿ ತನ್ನ ಕಡೆಯವರನ್ನು ವಿರೋಧ ಪಕ್ಷದಲ್ಲಿ ನುಸುಳುವಂತೆ ಮಾಡಿ ಅವರ ರಹಸ್ಯ ಕಾರ್ಯತಂತ್ರಗಳನ್ನು ತಿಳಿಯುವುದರಲ್ಲಿ ಚಾಣಕ್ಯನು ಯಶಸ್ವಿಯಾದನು. ಎಂತಹ ಕಠಿಣ ಪರಿಸ್ಥಿತಿಯನ್ನೂ ತನ್ನ ಪರವಾಗಿ ಪರಿವರ್ತಿಸಿಕೊಳ್ಳುವ ಚತುರತೆ ಅವನಲ್ಲಿತ್ತು. ಇಂತಹ ವ್ಯಕ್ತಿಯ ಜೀವನ ಚರಿತ್ರೆ ಇಂದಿನ ಯುವಕರಿಗೂ ಸ್ಫೂರ್ತಿದಾಯಕ ಹಾಗೂ ಆದರ್ಶವಾಗಬೇಕು.

ಚಾಣಕ್ಯನ ಕಾಲವನ್ನು ಕ್ರಿ.ಶ ನಾಲ್ಕನೇ ಶತಮಾನವೆಂದು ತಿಳಿಯಲಾಗಿದೆ. ಈ ಅವಧಿಯಲ್ಲಿ ವಾಯವ್ಯ ಪ್ರಾಂತ್ಯದಲ್ಲಿ ಇದ್ದ ತಕ್ಷಶಿಲೆಯು ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಚಾಣಕ್ಯನು ಅಲ್ಲಿ ವಿದ್ಯಾಭ್ಯಾಸ ಮಾಡಿದನು. ಅಲ್ಲಿ ಅವನು ಗಳಿಸಿಕೊಂಡ 'ಜ್ಞಾನ', ಇವನನ್ನು ಒಬ್ಬ ರಾಷ್ಟ್ರ ನಿರ್ಮಾಪಕನನ್ನಾಗಿ ಮಾಡಿತು. ಈಗಿನ ರಾವಲ್ಪಿಂಡಿಯ ಬಳಿಯ ಪ್ರದೇಶವೇ ಹಿಂದಿನ ತಕ್ಷಶಿಲೆಯಾಗಿತ್ತು. ಯುರೋಪಿಯನ್ ರಾಷ್ಟ್ರಗಳು ಅಜ್ಞಾನದಿಂದ ನರಳುತ್ತಿದ್ದ ಕಾಲದಲ್ಲಿ ತಕ್ಷಶಿಲೆಯಂತಹ ವಿದ್ಯಾಲಯ ತನ್ನ ಉನ್ನತ ಜ್ಞಾನ ಸಾಮರ್ಥ್ಯದಿಂದ ತಲೆ ಎತ್ತಿ ನಿಲ್ಲಲು ಭಾರತೀಯರಿಗೆ ನೆರವಾಯಿತು. 10 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿವಿಧ ದೇಶಗಳ ಧರ್ಮಗಳ ಅನುಯಾಯಿಗಳು ತಮ್ಮ ರಾಷ್ಟ್ರದ ಜ್ಞಾನ

ವಿನಿಮಯಕ್ಕಾಗಿ ಬರುತ್ತಿದ್ದರು. ಅನೇಕ ರಾಜ ಮಹಾರಾಜರುಗಳು ಆ ವಿದ್ಯಾರ್ಥಿ ಕೇಂದ್ರಕ್ಕೆ ದಾನ ಮಾಡುವುದನ್ನು ಹೆಮ್ಮೆಯ ವಿಷಯವಾಗಿ ಪರಿಗಣಿಸುತ್ತಿದ್ದರು.

ಅಂತಹ ಅದ್ಭುತ ವಿದ್ಯಾಕೇಂದ್ರವಾಗಿದ್ದ ತಕ್ಷಶಿಲೆಯಲ್ಲೂ ಗೊಂದಲವುಂಟಾಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ವಿದೇಶಿ ರಾಜರುಗಳ ಆಕ್ರಮಣದಿಂದ ಭಾರತ ತತ್ತರಿಸುವಂತಾಯಿತು. ಭಾರತದ ನೆರೆ ರಾಷ್ಟ್ರಗಳ ಪರಿಸ್ಥಿತಿ ರಾಜಕೀಯ ಸನ್ನಿವೇಶ ಚಾಣಕ್ಯನನ್ನು ರಾಜಕೀಯ ಪ್ರವೇಶಿಸುವುದಕ್ಕೆ ಕಾರಣವಾಯಿತು. ಕ್ರಿ. ಶ ಆರನೇ ಶತಮಾನದ ಭಾರತ, ರಾಜಕೀಯವಾಗಿ ಗೊಂದಲದ ಕಾಲ. ಆ ಸಮಯದಲ್ಲಿ ಉತ್ತರ ಭಾರತದಲ್ಲಿ 16 ರಾಜ್ಯಗಳು. ಗಾಂಧಾರ, ಮಗಧ, ಕೋಸಲಾ, ಕಾಂಬೋಜ, ಮಧ್ಯ ಪ್ರದೇಶ ಇತ್ಯಾದಿ. ಬಹಳ ಪ್ರಸಿದ್ಧವಾಗಿದ್ದವು. ಇದರಲ್ಲಿ ಮಗಧ ರಾಜ್ಯವು ಈಗಿನ ಪಾಟ್ನಾ ಮತ್ತು ಗಂಗಾ ಜಿಲ್ಲೆಗಳ ಭೂಪ್ರದೇಶವಾಗಿತ್ತು. ಮಗಧ ರಾಜವಂಶ ದುರ್ಬಲವಾಗಿ ಕಾಶಿಯಲ್ಲಿ ಆಡಳಿತಾಧಿಕಾರಿಯಾಗಿದ್ದ ಶಿಶುನಾಗ ಎಂಬುವನನ್ನು ಸಿಂಹಾಸನಕ್ಕೆ ತರಲಾಯಿತು ಶಿಶುನಾಗನ ಸಂತತಿಯ ನಂತರ  ನಂದರು ರಾಜ್ಯವನ್ನಾಳಿದರು. ಅವರು ನೂರು ವರ್ಷ ಕಾಲ ರಾಜ್ಯವನ್ನಾಳಿದರು. ಈ ನಂದರಲ್ಲಿ ಕೊನೆಯವನೇ ಧನನಂದ. ನವನಂದರಲ್ಲಿ ಕೊನೆಯ ಇವನು ಚಾಣಕ್ಯನಿಗೆ ಅವಮಾನ ಮಾಡಿದ್ದನು. ಅವನ ಅಹಂಕಾರ ಮಿತಿಮೀರಿತು. ಅದೇ ಕಾಲದಲ್ಲಿ ಪರ್ಷಿಯನ್ನರ ಭಾರತದ ಅಕ್ರಮಣ ಪ್ರಯತ್ನಗಳು ಪ್ರಾರಂಭದಲ್ಲಿ ವಿಫಲವಾದರೂ ಅವರು ಸುಮ್ಮನಾಗದೆ ಪದೇ ಪದೇ ಆತನ ಮೇಲೆ ಆಕ್ರಮಣ ಮಾಡಿ ಅನೇಕ ಭೂಪ್ರದೇಶವನ್ನು ವಶಪಡಿಸಿಕೊಂಡರು.

ಪರ್ಶಿಯನ್ನರ ರಾಜ್ಯ ವಿಸ್ತಾರವನ್ನು ಗಮನಿಸಿದಾಗ ಗ್ರೀಕರ ದೊರೆ ಅಲೆಕ್ಸಾಂಡರ್ ಭಾರತದ ಮೇಲೆ ದಂಡೆತ್ತಿ ಬರಲು ತೀರ್ಮಾನಿಸಿದನು. ತಾನು ರಾಜನಾದ ಎರಡನೇ ವರ್ಷವೇ ಅಲೆಕ್ಸಾಂಡರ್‌ನು ಪ್ರಬಲವಾದ ಸೈನ್ಯವನ್ನು ಒಟ್ಟುಗೂಡಿಸಿದನು. ಪಕ್ಕದ ರಾಜ್ಯವಾದ ಪರ್ಷಿಯಾದ ಮೇಲೆ ದಂಡೆತ್ತಿ ಹೋದನು. ಆ ವೇಳೆಗೆ ದುರ್ಬಲವಾಗಿದ್ದ ಪರ್ಷಿಯಾ ಸುಲಭವಾಗಿ ಇವನ ಕೈವಶವಾಯಿತು. ಈ ವಿಜಯದಿಂದ ಉತ್ಸುಕನಾದ ಅಲೆಕ್ಸಾಂಡರ್ ಎರಡು ವರ್ಷ ಕಾಲ ಸೈನ್ಯ ಸಿದ್ಧತೆ ಮಾಡಿ ಬಳಿಕ ಕಾಬುಲ್ ಮಾರ್ಗವಾಗಿ ಭಾರತ ಪ್ರವೇಶಿಸಲು ನಿರ್ಧರಿಸಿದನು. ತನ್ನ ಸೈನ್ಯವನ್ನು ಎರಡು ಪಂಗಡಗಳಾಗಿ ವಿಂಗಡಿಸಿದನು. ಅಲೆಕ್ಸಾಂಡರ್‌ನ ಅದೃಷ್ಟಕ್ಕೆ ಸರಿಯಾಗಿ ಸನ್ನಿವೇಶಗಳು ಒಂದುಗೂಡಿದವು. ಪಂಜಾಬ್ ಮತ್ತು ಸಿಂಧುರಾಜರುಗಳಲ್ಲಿ ಏಕಮತ್ಯವಿರಲಿಲ್ಲ. ಅದರ ಸದುಪಯೋಗ ಪಡೆದು ರಾಜರುಗಳನ್ನು ಸೋಲಿಸಿ ಮುಂದುವರೆದ. ಅಲ್ಲಿ ಅಂಬಿ ಎಂಬ ರಾಜನು ತಕ್ಷಶಿಲೆಯನ್ನು ಆಳುತ್ತಿದ್ದನು. ಅವನು ಸ್ವತಃ ಶರಣಾಗತನಾದನು. ತನ್ನ 5000 ಸೈನಿಕರ ತುಕಡಿಯನ್ನು ಅಲೆಕ್ಸಾಂಡರನಿಗೆ ಒಪ್ಪಿಸಿದನು. ಅದರ ಬಲದಿಂದ ಅಲೆಕ್ಸಾಂಡರನು ಅನೇಕ ರಾಜರುಗಳನ್ನು ಗೆದ್ದನು. ಜೀಲಂ ನದಿಯ ಎಡದಂಡೆಯ ಮೇಲೆ ಪೌರವನು ಅಲೆಕ್ಸಾಂಡರ್ ಸೈನ್ಯಕ್ಕೆ ಸೆಡ್ಡು ಹೊಡೆದನು. ಅಲೆಕ್ಸಾಂಡರ್ ದಂಡಯಾತ್ರೆಯಿಂದ ಮೌರ್ಯಚಕ್ರಾಧಿಪತ್ಯ ಸ್ಥಾಪನೆಗೆ ಕೆಲವು ಬಗೆಯ ಪ್ರೇರಣೆ ದೊರೆಯಿತು. ಇಂತಹ ಪ್ರೇರಣೆ ಮತ್ತು ಅವಕಾಶಗಳನ್ನು ಚಂದ್ರಗುಪ್ತ ಮತ್ತು ಚಾಣಕ್ಯರು ಕಾರ್ಯರೂಪಕ್ಕೆ ತಂದ ಬಗೆಯೆ ವಿಶೇಷ.

ಚಾಣಕ್ಯನು ತಕ್ಷಶಿಲೆಯಲ್ಲಿ ಕೇವಲ ಒಬ್ಬ ಆಚಾರ್ಯನೆನೆಸಿದ್ದನು. ಆ ಪ್ರದೇಶಕ್ಕೂ ಪೂರ್ವ ಭಾರತ ಮಧ್ಯ ಭಾರತದಲ್ಲಿ ಆಗುತ್ತಿದ್ದ ರಾಜಕೀಯ ಬದಲಾವಣೆಗೂ ಯಾವುದೇ

ಸಂಬಂಧವಿರಲಿಲ್ಲ. ಆದರೂ ಚಾಣಕ್ಯನು ಅಲ್ಲಿನ ಸರಕಾರದ ಮೇಲೆ ಪ್ರಭಾವ ಬೀರುವಷ್ಟು ಸಮರ್ಥನಾಗಿದ್ದನು. ಅವನ ಶಿಷ್ಯರು ಸಹ ಅವನನ್ನು ಆದರ್ಶ ಉಪಾಧ್ಯಾಯನೆಂದು ಗೌರವಿಸುತ್ತಿದ್ದರು. ಕೆಲವು ಶಿಷ್ಯರು ಗೌರವ ಪೂರ್ವಕವಾಗಿ ಅವನ ಆಜ್ಞೆಯನ್ನು ಪರಿಪಾಲಿಸಲು ಸದಾ ಸಿದ್ಧರಾಗುತ್ತಿದ್ದರು ಅವರಲ್ಲಿ ಭದ್ರ ಭಟ್ಟ ಮತ್ತು ಪುರುಷದತ್ತ ಎಂಬುವರು ಪ್ರಮುಖರು. ಅವರು ಚಾಣಕ್ಯನ ಗೂಢಚಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅದು ಹೇಗೋ ಆ ಶಿಷ್ಯರ ಮೂಲಕ ಚಾಣಕ್ಯರಿಗೆ ವಿದೇಶಿಯರು ಭಾರತದ ಮೇಲೆ ದಂಡೆತ್ತಿ ಬರುವ ಸಮಾಚಾರ ಸಿಕ್ಕಿತ್ತು. ಹಾಗಾಗಿ ಅವನಿದ್ದ ವಿಶ್ವವಿದ್ಯಾಲಯವನ್ನು ತೊರೆದು ದೇಶ ಕಟ್ಟುವ ಸಂಕಲ್ಪ ಮಾಡಿದನು. ಪಾಟಲಿಪುತ್ರದ ಕಡೆ ಹೊರಟನು. ಅಲ್ಲಿ ನಂದ ವಂಶದ ಕೊನೆಯ ದೊರೆ ಧನನಂದನು ರಾಜ್ಯವನ್ನು ಆಳುತ್ತಿದ್ದನು. ಅವನ ಆಶ್ರಯದಲ್ಲಿ ಪ್ರಜೆಗಳು ದುಃಖಿತರಾಗಿದ್ದರು. ಚಾಣಕ್ಯನು ರಾಜ್ಯದಲ್ಲಿ ನಿಧಿ ಸಮಿತಿಯ ಸದಸ್ಯನಾಗಿ ತನ್ನ ಬುದ್ಧಿವಂತಿಕೆಯಿಂದ ನಿಧಿ ಸಮಿತಿಯ ಅಧ್ಯಕ್ಷನಾದನು. ಆದರೆ ಧನ ನಂದನು ಅವನನ್ನು ನಿಧಿ ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಿ ಅಪಮಾನ ಮಾಡಿದನು.

ನನ್ನನ್ನು ಸ್ಥಾನ ವಂಚಿತನಾಗಿ ಮಾಡಿ ಅಪಮಾನ ಮಾಡಿದ್ದೀಯಾ, ಅದರಂತೆ ನಿನ್ನನ್ನು ಸ್ಥಾನ ಭ್ರಷ್ಟನನ್ನಾಗಿ ಮಾಡುತ್ತೇನೆ. ಎಂದು ಚಾಣಕ್ಯನು ಪ್ರತಿಜ್ಞೆ ಮಾಡಿದನು. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದನು, ತನ್ನ ಆಪ್ತ ಸ್ನೇಹಿತರೊಡನೆ ಗುಪ್ತ ಪ್ರದೇಶದಲ್ಲಿ ಸೈನ್ಯ ಕಟ್ಟುವ ಕೆಲಸ ಆರಂಭಿಸಿದನು. ಚಂದ್ರಗುಪ್ತನು ಜೊತೆಯಲ್ಲಿದ್ದನು. ಚಾಣಕ್ಯನು ಚಂದ್ರಗುಪ್ತನೊಡನೆ ರಾಜ್ಯದ ಗಡಿ ಪ್ರಾಂತ್ಯಗಳನ್ನು ಗೆಲ್ಲಲು ಉದ್ಯುಕ್ತನಾದನು ಹಾಗೂ ಗೆದ್ದ ಭಾಗಗಳಲ್ಲಿ ಸೂಕ್ತ ಅಧಿಕಾರಿಗಳನ್ನು ನೇಮಿಸಿ ಸೈನ್ಯವನ್ನು ವಿಸ್ತರಿಸುತ್ತಾ ಸಾಗಿದನು. ಸಾಕಷ್ಟು ಸೈನ್ಯವನ್ನು ಜೊತೆಗೂಡಿಸಿಕೊಂಡ ಮೇಲೆ ಪಾಟಲಿಪುತ್ರಕ್ಕೆ ಮುತ್ತಿಗೆ ಹಾಕಲಾಯಿತು. ಯುದ್ಧದಲ್ಲಿ ಧನನಂದನು ಸೋತು ತನ್ನ ಪರಿವಾರದೊಂದಿಗೆ ದೇಶವನ್ನು ತೊರೆದನು. ಚಾಣಕ್ಯನ ಪ್ರತಿಜ್ಞೆಯೂ, ಚಂದ್ರಗುಪ್ತನ ಅಪೇಕ್ಷೆಯೂ ನೆರವೇರಿತು. ಪಂಜಾಬ, ಗಂಗಾ, ಯಮುನಾ, ನದಿ ಪ್ರದೇಶಗಳು ಸೇರಿ ಮಗಧ ರಾಜ್ಯ ಅತ್ಯಂತ ವಿಸ್ತಾರವಾಯಿತು. ರಾಜಧಾನಿ ಪಾಟಲಿಪುತ್ರ ಮತ್ತೊಮ್ಮೆ ವೈಭವದ ನಗರವಾಯಿತು. ಚಾಣಕ್ಯನು ಚಂದ್ರಗುಪ್ತನ ಅರ್ಥಮಂತ್ರಿ ಹಾಗೂ ಸಲಹೆಗಾರನಾಗಿದ್ದನು. ಅವನಿಗೆ ಯಾವುದೇ ಅರಮನೆಯಾಗಲಿ ಅಥವಾ ಕಟ್ಟಡವಾಗಲಿ ಇರಲಿಲ್ಲ. ವೈಭವ ಜೀವನದ ಅಪೇಕ್ಷೆ ಅವನಿಗಿರಲಿಲ್ಲ. ಆದುದರಿಂದ ಅವನು ನದಿಯ ಸಮೀಪ ಒಂದು ಪುಟ್ಟ ಗುಡಿಸಿಲಿನಲ್ಲಿ ವಾಸಿಸುತ್ತಿದ್ದನು. ಸದಾ ಕಾಲ ರಾಜ್ಯ ಮತ್ತು ದೊರೆಯ ರಕ್ಷಣೆಗೆ ಬೇಕಾದ ಚಿಂತನೆಯಲ್ಲಿ ತೊಡಗಿದ್ದನು. ಮೌರ್ಯ ಸಾಮ್ರಾಜ್ಯವು ಸ್ಥಾಪನೆಯಾಯಿತು. ಚಾಣಕ್ಯನ ಪ್ರತಿಜ್ಞೆ ಪೂರ್ಣಗೊಂಡಿತು. ನಂದರು ನಾಶವಾದರು. ಈಗ ಚಾಣಕ್ಯನಿಗೆ ಯಾವುದೇ ಕಾರ್ಯ ಬಾಕಿ ಉಳಿಯಲಿಲ್ಲ ಆದರೂ ನಂದರ ಆಮಾತ್ಯನಾಗಿದ್ದ ರಾಕ್ಷಸನು ರಾಜ್ಯದಿಂದ ತಪ್ಪಿಸಿಕೊಂಡು ಹೋಗಿದ್ದನು. ಅವನು ಅತ್ಯಂತ ಬುದ್ಧಿವಂತ. ಅಷ್ಟೇ ಅಲ್ಲದೆ ನಂದವಂಶಕ್ಕೆ ಅವನು ಅತ್ಯಂತ ನಿಷ್ಠನಾಗಿದ್ದವನು. ಆದುದರಿಂದ ಚಾಣಕ್ಯನು ಚಿಂತೆಗೀಡಾಗಿದ್ದನು. ಯುದ್ಧದ ಗದ್ದಲ ಕಡಿಮೆಯಾಗಿ, ಜನರಲ್ಲಿ ಶಾಂತಿ ನೆಲೆಸುವ ಮುಂಚೆ ರಾಕ್ಷಸನು ಏನಾದರೂ ಉಪಾಯದಿಂದ ನಂದ ವಂಶದ ರಾಜಮನೆತನದ ಯಾರಾದರೂ ಒಬ್ಬ ರಾಜಕುಮಾರನನ್ನು ಕರೆತಂದು ಪ್ರಜೆಗಳನ್ನು ಒಪ್ಪಿಸಿ ಅವನಿಗೆ ರಾಜ್ಯಾಭಿಷೇಕ ಮಾಡಿ ಬಿಡಬಹುದೆಂಬ ಆತಂಕ ಅವನನ್ನು ಕಾಡುತ್ತಿತ್ತು.

*(ಮುಂದುವರೆಯುವುದು....)*

# ಹಿಂದು ನಿರಾಶ್ರಿತರಿಗೆ ಸಿ.ಎ.ಎ ಅಭಯ

1947ರಲ್ಲಿ ಇಂಗ್ಲೆಂಡಿನ ಸಂಸತ್ತು ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಮೂಲಕ ಭಾರತವನ್ನು ವಿಭಜಿಸಿತು. ಮುಸ್ಲಿಮರಿಗೆ ಪಾಕಿಸ್ತಾನ ಎನ್ನುವ ದೇಶವನ್ನು ನಿರ್ಮಿಸಿಕೊಟ್ಟಿತು. ಭಾರತದಲ್ಲಿ ಇದ್ದು ಉಂಡು ಬೆಳೆದ ಮುಸ್ಲಿಮರು ಪಾಕ್ ಎನ್ನುವ ಪವಿತ್ರ ಸ್ವರ್ಗ ತಮ್ಮ ಪಾಲಿಗೆ ಬಂದಿತು ಎಂದುಕೊಂಡರು. ಅತಿ ಉತ್ಸಾಹದಿಂದ ಅವರಲ್ಲಿ ಕೆಲವರು ಭಾರತ ಬಿಟ್ಟು ತಮ್ಮ ಸ್ವರ್ಗದ ದೇಶಕ್ಕೆ ಹೋದರು. ಭಾರತದಲ್ಲೇ ಉಳಿದ ಮುಸ್ಲಿಮರು ಕಾಯಾ, ವಾಚಾ, ಮನಸಾ ಪಾಕಿಸ್ತಾನಕ್ಕಾಗಿಯೇ ಬದುಕಿದ್ದರೂ ಇಲ್ಲಿಯೇ ಉಳಿದುಕೊಂಡರು. ಅವರನ್ನು ರಕ್ಷಿಸುವ ಕೆಲಸವನ್ನು ನೆಹರೂ ಆಧಿಪತ್ಯದ ಕಾಂಗ್ರೆಸ್ ಎನ್ನುವ ಪಕ್ಷವು ಪ್ರಾಮಾಣಿಕವಾಗಿ ನೆರವೇರಿಸುತ್ತ ಬಂದಿತು.

ಆದರೆ ಪಾಕಿಸ್ತಾನದಲ್ಲಿ ಇದ್ದ ಹಿಂದುಗಳು ಪಾಕಿಸ್ತಾನದಲ್ಲಿ ತಾವು ಸುರಕ್ಷಿತರಾಗಿರುತ್ತೇವೆ. ಎಂದು ಕೊಂಡವರು ತಮ್ಮ ಲೆಕ್ಕಾಚಾರದಲ್ಲಿ ತಪ್ಪಿಬಿಟ್ಟರು. ಅತ್ಯಾಚಾರ, ದಂಗೆ ಮತಾಂತರಗಳ ಮೂಲಕ ಅಲ್ಲಿಯ ಮುಸ್ಲಿಮರು ತಮ್ಮ ನಡುವೆ ಇದ್ದ ಹಿಂದುಗಳ ಜೀವನವನ್ನೇ ದುರ್ಭರವನ್ನಾಗಿಸಿದರು. ಹಲವು ಪ್ರಾಂತಗಳಲ್ಲಿ ಬಹುಮತದಲ್ಲಿದ್ದ ಹಿಂದುಗಳು ಅಲ್ಲಿ ಅಲ್ಪಸಂಖ್ಯಾತರಾದರು. ಅಲ್ಪಸಂಖ್ಯಾತರಾಗಿದ್ದ ಕಡೆಗಳಲ್ಲಿ ನಿಶ್ಶೇಷಗೊಂಡರು. ಆಗ ಪ್ರಾರಂಭವಾದುದು ಪಾಕಿಸ್ತಾನದಿಂದ ಹಿಂದು ನಿರಾಶ್ರಿತರ ವಲಸೆ. ಇತ್ತ ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳು ಪ್ರಬಲಗೊಳ್ಳುತ್ತಿದ್ದಂತೆ ಅಲ್ಲಿಂದ ಸಿಖ್ಖ ಹಿಂದುಗಳ ವಲಸೆಯೂ ಪ್ರಾರಂಭವಾಯಿತು. ಇತ್ತ ಪೂರ್ವ ಪಾಕಿಸ್ತಾನದಿಂದ, ನಂತರ ಅದು ಬಂಗ್ಲಾದೇಶ ವಾಗುತ್ತಲೇ ಬಂದ ಹಿಂದುಗಳು ಭಾರತದಲ್ಲಿ ಡೇರೆಗಳಲ್ಲಿ ಬದುಕಲು ಪ್ರಾರಂಭಿಸಿದರು. ಭಾರತಕ್ಕೆ ಬರುತ್ತಿರುವ ಹಿಂದು ನಿರಾಶ್ರಿತರ ಸಂಖ್ಯೆಯು ಹತೋಟಿ ತಪ್ಪುತ್ತಿದ್ದಂತೆ ಆಗ ಪ್ರಧಾನಿಯಾಗಿದ್ದ ನೆಹರೂ, ಪಾಕ್ ಪ್ರಧಾನಿ ಲಿಯಾಕತ್ ಆಲಿಖಾನ್‌ರೊಂದಿಗೆ ಒಂದು ಒಪ್ಪಂದವನ್ನು ಮಾಡಿದರು. ಎರಡೂ ದೇಶಗಳ ಸರ್ಕಾರಗಳು ತಮ್ಮ ಅಲ್ಪಸಂಖ್ಯಾತರನ್ನು ರಕ್ಷಿಸಬೇಕು ಎಂದು. ಆದರೆ ಈ ಒಪ್ಪಂದವು ಪಾಕಿಸ್ತಾನದಲ್ಲಿ ಜಾರಿಗೆ ಬರಲೇ ಇಲ್ಲ. ಅದಾಗಲೇ ವಿಶೇಷನೆಂಟರಂತಿದ್ದ ಭಾರತದ ಮುಸ್ಲಿಮರು ಮಾತ್ರ ಇಲ್ಲಿನ ಸರ್ಕಾರದ ಕೊಂಡಾಟದ ಮೊಮ್ಮಕ್ಕಳಂತಾದರು.



ದಶಕಗಳಿಂದ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಬದುಕುವ ಹಿಂದು ನಿರಾಶ್ರಿತರ ಪಾಡನ್ನು ಮಾತ್ರ ಕೇಳುವವರೇ ಇಲ್ಲದಂತಾಯಿತು. ಹಿಂದು ದೇಶದಲ್ಲಿ ಹಿಂದುಗಳು ಅನಾಥರಾದರು. ಆಧಾರ್, ರೇಷನ್ ಕಾರ್ಡ್‌ಗಳೇ ಮೊದಲಾದ ಯಾವುದೇ

ದಾಖಲೆಗಳಿಲ್ಲದ ಬದುಕುವ ಅವರು ಶಿಕ್ಷಣವೇ ಮೊದಲಾದ ಸೌಕರ್ಯಗಳಿಂದ ವಂಚಿತರಾಗಿ ಡೇರೆಗಳಲ್ಲಿ ಜೀವ ತಳ್ಳುತ್ತಿರಬೇಕಾಯಿತು.

ನಂಬಿಕೆ ಮತ್ತು ಧರ್ಮದ ಕಾರಣದಿಂದ ಬದುಕು ಭಾರವೆನಿಸಿ ಬಂದ ಈ ನಿರಾಶ್ರಿತರಿಗೆ ರಕ್ಷಣೆಯನ್ನು ಒದಗಿಸಲು ಈಗ ರಚಿಸಿದ ಕಾನೂನು 'ಪೌರತ್ವ ತಿದ್ದುಪಡಿ ಕಾಯಿದೆ 2019 ಅಥವಾ ಸಿ.ಎ.ಎ ಕಾನೂನು. ಇಂತಹ ಮಾನವೀಯ ಕಾಳಜಿಯಿಂದ ರಚಿತವಾದ ಈ ಕಾನೂನಿಗೂ ಅಡ್ಡಿ ಆತಂಕಗಳಿದ್ದು ಇದನ್ನು ಅಸಂವಿಧಾನಿಕವೆಂದು ಘೋಷಿಸಲು ಪ್ರಾರ್ಥಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ 200ಕ್ಕೂ ಹೆಚ್ಚು ಮನವಿಗಳು ಬಂದಿದ್ದು ಇವೆಲ್ಲವುಗಳ ವಿಚಾರಣೆಯನ್ನು ಏಪ್ರಿಲ್ 9 ರಂದು ನ್ಯಾಯಾಲಯವು ನಿಗದಿಗೊಳಿಸಿದೆ. ಈ ತಕರಾರು ಅರ್ಜಿದಾರರಲ್ಲಿ ತೃಣಮೂಲ ಕಾಂಗ್ರೆಸ್ಸಿನ ಮಹುವಾ ಮೊಯಿತ್ರಾ, ಕಾಂಗ್ರೆಸ್ಸಿನ ಜೈರಾಮ ರಮೇಶ, ಅಸ್ಸಾಮ್ ಕಾಂಗ್ರೆಸ್ ನೇತಾರ ದೇವ ವ್ರತ ಸೈಕಿಯಾರಂತವರು ಇದ್ದಾರೆ.

ಸಿ.ಎ.ಎ ತಿದ್ದುಪಡಿಯನ್ನು ಸಂಸತ್ತು 2019ರ ಡಿಸೆಂಬರ್‌ನಲ್ಲಿ ಅಂಗೀಕರಿಸಿದ್ದಿತು. ಈಗ ಮಾರ್ಚ್ 11 ರಂದು ಅದರ ನಿಯಮಾವಳಿಗಳನ್ನು ರಚಿಸಿದ ಕೇಂದ್ರ ಗೃಹ ಇಲಾಖೆಯು ಅಧಿಸೂಚನೆಯ ಮೂಲಕ ಸಿ.ಎ.ಎ ಜಾರಿಯನ್ನು ಘೋಷಿಸಿತು. ಸಿ.ಎ.ಎ ಕಾನೂನು ಮೊದಲೇ ಇದ್ದಿತು. 1955ರ ಆ ಕಾನೂನಿಗೆ ಈಗಿನ ಕೇಂದ್ರ ಸರ್ಕಾರವು ಎರಡು ಬದಲಾವಣೆಗಳನ್ನು ತಂದಿದೆ. ಅವೆಂದರೆ ಅಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಬಂಗ್ಲಾದೇಶಗಳಿಂದ ಆಶ್ರಯ ಕೋರಿ ಬಂದ ಅಲ್ಲಿನ ಅಲ್ಪಸಂಖ್ಯಾತರಾದ ಹಿಂದು ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತ ಮತಾವಲಂಬಿಗಳ ಭಾರತ ಪೌರತ್ವದ ಮನವಿಯನ್ನು ಪುರಸ್ಕರಿಸುವುದು. ಅವರು 31.12.2014ಕ್ಕಿಂತ ಮೊದಲು ಭಾರತಕ್ಕೆ ಬಂದಿದ್ದರೆ, ಅವರ ಮನವಿಯ ಪುರಸ್ಕಾರಕ್ಕೆ 11 ವರ್ಷದ ಕಾಲಾವಧಿಯ ಬದಲು ಈಗ 5 ವರ್ಷಗಳಾದರೆ ಸಾಕು.

ಅಫ್‌ಘಾನಿಸ್ತಾನ, ಪಾಕಿಸ್ತಾನ, ಅಥವಾ ಬಾಂಗ್ಲಾದೇಶಗಳಿಂದ ಬಂದಿರುವ ಈ ಮೂರು ದೇಶಗಳ ನಿರಾಶ್ರಿತರು ಈಗ ಆ ದೇಶಗಳಿಂದ ಬಂದವರೆನ್ನಲು ಅಲ್ಲಿಯ ವಾಹನ ಚಾಲನಾ ಪತ್ರ ಪಾಸ್ ಪೋರ್ಟ್, ಜನನ ಪ್ರಮಾಣಪತ್ರ, ಶಾಲಾ ಶಿಕ್ಷಣ ಗುರುತು ಪತ್ರ, ಯಾವುದೇ ಆರ್ಥಿಕ ಅಥವಾ ಭೂಮಿ ಸಂಬಂಧಿತ ಪತ್ರಗಳಲ್ಲಿ ಯಾವುದಾದರೊಂದನ್ನು ನೀಡಬೇಕು. ಭಾರತಕ್ಕೆ ಬಂದ ತಾರೀಕು ಇನ್ನು ಯಾವುದಾದರೂ ಪ್ರಸಿದ್ಧ ಸಂಸ್ಥೆಯಿಂದ ಅವರು ಮೇಲೆ ಉಲ್ಲೇಖಿಸಿದ ಅ ಧರ್ಮಗಳಲ್ಲಿ ಒಂದನ್ನು ಅವಲಂಬಿಸಿರುವರು ಎನ್ನುವ ಪ್ರಮಾಣ ಪತ್ರವನ್ನು ನೀಡಲು ಸಾಧ್ಯವಾದರೆ ಸಾಕು. ಅವರು ಬಂದ ದೇಶದ ಪ್ರಮಾಣ ಪತ್ರಗಳು ಸ್ವತಃ ಅವರದ್ದೇ ಆಗಲೀ ಅವರ ತಂದೆ, ತಾತ, ಮುತ್ತಾತರದ್ದೇ ಆದರೂ ಅದು ಸ್ವೀಕೃತವಾಗುತ್ತದೆ. ಅವುಗಳು ಅವರ ಆ ದೇಶಗಳ ಪೌರತ್ವವನ್ನು ಉಲ್ಲೇಖಿಸಿದರೆ ಸಾಕು. ಇನ್ನು ಭಾರತದ ಆಧಾರ್, ಪಾನ್‌ಕಾರ್ಡ್, ಭಾರತದ ವಿದೇಶಿಗಳ ರಿಜಿಸ್ಟರ್‌ನಲ್ಲಿ ನೋಂದಾವಣೆಯಾದುದು, ಅಥವಾ ಇಲ್ಲಿ ಉಳಿದುಕೊಳ್ಳಲು ನೀಡಿದ ಪರ್ಮಿಟ್ ಇವುಗಳಲ್ಲಿ ಯಾವುದಾದರೂ ಒಂದು ಇದ್ದರೆ ಸಾಕು.

ಮೇಲೆ ಉಲ್ಲೇಖಿಸಿದ ಮೂರು ಮುಸ್ಲಿಂ ದೇಶಗಳಲ್ಲಿ ತಲೆಮಾರುಗಳಿಂದ ಅನುಭವಿಸುವ ಅಮಾನವೀಯ ಅಸಹನೀಯ ಮುಸ್ಲಿಂ ಅತ್ಯಾಚಾರಗಳಿಂದ ಬದುಕಿ ಬರಲು ಪ್ರಯತ್ನಿಸುವ ಮುಸ್ಲಿಮೇತರರಿಗೆ ಇರುವ ಈ ಒಂದು ಆಸರೆಯ ಅವಕಾಶವನ್ನು ಮೋದಿಯವರ ಕೇಂದ್ರ ಸರ್ಕಾರ ನೀಡಿದೆ. ಅದನ್ನೂ ತಡೆಯುವ ಮುಸ್ಲಿಂ ಮೋಹದ ರಕ್ಕಸ ಪ್ರವೃತ್ತಿ

ಕಾಣುತ್ತಿರುವುದು; ಪಕ್ಷಗಳೂ ವ್ಯಕ್ತಿಗಳೂ ಮುಸ್ಲಿಂ ತುಷ್ಟೀಕರಣದ ಯಾವ ಹಂತವನ್ನು ತಲುಪಿರುವವರು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಈ ಸಹಾನುಭೂತಿಯ ಕಾನೂನನ್ನು ತಡೆದು ಆಯಾ ಮುಸ್ಲಿಂ ದೇಶಗಳಿಂದ ಬರುವ ಮುಸ್ಲಿಮರಿಗೂ ಭಾರತವು ಮುಕ್ತ ಅವಕಾಶ ನೀಡುವುದಾದಲ್ಲಿ ಮಾತ್ರ ಜಾರಿಗೆ ಬಂದ ಸಿ.ಎ.ಎ ತಿದ್ದು ಪಡಿಯನ್ನು ಒಪ್ಪಬಹುದು ಎನ್ನುವ ಜನರೂ ಪಕ್ಷಗಳೂ ಸರ್ಕಾರಕ್ಕೆ ನೇರವಾಗಿ ಸವಾಲು ಹಾಕಲು ಸಿದ್ಧರಾಗಿರುವರು.

ಈ ಮಾನವೀಯ ಅನುಕಂಪದ ಕಾನೂನಿನಿಂದ ವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದು ಬಿಡುಗಡೆಯಾಗಬಹುದಾದ ಮೊದಲ ಸಮೂಹವೆಂದರೆ ಬಾಂಗ್ಲಾದೇಶದಿಂದ ಬಂದು ಪಶ್ಚಿಮ ಬಂಗಾಳದಲ್ಲಿ ನೆಲೆನಿಂತಿರುವ ಅನುಸೂಚಿತ ಜಾತಿಯ ಮತುವಾ ಹಿಂದುಗಳು. ಪಾಕಿಸ್ತಾನದಿಂದ ಬಂದ ಈ ಸುಮಾರು 80 ಸಾವಿರ ಜನರು ಅಲ್ಲಿಯ ಕ್ರೂರ ವಾತಾವರಣದಿಂದ ಬಿಡುಗಡೆಗೊಂಡು ಈಗ ಭಾರತದ ಸ್ವಾತಂತ್ರ್ಯದ ಗಾಳಿಯನ್ನು ಅನುಭವಿಸಲು ಕಾಯುತ್ತಿರುವರು ಎಂದು ಅವರ ಸಂಘಟನೆಗಳು ನಿರೀಕ್ಷಿಸುತ್ತವೆ.

ಅಂತೂ ಮುಸ್ಲಿಮರನ್ನು ರಕ್ಷಿಸಲು ಎಷ್ಟೊಂದು ಕಾತರ! ಅದರೊಂದಿಗೆ ಹಿಂದುಗಳನ್ನು ಆರ್ತರೆಂದು ಒಪ್ಪಲು ಸಿದ್ಧವಿರದ ಅದೆಷ್ಟು ಕ್ರೂರ ಜೀವಿಗಳು! ನಮ್ಮೆದುರು ಇರುವರು. ಇತಿಹಾಸದುದ್ದಕ್ಕೂ ದೀನರ, ದುರ್ಬಲರ, ಆರ್ತರ ಕೈಹಿಡಿದು ಉದ್ಧರಿಸಿದ ಭಾರತ; ಇಂದು ಕೂಡಾ ಯಾವುದೇ ಸ್ಥಿತಿಯಲ್ಲೂ ಈ ನಿರಾಶ್ರಿತರನ್ನು ಕೈಬಿಡದು ಎನ್ನುವ ಭರವಸೆಯಿದೆ.

ಆದರೆ ಭಯೋತ್ಪಾದಕರನ್ನೂ 'ನಮ್ಮ ಬ್ರದರ್ಸ್' ಎನ್ನುವ, ನಮ್ಮ ಈ ಸರ್ಕಾರ ಬಂದುದೇ ಮುಸ್ಲಿಮರ ದಯೆಯಿಂದ ಎನ್ನುವ ಭಂಡತನವೇ ಈಗಲೂ ಈ ನಿರಾಶ್ರಿತ ಹಿಂದುಗಳ ವಿರುದ್ಧವಿದೆ ಎನ್ನುವುದನ್ನು ಮರೆಯುವಂತಿಲ್ಲ.

ಮುಖ್ಯವಾಗಿ ಸಿ.ಎ.ಎ ವಿರೋಧಿಗಳಿಗೆ; ಮುಸ್ಲಿಮರನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲವೆನ್ನುವುದೊಂದೆ ವಿರೋಧಕ್ಕೆ ಕಾರಣವಾಗಿದೆ. ವಾಸ್ತವವಾಗಿ ಮುಸ್ಲಿಮರು ವಲಸೆ ಬಂದುದು ಧಾರ್ಮಿಕ ವಿರೋಧದಿಂದಲ್ಲ. ಇನ್ನು ಈ ಮುಸ್ಲಿಮರಂತೆ ಆರ್ಥಿಕ ಕಾರಣಕ್ಕಾಗಿ ಬಂದವರಿಗೆ ಆಶ್ರಯ ನೀಡಬೇಕಾಗಿಲ್ಲವೆಂದು ವಿಶ್ವಸಂಸ್ಥೆಯೇ ತನ್ನ ನೀತಿ ನಿಲುವಿನಲ್ಲಿ ಘೋಷಿಸಿದೆ. ಇನ್ನು ಇತರ ಕಾರಣಗಳಿಂದ ಯಾರು ಬಂದರೂ ಅವರು ಆಶ್ರಯಕ್ಕಾಗಿ ಸರ್ಕಾರವನ್ನು ಪ್ರಾರ್ಥಿಸಬಹುದು. ಭಾರತೀಯ ಕಾನೂನು ಅದಕ್ಕೆ ಅವಕಾಶಕೊಟ್ಟಿದೆ. ಉದಾಹರಣೆಗೆ ತಸ್ಲೀಮಾ ನಸ್ರತ್ ಬಾಂಗ್ಲಾದೇಶದಿಂದ ಉಚ್ಚಾಟಿಸಲ್ಪಟ್ಟ ಲೇಖಕಿ. ಆಕೆಗೆ ಭಾರತ ಆಶ್ರಯ ನೀಡಿತ್ತು. ಆದರೆ ಅವರಂತಹ ವ್ಯಕ್ತಿಗಳು ಸಿ.ಎ.ಎ ಯ ಹೊಸ ತಿದ್ದು ಪಡಿಯ ಲಾಭವನ್ನು ಪಡೆದುಕೊಳ್ಳುವಂತಿಲ್ಲ ಅಷ್ಟೆ. ಭಾರತದ ಸಿ.ಎ.ಎ. ನಿಲುವನ್ನು ಅಮೆರಿಕಾ ವಿರೋಧಿಸುತ್ತದೆ.


ಇದೇ ಅಮೆರಿಕಾ, ಇರಾನಿನಲ್ಲಿ ಕ್ರೈಸ್ತರ ಮೇಲೆ ಧಾಳಿ, ದಬ್ಬಾಳಿಕೆಗಳು ಪ್ರಾರಂಭವಾದಾಗ ಎರಡು ಕಾನೂನುಗಳನ್ನು ಅಂಗೀಕರಿಸಿತು. ಅವು ಸ್ಪೆಕ್ಟ್ರಂ ತಿದ್ದುಪಡಿ ಮತ್ತು ಲಾಟೆನ್ ಬರ್ಗ್ ತಿದ್ದುಪಡಿ. ಈ ಮೂಲಕ, ಕ್ರೈಸ್ತರೇನಾದರೂ ಇರಾನ್ ತ್ಯಜಿಸಲು ನಿರ್ಧರಿಸಿದರೆ ಅವರಿಗೆ ಅಮೆರಿಕಾಕ್ಕೆ ಸ್ವಾಗತವಿದೆ ಎಂದು. ಎಲ್ಲರಿಗೂ ಸ್ವಾಗತವಿದೆ ಎಂದು ಹೇಳಿರಲಿಲ್ಲ. ತಮಗೊಂದು ನಿಲುವು ಇತರರಿಗೆ, ಅಮೆರಿಕಾದ ನಿರ್ಧಾರವನ್ನು ಹೇರುವುದು. ಇತಿಹಾಸದುದ್ದಕ್ಕೂ ಅಮೆರಿಕಾ ನಡೆದುಕೊಂಡ ಬಂದ ನಿಲುವು ಇಂತಹ ದಬ್ಬಾಳಿಕೆಯನ್ನು ಇಂದಿನ ಭಾರತ ಒಪ್ಪಿಕೊಳ್ಳಲು ಅಸಾಧ್ಯ. ■

# ಮೊದಲ ನೌಕಾ ಸೇನಾಪತಿ ಕಾನ್ಹೋಜಿ ಆಂಗ್ರೆ

– **ಪ್ರಭಂಜನ ಸೂರ್ಯ**, ಚಿತ್ರದುರ್ಗ

ಯುರೋಪಿನ ದೇಶಗಳ ಆಕ್ರಮಣವನ್ನು ತಡೆಯಬೇಕಾದರೆ ಇನ್ನು ಮುಂದೆ ಪ್ರಬಲವಾದ ನೌಕಾಸೈನ್ಯವನ್ನು ಕಟ್ಟಬೇಕೆಂದು ಮನಗಂಡವನು ಛತ್ರಪತಿ ಶಿವಾಜಿ ಮಹಾರಾಜ. ಅದಕ್ಕಾಗಿ ಅವನು ಅರಬ್ಬೀ ಸಮುದ್ರದ ನಡುವಿನ ಸಿಂಧು ದುರ್ಗವನ್ನು ತನ್ನ ನೌಕಾ ಸೈನ್ಯದ ಕೇಂದ್ರವನ್ನಾಗಿ ನಿರ್ಮಿಸಿದನು. ಹಿಂದೆಂದೋ, ಕಾರಣವಿದ್ದೋ ಇಲ್ಲದೆಯೋ ಸಮುದ್ರಯಾನವನ್ನು ಮಾಡಿದವನು ಧರ್ಮಭ್ರಷ್ಟನಾಗುವನೆಂಬ ನಂಬಿಕೆಯನ್ನು ಶಿವಾಜಿ ಮಹಾರಾಜನು ತಳ್ಳಿ ಹಾಕಿದನು. ತಾನೇ ಸ್ವತಃ ಸಮುದ್ರ ಪ್ರಯಾಣ ಮಾಡಿ ಸಿಂಧು ದುರ್ಗವನ್ನು ಸಂದರ್ಶಿಸುತ್ತಾ ಹೊಸ ಪದ್ಧತಿಯನ್ನು ಹುಟ್ಟು ಹಾಕಿದನು. ಕಾಲಕ್ರಮೇಣ ಉತ್ತರದ ದಾಮನ್ ನಿಂದ ದಕ್ಷಿಣದ ಗೋವಾವರೆಗೆ ರೇವು ಪ್ರದೇಶದಲ್ಲಿ ಹಿಂದು ಸ್ವರಾಜ್ಯದ ಅನುಮತಿಯಿಲ್ಲದೆ ವಿದೇಶಿ ನೌಕೆಗಳು ಸಂಚರಿಸುವುದು ಅಸಾಧ್ಯವೆನಿಸಿತು. 1674ರಲ್ಲಿ ಶಿವಾಜಿ ಮಹಾರಾಜನ ಪಟ್ಟಾಭಿಷೇಕದ ಸಂದರ್ಭದಲ್ಲಿ ಮರಾಠ ಸೈನ್ಯದ ನೌಕಾಬಲದಲ್ಲಿ 66 ಬೃಹತ್ ನೌಕೆಗಳಿದ್ದು 5000 ಸೈನಿಕರಿದ್ದರು. ಇದರಲ್ಲಿ ಶಿವಾಜಿ ಮಹಾರಾಜನ ನೌಕಾ ಸೇನಾಪತಿ ಕಾನ್ಹೋಜಿ ಆಂಗ್ರೆಯ ಪಾತ್ರ ಮಹತ್ವದ್ದು.

ಶಿವಾಜಿ ಮಹಾರಾಜನ ಕಲ್ಪನೆಯಂತೆ ಅವನ ನೌಕಾಬಲವು ಬೆಳೆದಂತೆ ಕರಾವಳಿಯ ಸಮೀಪದ ಕೋಟೆಗಳು ಭದ್ರವಾಗತೊಡಗಿದವು. ಇನ್ನೂ ಹಲವು ಹೊಸಕೋಟೆಗಳು ತಲೆ ಎತ್ತಿದವು. ಮುಂಬೈಯಿಂದ 30 ಕಿಲೋ ಮೀಟರ್ ಸಮೀಪದ ಆಲಿಬಾಗ್ ಕೂಡಾ ಇದೇ ಸಮಯದಲ್ಲಿ ನಿರ್ಮಾಣಗೊಂಡಿತು. ಅದುವೆ ಮುಂದೆ ಕೊಲಬಾ ದುರ್ಗವಾಯಿತು. 1680ರಲ್ಲಿ ಶಿವಾಜಿ ಮಹಾರಾಜನ ಮರಣಾನಂತರ ಛತ್ರಪತಿಯಾದವನು ಅವನ



ಮಗ ಸಂಭಾಜಿ ಮಹಾರಾಜ. ಆಗ ತರುಣ ಕಾನ್ಹೋಜಿ ತನ್ನ ತಂದೆ ತುಕಾಜಿಯ ಮಾರ್ಗದರ್ಶನದಲ್ಲಿ ನೌಕಾ ಸೇನಾಪತಿಯಾಗಿ ರೂಪುಗೊಳ್ಳುತ್ತಿದ್ದನು.

1688ರ ಕಾಲಘಟ್ಟದಲ್ಲಿ ಸಮುದ್ರ ಯುದ್ಧದಲ್ಲಿ ಆಫ್ರಿಕಾ ಮೂಲದ ಸಿದ್ದಿಗಳ ಪ್ರಾಬಲ್ಯವು ಗಣನೀಯವಾಗಿದ್ದಿತು. ಈ ಮುಸ್ಲಿಂ ಸಮೂಹವು ಒಂದೇ ಬಿಜಾಪುರಕ್ಕೋ ಅಥವಾ ಮೊಗಲರಿಗೋ ತಮ್ಮ ಕಪ್ಪವನ್ನು ಅರ್ಪಿಸುತ್ತಿದ್ದಿತು. ಈ ಸಿದ್ದಿಗಳು ಮೊದಲ ಬಾರಿಗೆ ಈಗಿನ ಮುಂಬೈನಿಂದ 160 ಕಿ. ಮೀಟರ್ ದಕ್ಷಿಣದ ಹಿಂದು ಸ್ವರಾಜ್ಯದ ಸುವರ್ಣದುರ್ಗವನ್ನು ಮುತ್ತಿದರು. ಕೋಟೆಯ ಮೂರೂ ದಿಕ್ಕಿನಿಂದ ಈ ಸಿದ್ದಿಗಳು ಸುತ್ತುವರಿದು ಅದರ ಹೊರ ಸಂಪರ್ಕವನ್ನೇ ಕಡಿದು ಹಾಕಿದರು. ಆಗ ಕೋಟೆಯ ರಕ್ಷಕನಾಗಿದ್ದ ಅಚಲ ಮೊಹಿತೆಯು ಸಿದ್ದಿಗಳೊಂದಿಗೆ ಶರಣಾಗತಿಯ ಒಪ್ಪಂದಕ್ಕೆ ಮುಂದಾದನು. ಇಂತಹ ಅವಮಾನವನ್ನು ಸಹಿಸದ ತರುಣ ಕಾನ್ಹೋಜಿ, ಮಹಾರಾಜ ಸಂಭಾಜಿಗೆ ಪರಿಸ್ಥಿತಿಯನ್ನು ವಿಶದ ಪಡಿಸುತ್ತಾ ತನಗೆ ಕೋಟೆಯ ಆಧಿಪತ್ಯವನ್ನು ನೀಡುವುದಾದಲ್ಲಿ ಸಿದ್ದಿಗಳನ್ನು ಸೋಲಿಸುವ ಭರವಸೆಯನ್ನು ನೀಡಿದನು. ಅದೇ ರೀತಿಯಲ್ಲಿ ಮಹಾರಾಜನ ಆಜ್ಞೆಯು ಬರುತ್ತಿದ್ದಂತೆ ಕಾನ್ಹೋಜಿಯು ಕಾರ್ಯನಿರತನಾದನು. ಸಿದ್ದಿಗಳ ಪ್ರತಿಯೊಂದು ಕಾರ್ಯಾಚರಣೆಗಳ ವಿವರವು ಅಲ್ಲಿ ಉಪ್ಪಿನ ವಹಿವಾಟಿನ ವಿಭಾಗದಲ್ಲಿ ಗುಮಾಸ್ತನಾಗಿದ್ದು ಮುಂದೆ ಪ್ರಬಲ ಪೇಶ್ವೆಯಾದ ಕಾನ್ಹೋಜಿಯ ಬಾಲ್ಯಸ್ನೇಹಿತ ಬಾಲಾಜಿ ವಿಶ್ವನಾಥನು ಅವನಿಗೆ ನೀಡುತ್ತಲಿದ್ದ. ಆದರೆ ನಡೆದ ಯುದ್ಧದಲ್ಲಿ ಕಾನ್ಹೋಜಿ ಬಂಧನಕೊಳ್ಳಗಾದನು. ಆದರೆ ಅಲ್ಲಿಂದ ತಪ್ಪಿಸಿಕೊಂಡವನೇ ಹಲವು ತಾಸುಗಳ ಕಾಲ ಸಮುದ್ರದಲ್ಲಿ ಈಜಿ ಸುವರ್ಣದುರ್ಗವನ್ನು ತಲುಪಿದನು. ಕೋಟೆಯನ್ನು ತಲುಪಿದ ಕಾನ್ಹೋಜಿ ದುರ್ಗವನ್ನು ಭದ್ರಗೊಳಿಸಿದುದಲ್ಲದೆ ಸಿದ್ದಿಗಳು ಹಾಕಿದ ಕೋಟೆಯ ಮುತ್ತಿಗೆಯನ್ನು ಅಲಕ್ಷಿಸುತ್ತಾ ಅವರನ್ನು ನಿರುತ್ಸಾಹದಲ್ಲಿ ಕೆಡವಿದನು ಈ ರಣನೀತಿಯು ಸಫಲವಾಯಿತು. ಕೆಲವೇ ತಿಂಗಳುಗಳಲ್ಲಿ ಸಿದ್ದಿಗಳು ಸುವರ್ಣ ದುರ್ಗದ ಮುತ್ತಿಗೆಯನ್ನು ಕೈಬಿಟ್ಟು ತಮ್ಮ ಜಂಜೀರಾ ಕೋಟೆಗೆ ಮರಳಿದರು. ಸಿದ್ದಿಗಳ ಸೇವೆಯಿಂದ ಬಾಲಾಜಿ ವಿಶ್ವನಾಥನು ನಂತರ ವಿಮುಕ್ತನಾಗಿ ಹಿಂದವಿ ಸರ್ಕಾರದ ಕಂದಾಯ ಇಲಾಖೆಗೆ ಬಂದು ಸೇರಿಕೊಂಡನು. ಕೆಲವೇ ವರ್ಷಗಳಲ್ಲಿ ಅವನು ಸುಬೇದಾರನಾಗಿ ರಾಜಧಾನಿ ಪುಣೆಯ ಸರಬರಾಜು ಕಾರ್ಯದ ಅಧಿಕಾರಿಯಾದನು.

1687ರ ಹೊತ್ತಿಗೆ ಔರಂಗಜೇಬನು ದಕ್ಷಿಣದಲ್ಲೇ ಇದ್ದು ಬಿಜಾಪುರ ಮತ್ತು ಗೋಲ್ಕೊಂಡಾಗಳನ್ನು ಸೋಲಿಸಲು ಶಕ್ತನಾದನು. ಆ ಮೇಲೆ ಉಳಿದುದು ಮರಾಠಾ ಶಕ್ತಿ ಮಾತ್ರವೆ. 1689ರಲ್ಲಿ ಅವನು ಹಿಂದು ಸ್ವರಾಜ್ಯದ ಸಂಭಾಜಿರಾಜನನ್ನು ಸೋಲಿಸಿ ಅವನನ್ನು ಒಂಟೆಯ ಬೆನ್ನಿಗೆ ಕಟ್ಟಿ ಮೆರವಣಿಗೆ ಮಾಡಿ ಅವಮಾನಿಸಿದನು. ಅಷ್ಟಾಗಿಯೂ ಇಸ್ಲಾಮಿಗೆ ಮತಾಂತರಗೊಳ್ಳಲು ಒಪ್ಪದ ಸಂಭಾಜಿಗೆ 39 ದಿನಗಳ ಕಾಲ ಅಮಾನುಷವಾದ ಚಿತ್ರಹಿಂಸೆಯನ್ನು ನೀಡಿದನು. ಕಾದ ಕಬ್ಬಿಣದ ಸಲಾಕೆಗಳಿಂದ ಅವನ ಎರಡು ಕಣ್ಣುಗಳಿಗೆ ತಿವಿದರು. ಅವನ ನಾಲಿಗೆಯನ್ನು ತುಂಡರಿಸಿದರು. 1689ರ ಮಾರ್ಚ್ 11 ರಂದು ಅವನ ತಲೆಯನ್ನು ಕಡಿದು ಮೆರವಣಿಗೆ ಮಾಡಿದರು. ದೇಹವನ್ನು ನೂರಾರು ತುಂಡುಗಳಾಗಿ ಕತ್ತರಿಸಿದರು.

ತಮ್ಮ ರಾಜನಿಗೆ ಮಾಡಿದ ಅವಮಾನವನ್ನು ಹಿಂದು ಸಮಾಜವು ಸಹಿಸಲಿಲ್ಲ. ಎಲ್ಲರೂ ಶಿವಾಜಿ ಮಹಾರಾಜನ ಕಿರಿಯ ಮಗ ರಾಜಾರಾಮನನ್ನು ರಾಜ್ಯದ ಪ್ರತಿನಿಧಿಯನ್ನಾಗಿಸಿದರು.

ಅದಕ್ಕೆ ಉತ್ತರವಾಗಿ ಹಿಂದವಿ ಶಕ್ತಿಯನ್ನು ಬಗ್ಗು ಬಡಿಯಲು ಔರಂಗಜೇಬನು ಇತ್ತಿಖಾದ್ ಖಾನನ ನೇತೃತ್ವದಲ್ಲಿ ಬಲಿಷ್ಠ ಸೈನ್ಯವನ್ನು ಕಳುಹಿಸಿದನು. ಇಂತಹ ಪ್ರಸಂಗದಲ್ಲಿ ರಾಜಪ್ರತಿನಿಧಿಯು ತಪ್ಪಿಸಿಕೊಳ್ಳುವುದೇ ಸರಿಯೆಂದುಕೊಂಡ ಮಂತ್ರಿಗಳ ಸಲಹೆಯಂತೆ ರಾಜರಾಮನು ದಕ್ಷಿಣದ ಜಿಂಜಿಯ ಕೋಟೆಗೆ ಹೊರಟನು. ಇದೇ ಸಂದರ್ಭದಲ್ಲಿ ಅವನು ಕರ್ನಾಟಕ ಪ್ರದೇಶವನ್ನು ಹಾದು ಹೋಗುವಾಗ ಕೆಳದಿಯ ಚೆನ್ನಮ್ಮಳು ಅವನಿಗೆ ಭದ್ರತೆಯನ್ನೂ ರಕ್ಷಣೆಯನ್ನೂ ಕೊಟ್ಟು ಸಹಕರಿಸಿದ್ದಳು. ಜಿಂಜಿಯನ್ನು ತಲುಪಿದ ರಾಜರಾಮನು ಕಾನ್ಹೋಜಿ ಅಂಗ್ರೆಯನ್ನು ಸೈನ್ಯದ ಸಹಸೇನಾಪತಿಯನ್ನಾಗಿಸಿದನು.

ರಾಜಾರಾಮನು ಜಿಂಜಿಯಿಂದ ಮರಳಿ ಬಂದು ಸತಾರಾವನ್ನು ರಾಜಧಾನಿಯನ್ನಾಗಿಸುವಷ್ಟರಲ್ಲಿ ಕಾನ್ಹೋಜಿಯು ತನ್ನ ಆಡಳಿತದ ಉತ್ತರ ಕರಾವಳಿಯ ಉದ್ದಕ್ಕೂ ನೌಕಾಸೈನ್ಯವನ್ನು ಭದ್ರಗೊಳಿಸುತ್ತಾ ಬಂದಿದ್ದನು. 40 ಯುದ್ಧ ನೌಕೆಗಳೊಂದಿಗೆ ಸುತ್ತಲಿನ ಸಮುದ್ರಯಾನಿಗಳಿಂದ ಕಂದಾಯವನ್ನು ಸಂಗ್ರಹಿಸುವಷ್ಟಕ್ಕೆ ಅವನು ಪ್ರಭಾವವನ್ನು ಬೆಳೆಸಿಕೊಂಡನು ಆ ಸಮಯದಲ್ಲಿ ಸಿದ್ದಿಗಳೂ ಆಂಗ್ಲರೂ ಪೋರ್ಚುಗೀಸರೂ ತಂತಮ್ಮ ಕ್ಷೇತ್ರಗಳಲ್ಲಷ್ಟೇ ಸೀಮಿತಗೊಂಡಿದ್ದರು. 1695ರಲ್ಲಿ ಆಂಗ್ರೆಯು ತನ್ನ ಪ್ರಮುಖ ಠಾಣೆಯನ್ನು ಸುವರ್ಣ ದುರ್ಗದಿಂದ ಕೊಲಾಬಾಗೆ ಬದಲಾಯಿಸಿದನು.

1700ರಲ್ಲಿ ಸಿದ್ದಿ ಕಸಮ್ ಯಾಕೂತ್ ಖಾನನು ಕೊಲಾಬಾ ಕೋಟೆಗೆ ಮುತ್ತಿಗೆ ಹಾಕಿದನು. 6 ತಿಂಗಳ ಕಾಲ ಮುತ್ತಿರುವ ಸಿದ್ದಿ ಸೈನ್ಯವನ್ನು ಕಂಗಾಲು ಗೊಳಿಸಿದ ಕಾನ್ಹೋಜಿ ಅದೇ ಕಾಲದಲ್ಲಿ ಗಡಿಯನ್ನು ದಾಟಿ ಅವರ ರಾಜ್ಯಕ್ಕೆ ಪ್ರವೇಶಿಸಿ ಅಲ್ಲಿಂದ ಕೊಳ್ಳೆಯನ್ನು ಸಂಗ್ರಹಿಸಲು ಶಕ್ತನಾದನು. ಸಿದ್ದಿ ಸೈನ್ಯವು ಯಾವುದೇ ಪ್ರತಿಫಲ ನೀಡದ ತನ್ನ ಮುತ್ತಿಗೆಯನ್ನು ಹಿಂತೆಗೆದುಕೊಂಡಿತು. ಹಿಂದು ಸೈನ್ಯವು ಮುಂದೆ ವ್ಯಾಪಾರಿ ನೌಕೆಗಳಿಗೆ ಸಮುದ್ರಗಳ್ಳರಿಂದ ರಕ್ಷಣೆಯನ್ನು ನೀಡುವ ಮಟ್ಟಕ್ಕೆ ಬೆಳೆಯಿತು. ಈ ದಸ್ತಕ್ ರಕ್ಷಣಾ ಸುಂಕವನ್ನು ನೀಡದ ನೌಕೆಗಳನ್ನು ಹಿಂದವಿ ಸ್ವರಾಜ್ಯವು ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು.

ದೆಹಲಿಯನ್ನು ಬಿಟ್ಟು ಬಂದು 18 ವರ್ಷಕಾಲ ದಕ್ಷಿಣದಲ್ಲಿ ಬೀಡು ಬಿಟ್ಟ ಔರಂಗಜೇಬನ ದಂಡಯಾತ್ರೆಯು ಯಾವ ದೃಷ್ಟಿಯಲ್ಲೂ ಲಾಭದಾಯಕವಾಗಿರಲಿಲ್ಲ. ಈ ಯುದ್ಧಗಳಲ್ಲಿ 5 ಲಕ್ಷ ಮೊಗಲ ಸೈನಿಕರು ಸಾವನ್ನು ಅಪ್ಪಿದರು. ಅವನು ಗೆದ್ದ ಕೋಟೆಗಳನ್ನು ಹಿಂದು ಸೈನಿಕರು ಒಂದೊಂದಾಗಿ ಗೆದ್ದುಕೊಂಡರು. ಅದನ್ನು ಅಲ್ಲೇ ಇದ್ದು ಕಾಣುವ ದುರ್ಭಾಗ್ಯವು ಅವನದ್ದಾಯಿತು.

ಇತ್ತ ಗರಿಕೆದರುತ್ತಿದ್ದ ಈಸ್ಟ್ ಇಂಡಿಯಾ ಕಂಪನಿಗೂ ಕಾನ್ಹೋಜಿ ಆಂಗ್ರೆಗೂ ಕೈಕೈ ಮಿಲಾಯಿಸುವ ಕಾಲವು ಬಂದಿತು. 1703ರಲ್ಲಿ ಏಡನ್‌ನಿಂದ ಸರಂಜಾಮುಗಳನ್ನು ಹೊತ್ತ ಹಡಗೊಂದು ಬೊಂಬಾಯಿಯ ಬಂದರಿಗೆ ಬಂದು ತಲುಪಿತು. ಆ ಹಡಗಿಗೆ ಕಾನ್ಹೋಜಿಯ ಅಪ್ಪಣೆಯ ದಸ್ತಕ್ ಇದ್ದಿತು. ಅಷ್ಟಾಗಿಯೂ ಇಂಗ್ಲಿಷರು ಆ ಹಡಗನ್ನು ಮುಟ್ಟುಗೋಲು ಹಾಕಿದರು. ಆಂಗ್ರೆಯು ಈ ರೀತಿಯ ಆಂಗ್ಲರ ಬಹಿರಂಗ ಸವಾಲುಗಳನ್ನು ಒಂದು ವರ್ಷಕಾಲ ಸಹಿಸಿಕೊಂಡು ಬಂದನು. ಆದರೆ ಆಂಗ್ಲರು ಅದನ್ನು ಆಂಗ್ರೆಗೆ ತಮ್ಮ ಬಗ್ಗೆ ಇದ್ದ ಭಯವೆಂದುಕೊಂಡರು. ತಮ್ಮ ಒತ್ತಡದ ಕಾರ್ಯಚರಣೆಯು ಸಫಲಗೊಂಡಿದೆ ಎಂದು ಕೊಂಡರು. ಆದರೆ ಆಂಗ್ರೆಯ ನಿರ್ಧಾರವೇ ಬೇರೆ ಇದ್ದಿತು.

*(ಮುಂದುವರೆಯುವುದು....)*

# ಶ್ರೀ ಎಲ್. ಶ್ರೀಧರ್ ಭಟ್
## ಅಗಲಿದ ಉದಾರ ಚರಿತ ಹಿರಿಯರು

– ನಾಗೇಶ ಕಡೆಗೋಳಿ
ವಿಹಿಂಪ, ಮಂಗಳೂರು ಜಿಲ್ಲಾ ಸಹಕೋಶಾಧ್ಯಕ್ಷ



ಹಿರಿಯರೂ ಮೊದಲಿನಿಂದಲೂ ನನ್ನ ಮಾರ್ಗ ದರ್ಶಕರೂ ಆದ ಎಲ್. ಶ್ರೀಧರಭಟ್ 16.12.1926ರಲ್ಲಿ ಗೋವಾದ ಕಾಣಕೋಣ ಜಿಲ್ಲೆಯ ಸಂಗ್ರಾಮಿಯಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಅವರು ಗೋವಾದಲ್ಲಿ ಪೂರೈಸಿದರು. ನಂತರ ತಮ್ಮ ಹಿಂದಿ ವಿಶಾರದ ಪದವಿ ಮತ್ತು ಸಂಸ್ಕೃತ ವಿದ್ಯಾಭ್ಯಾಸವನ್ನು 14ನೇ ವಯಸ್ಸಿನಲ್ಲೇ ಪೂರೈಸಿದರು. 1950ರಲ್ಲಿ ಆಯುರ್ವೇದ ಶಿರೋಮಣಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಹೆಗ್ಗಳಿಕೆ ಅವರದ್ದಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಕ್ಷಾವರ್ಗಗಳ ಶಿಕ್ಷಣ ಪಡೆದ ಶ್ರೀಯುತರು 1948ರಲ್ಲಿ ಸರಕಾರದಿಂದ ಸಂಘದ ನಿಷೇಧವನ್ನು ಉಲ್ಲಂಘಿಸಿ ಕಣ್ಣಾನೂರಿನಲ್ಲಿ ಜೈಲುವಾಸ ಅನುಭವಿಸಿದರು. ಹಿಂದಿ ಪ್ರಚಾರಕರಾಗಿ, ನಂತರ ಮಂಗಳೂರು ಹಿಂದಿ ಪ್ರಚಾರ ಸಮಿತಿಯಲ್ಲಿ ಅಧ್ಯಾಪನವನ್ನು ಪ್ರಾರಂಭಿಸಿದರು. ಆಗ್ರಾದ ಹಿಂದಿ ಸಾಹಿತ್ಯರತ್ನ ಪಡೆದ ಶ್ರೀಧರ ಭಟ್ ಮಂಗಳೂರು ಹಿಂದಿ ಪ್ರಚಾರ ಸಮಿತಿಯ ಸಂಚಾಲಕರಾದರು.

1968ರಲ್ಲಿ ವಿಶ್ವ ಹಿಂದು ಪರಿಷದ್ ದಕ್ಷಿಣಕನ್ನಡ ಜಿಲ್ಲಾ ಕಾರ್ಯದರ್ಶಿಗಳಾಗಿ ಕಾರ್ಯದ ರಭಸವನ್ನು ಹೆಚ್ಚಿಸಿದರು. 1970ರಲ್ಲಿ ಬೆಳ್ತಂಗಡಿಯ 'ಮರಳಿ ಮಾತೃ ಧರ್ಮಕ್ಕೆ' ಕಾರ್ಯಕ್ರಮವನ್ನು ಪ್ರಾರಂಭಿಸಿ ಹಲವು ಕ್ರೈಸ್ತ ಕುಟುಂಬಗಳನ್ನು ಬರಮಾಡಿಕೊಂಡರು. 1980ರ ಅಯೋಧ್ಯೆ ಚಲೋ ಚಳುವಳಿಯಲ್ಲಿ ಸುಲ್ತಾನಪುರದಿಂದ ಕಾಲ್ನಡಿಗೆಯಲ್ಲಿ ಅಯೋಧ್ಯೆಗೆ ತಲುಪಿದರು.

ಶ್ರೀಯುತರದ್ದು ಬಹುಮುಖೀ ವ್ಯಕ್ತಿತ್ವ. ಕಠಿಣ ಪರಿಶ್ರಮದ ಪರಂಪರೆಯಿಂದ ಬಂದ ಸ್ವಯಂಸೇವಕತ್ವದ ಬದುಕು. ಮಂಗಳ ಸೇವಾ ಸಮಿತಿಯ ಅಧ್ಯಕ್ಷರಾಗಿ, ಗೋವನಿತಾಶ್ರಯ ವಿಶ್ವಸ್ಥ ಮಂಡಳಿಯ ವಿಶ್ವಸ್ಥರಾಗಿ, ಹಿಂದಿ ಪ್ರಚಾರ ಸಮಿತಿಯ ಉಪಾಧ್ಯಕ್ಷರಾಗಿ, ವಿಶ್ವಹಿಂದು ಪರಿಷತ್ತಿನ ವಿಭಾಗಕಾರ್ಯದರ್ಶಿಗಳಾಗಿ 33 ವರ್ಷಗಳ ಕಾಲ ಅಧ್ಯಾಪಕರಾಗಿ ಸಂಘಟಕರಾಗಿ ಸಮಾಜ ಸೇವಕರಾಗಿ ಸರಳತೆಯ ಅಪೂರ್ವ ಮಾದರಿಯಾಗಿದ್ದರು; ಹಿರಿಯರಾದ ಶ್ರೀಧರ ಭಟ್‌ರವರು.

ನಾನು ಮಂಗಳೂರು ನಗರ ಕಾರ್ಯಾಲಯ ಪ್ರಮುಖನಾಗಿ ಬಂದಾಗ ನನಗೆ ಮೊದಲ ಮಾದರಿ ಹಿರಿಯರಾಗಿ ಸಿಕ್ಕಿದವರು ಶ್ರೀಧರ ಭಟ್‌ರವರು. ಪ್ರತಿ ಜಿಲ್ಲಾ ಬೈಠಕ್‌ನಲ್ಲಿ ಅವರು 10 ನಿಮಿಷ ಮೊದಲು ಬಂದು ಉಪಸ್ಥಿತರಾಗಿರುತ್ತಿದ್ದರು. ಪ್ರತಿ ತಿಂಗಳು ತಮ್ಮ ಆಪ್ತರಿಂದ



ಮಂಗಳೂರಿನ ಶ್ರದ್ಧಾಂಜಲಿ ಸಭೆ

ಸಂಗ್ರಹಿಸಿದ ದೇಣಿಗೆಯನ್ನು ಬೈಠಕ್ ಸಂದರ್ಭದಲ್ಲಿ ಒಪ್ಪಿಸುತ್ತಿದ್ದುದು ಅವರದ್ದೇ ವೈಶಿಷ್ಟ್ಯ. ಗೋವನಿತಾಶ್ರಯದ ಸಂಪರ್ಕ ಬಂದ ಮೇಲೆ ಅವರು ಅಕ್ಷರಶಃ ಪೂರ್ಣ ಗೋಭಕ್ತರಾಗಿ ಬಿಟ್ಟರು. ಮಸ್ಕತ್‌ನ ದಾನಿಗಳಿಂದ ಅವರು ನಿರ್ಮಿಸಿದ 'ಧರಮ್ ಸೇ ಧಾಮ್ ಸಭಾಭವನ ಅವರ ಅವಿರತ ಪ್ರಯತ್ನದ ಫಲ. ಅಂತಹ ಛಲವನ್ನು ನಾನು ಕಂಡುದು ಅವರಲ್ಲಿ ಮಾತ್ರ. ಕೆಲಸ ಮುಗಿಸುವವರಿಗೆ ವಿರಾಮವಿಲ್ಲ ಎನ್ನುವ ಘೋಷಣೆಯಂತೆ ಅವರ ಜೀವನವಿದ್ದಿತು. ಪ್ರತಿದಿನವೂ ಮಾರ್ಕೆಟನಿಂದ ಮಾರಾಟವಾಗದ ತರಕಾರಿಯನ್ನು ಶ್ರೀಯುತ ಮನೋಹರ ತುಳಜಾರಾಮರೊಂದಿಗೆ ಬಸ್‌ನಲ್ಲಿ ಪ್ರಯಾಣಿಸಿ ತಂದು ಗೋವುಗಳಿಗೆ ನೀಡುತ್ತಿದ್ದರು. ಪರಿಷತ್ತಿನ ಬೆಳವಣಿಗೆಯ ಮೂಲ ಕಾರ್ಯಕರ್ತರಲ್ಲಿ ಅವರು ಪ್ರಮುಖರು. 'ಗೋವಿಗೆ ಹುಲ್ಲಿನ ಹೊರೆ ಕಾಣಿಕೆ' ಅವರ ಕಲ್ಪನೆ. ನಮ್ಮ ಪ್ರಕಲ್ಪಗಳಿಗೆ ತಮ್ಮ ಮಕ್ಕಳಿಂದಲೂ ಸ್ನೇಹಿತರಿಂದಲೂ ವಿದೇಶಿ ದೇಣಿಗೆಯನ್ನು ತಂದು ತಲುಪಿಸುವುದು ಅವಿರತವಾಗಿರಬೇಕು ಎನ್ನುವುದು ಅವರ ಖಚಿತ ಅಭಿಪ್ರಾಯವಾಗಿದ್ದಿತು. ಅವರನ್ನು ಅನುಸರಿಸಲು ನನ್ನ ಪ್ರಯತ್ನವಿದ್ದರೂ, ನನ್ನ ಕಿರಿವಯಸ್ಸು ಮತ್ತು ಜೀವನಾನುಭವದ ಕೊರತೆಯು ಅವರ ಶ್ರಮವನ್ನೂ ವ್ಯಕ್ತಿತ್ವವನ್ನೂ ಪೂರ್ಣವಾಗಿ ಅರ್ಥೈಸಲು ಆಗಲಿಲ್ಲ. ಅವರಿಗೆ ನನ್ನ ವಿನಯಪೂರ್ವಕ ನಮಸ್ಕಾರಗಳ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ■


**ಹಿಂದುವಾಣಿಗೆ ಚಂದಾದಾರರಾಗಲು**

ವಾರ್ಷಿಕ ಚಂದಾ ರೂ. 130/– ಅಥವಾ ದ್ವೈವಾರ್ಷಿಕ ಚಂದಾ ರೂ. 250/–ರ ಎಂ.ಓ./ಡಿ.ಡಿ.ಗಳನ್ನು "ಹಿಂದುವಾಣಿ" ಹೆಸರಿನಲ್ಲಿ ಕಳುಹಿಸಬಹುದು

ಅಥವಾ

ಕರ್ನಾಟಕ ಬ್ಯಾಂಕ್, ಚಾಮರಾಜಪೇಟೆ ಶಾಖೆ, ಬೆಂಗಳೂರು.
ಖಾತೆ ಹೆಸರು : "ಹಿಂದುವಾಣಿ" A/c No: 0582500102391901ಕ್ಕೆ ವರ್ಗಾಯಿಸಬಹುದು.

I.F.S.C Code : KARB0000058

ನಂತರ 9663881653 ಮೊಬೈಲಿಗೆ ಅಥವಾ ದೂರವಾಣಿ 080–26604641ಕ್ಕೆ ಕರೆ ಮಾಡಿ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.

# ಸಮರಸತೆಯ ಸಂಕೇತ ಕೆರೆಗೋಡು ಅರ್ಜುನ ಧ್ವಜಸ್ತಂಭ

– ವಿರೂಪಾಕ್ಷ ತಾಳಮೇಳನದೊಡ್ಡಿ, ಮಂಡ್ಯ

(ಕಳೆದ ಸಂಚಿಕೆಯಿಂದ.....)

ಕೆರೆಗೋಡು ಮತ್ತು ಸುತ್ತಲಿನ ಗ್ರಾಮಗಳ ನಡುವಿನ ಸೌಹಾರ್ದತೆಗೆ ಬಹಳ ವರ್ಷಗಳ ಪರಂಪರೆಯೇ ಇದೆ. ಅದರಲ್ಲೂ ಈ ಗ್ರಾಮಗಳ ಅನುಬಂಧವನ್ನು; ಕಾಲಾನುಗತವಾಗಿ ನಡೆದುಕೊಂಡು ಬಂದ ಗ್ರಾಮದ ದೇವದೇವತೆಗಳ ಉತ್ಸವಗಳು ಗಟ್ಟಿಗೊಳಿಸುತ್ತ ಬಂದಿವೆ. ದೈವಭಕ್ತಿಯೊಂದಿಗೆ ಊರೂರುಗಳ ಸಾಮಾಜಿಕ ಸಂಬಂಧಗಳು ಕೂಡಾ ಜೊತೆಗೂಡಿ ಬಂದು ಒಬ್ಬರನೊಬ್ಬರು ಅನುಸರಿಸುತ್ತಾ ಬರುವುದು ವಾಡಿಕೆಯಾಗಿ ಬಿಟ್ಟಿತು. ಇದರಿಂದಾಗಿ ಕೆರೆಗೋಡಿನ ಹನುಮ ಧ್ವಜಾರೋಹಣವು ಸುತ್ತಲಿನ ಗ್ರಾಮಗಳ ಊರ ಹಬ್ಬವಾಗಿ ಬಿಟ್ಟಿತು. ಮನೆಯ ಸಮಾರಂಭಕ್ಕೆ ಆಹ್ವಾನ ನೀಡುವಂತೆ ಊರೂರುಗಳೇ ಪರಸ್ಪರ ಆಮಂತ್ರಿಸುವುದು ಪ್ರಾರಂಭವಾಗಿ ಬಿಟ್ಟಿತು. 2024ರ ಜನವರಿ 22, 23, 24ರ ದಿನಗಳಲ್ಲಿ ಕೆರೆಗೋಡು ಗ್ರಾಮ ಪಂಚಾಯಿತಿಗೆ ಮಂಡ್ಯಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಮಂಡ್ಯ ತಹಶಿಲ್ದಾರರು, ತಾಲ್ಲೂಕು ಇ.ಓ. ಗಳಿಗೆಲ್ಲಾ ಧ್ವಜಾರೋಹಣದ ಅವಕಾಶವನ್ನೂ ಅದಕ್ಕೆ ಸಂಬಂಧಿಸಿದ ಔಪಚಾರಿಕ ನಿಯಮದ ಪಾಲನೆಯನ್ನೂ ಕೋರಿ ಅರ್ಜಿಯನ್ನು ನೀಡಲಾಯಿತು. ಹೀಗೆ ಆಮಂತ್ರಿಸಲು ಸೇರಿದ ತಂಡಗಳಲ್ಲಿ, ಸುತ್ತಲಿನ ಗ್ರಾಮಗಳ ಹಿರಿಯರೂ, ಯುವಕರೂ, ಜನ ಪ್ರತಿನಿಧಿಗಳೂ, ಊರ ಯಜಮಾನರೂ, ವಿದ್ಯಾರ್ಥಿಗಳೂ ಸೇರಿದ್ದರು.

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಶ್ರೀ ಸಂಚಿಹೊನ್ನಮ್ಮ ರಂಗಮಂದಿರದ ಹತ್ತಿರವಿರುವ ಶ್ರೀ ಅರ್ಜುನ ಸ್ತಂಭದಲ್ಲಿ ಈ ಹನುಮಧ್ವಜವನ್ನು ಹಾರಿಸುವುದು ಮೂವತ್ತು ಗ್ರಾಮಗಳು ಸೇರಿ ಮಾಡಿದ ನಿರ್ಧಾರವಾಗಿದ್ದಿತು. ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಯಲ್ಲಿ ರಾಷ್ಟ್ರಧ್ವಜವನ್ನೂ, ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡ ಧ್ವಜವನ್ನೂ ಇನ್ನು ಉಳಿದ ವರ್ಷಪೂರ್ತಿ ಹನುಮಧ್ವಜವನ್ನೂ ಏರಿಸಿ ಇದು ರಾಷ್ಟ್ರಭಕ್ತಿ, ಕನ್ನಡಪ್ರೇಮ ಮತ್ತು ಸಂಸ್ಕೃತಿಯ ಮೆರಗಿನ ತ್ರಿವೇಣಿ ಸಂಗಮವಾಗಬೇಕೆನ್ನುವುದು ಶ್ರೀ ಹನುಮ ಭಕ್ತರ ಉತ್ಕಟ ಇಚ್ಛೆಯಾಗಿದ್ದಿತು. ಕೆರೆಗೋಡು ಪಂಚಾಯಿತಿಗೆ ಸಲ್ಲಿಸಿದ ಈ ಪ್ರಾರ್ಥನೆಯ ಅರ್ಜಿಯಲ್ಲಿ ಸಾವಿರಾರು ನಾಗರೀಕರ ಸಹಿಗಳಿದ್ದವು. 25 ಜನವರಿ 2024ರಂದು ಗುರುವಾರ ಈ ಅರ್ಜಿಯನ್ನು ಪಂಚಾಯಿತಿ ಸಭೆಯು ಚರ್ಚೆಗೆ ತೆಗೆದುಕೊಂಡಿತು. ನಡಾವಳಿಯ ಈ 6/3ರ ವಿಚಾರದಲ್ಲಿ 20ಜನ ಸದಸ್ಯರಲ್ಲಿ 18 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರು. ಹಾಗೂ ಸಹಮತವನ್ನು ವ್ಯಕ್ತಪಡಿಸಿದರು. 30 ಗ್ರಾಮಗಳ ಸದಿಚ್ಛೆಯನ್ನು ಕೆರೆಗೋಡು ಪಂಚಾಯಿತಿಯ ಸರ್ವರಾಜಕೀಯ ಪಕ್ಷಗಳ ಬೆಂಬಲಿತ ಸದಸ್ಯರು ಅನುಮೋದಿಸಿದ್ದು ಜನತಾ ಜನಾರ್ದನನ ಆಗ್ರಹವನ್ನೂ ಅದನ್ನು ಈಡೇರಿಸಲು

ಹೊರಟವರೆಲ್ಲರ ಸರ್ವಸಮ್ಮತಿಯನ್ನೂ ಸೂಚಿಸುತ್ತದೆ. ಆ ನಂತರವೂ ಕೂಡಾ ಈ ನಿರ್ಧಾರಕ್ಕೆ ಅಸಮ್ಮತಿಯನ್ನು ತೋರುವ ಒಂದೇ ಒಂದು ತಕರಾರು ಅರ್ಜಿಯು ಬಂದಿಲ್ಲ. ಇಷ್ಟೆಲ್ಲಾ ಉತ್ಸಾಹದ; ಸರ್ವಸಮ್ಮತಿಯ, ಸಾಮೂಹಿಕ ನಿರ್ಧಾರದ ವಾತಾವರಣವನ್ನು ಹತ್ತಿಕ್ಕುವ ಪ್ರಯತ್ನವು ಕಾಂಗ್ರೆಸ್ ನೇತೃತ್ವದ ರಾಜ್ಯಸರ್ಕಾರದಿಂದ ನಡೆದುದು ವಿಷಾದಕರ, ಸರ್ಕಾರದ ಈ ವಿರೋಧಿ ನಿಲುವಿನ ಸಮರ್ಥಕರಾಗಿ ಮಂತ್ರಿ ಪ್ರಿಯಾಂಕಖರ್ಗೆ, ಸಚಿವ ಚೆಲುವರಾಯ ಸ್ವಾಮಿ, ಶಾಸಕ ಪಿ. ಗಣಿಗ ರವಿಕುಮಾರ್‌ರವರು ನಿಂತು ತಮ್ಮ ಹನುಮದ್ವೇಷ, ಧಾರ್ಮಿಕ ಜನರ ವಿರೋಧವನ್ನು ಬಹಿರಂಗಗೊಳಿಸಿದರು. ತಮ್ಮ ರಾಜಕೀಯ ಪ್ರೇರಿತ ನಿರ್ಧಾರವನ್ನು ಮಂಡ್ಯ ಜಿಲ್ಲಾಧಿಕಾರಿಗಳ ಮೇಲೆ ಹೇರಿದರು. ಅವರು ತಮ್ಮ ಮೌಖಿಕ ಆದೇಶವನ್ನು ಮಂಡ್ಯ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಶೇಕ್ ತನ್ವೀರ್ ಅಶೀಫ್‌ರಿಗೆ ನೀಡಿದರು. ಅಶೀಫ್ ಅವರು ಅತ್ಯುತ್ಸಾಹದಿಂದ ಈ ಆದೇಶವನ್ನು 23–01–24 ರಂದು ಮಂಡ್ಯತಾಲ್ಲೂಕು ಇ.ಓ. ರವರಿಗೆ ನೀಡುತ್ತಾ ಹನುಮಧ್ವಜವನ್ನು ಹಾರಿಸುವವರ ವಿರುದ್ಧ ಕ್ರಮವನ್ನು ಜರುಗಿಸುವಂತೆ ಸೂಚಿಸಿದರು. ಆ ಆದೇಶವು ಧ್ವಜಸ್ತಂಭವನ್ನು ತೆರವುಗೊಳಿಸುವ ಆಜ್ಞೆಯ ಹಂತಕ್ಕೆ ತಲುಪಿತು. ಈ ಸೂಚನೆಯು ಕೆ.ಪಿ.ಎ.ಎಸ್ ಆಡಳಿತ ಅಧಿಕಾರಿ ಎಂ. ಬಾಬುರವರ ಮೂಲಕ ಕೆರೆಗೋಡು ಪಿ.ಡಿ.ಓ. ರವರಿಗೆ ಮುಟ್ಟಿತು.

ಸಾರ್ವಜನಿಕ ಜೀವನದ ಸುಳ್ಳು, ತಟವಟಗಳು ಎಷ್ಟೊಂದು ಸಲೀಸಾಗಿ ಪ್ರಯೋಗಿಸಲ್ಪಡುವುವೆಂಬುದು ಈ ಹನುಮ ಧ್ವಜ ಸಂದರ್ಭದಲ್ಲಿ ಅನುಭವಕ್ಕೆ ಬಂದಿತು. ಕೆರೆಗೋಡು ಗ್ರಾಮ ಪಂಚಾಯಿತಿಯ ಪಿ.ಡಿ.ಓ ಜೀವನ್‌ರವರು ತಾಲ್ಲೂಕ್ ಪಂಚಾಯಿತಿಯ ಇ.ಓರವರಿಗೆ 24–01–24 ರಂದು ಒಂದು ವರದಿಯನ್ನು ಸಿದ್ಧಪಡಿಸಿ ಕಳುಹಿಸಿದರು. ಅದರಲ್ಲಿ ತಾವು 21–01–24 ರಂದು ಸಂಬಂಧಿಸಿದ ಸಂಸ್ಥೆಗಳ ವ್ಯಕ್ತಿಗಳನ್ನು ಗ್ರಾಮಪಂಚಾಯಿತಿ ಕಛೇರಿಗೆ ಕರೆಸಿದ್ದೆವು. ಅನುಮತಿ ಪತ್ರದಲ್ಲಿರುವ ನಿರ್ದೇಶನಗಳನ್ನು ಉಲ್ಲಂಘಿಸಿರುವುದರಿಂದ ಧ್ವಜವನ್ನು ಈ ಕೂಡಲೇ ತೆರವುಗೊಳಿಸುವಂತೆ ಅವರಿಗೆ ಸೂಚಿಸಿರುವುದಾಗಿ ಅವರು ವರದಿಯಲ್ಲಿ ಉಲ್ಲೇಖಿಸಿದರು. ಆದರೆ ಅದು ಹಸಿಸುಳ್ಳಿನ ಕಲ್ಪಿತ ಪ್ರಸಂಗವಾಗಿದೆ. ಆ ದಿನ ಪಂಚಾಯಿತಿ ಕಚೇರಿಯಲ್ಲಿ ಇದ್ದವರು ಪಿ.ಡಿ.ಓ ಜೀವನ್‌ರವರು, ಪಂಚಾಯಿತಿ ಅಧ್ಯಕ್ಷರಾದ ನವೀನ್ ಕುಮಾರ್ ಮತ್ತು ಕೆರೆಗೋಡು ಆರಕ್ಷಕ ಠಾಣೆಯ ಪಿ.ಎಸ್.ಐ ರಂಗಪ್ಪನವರು. ಇನ್ನು ಅಲ್ಲಿ ಇದ್ದವರು ಶ್ರೀರಾಮ ಭಜನಾ ಮಂಡಳಿಯ ಹನುಮ ಭಕ್ತರು. ಅಲ್ಲಿ ನಡೆದ ಚರ್ಚೆಯ ವಿವರವನ್ನು ಗಾಮಪಂಚಾಯಿತಿ ಅಧ್ಯಕ್ಷರಾದ ನವೀನ್‌ಕುಮಾರ್‌ರವರೇ ನೀಡಿದರು. ಅದರಂತೆ 25–01–2024 ರಂದು ಪಂಚಾಯಿತಿಯ ಸಾಮಾನ್ಯ ಸಭೆಯಿದ್ದು ಆವರೆಗೆ ಹನುಮಧ್ವಜವು ಹಾರುತ್ತಿರಲಿ. ಆ ದಿನದ ಸಭೆಯಲ್ಲಿ ಈ ವಿಚಾರವು ಚರ್ಚೆಗೆ ಬಂದು ಅದು ಅನುಮೋದಿತವಾದರೆ ಹನುಮ ಧ್ವಜವು ನಿರಾತಂಕವಾಗಿ ಹಾರುತ್ತಿರಲಿ ಎಂದು ನೂರಾರು ಜನರ ಮುಂದೆ ತಿಳಿಸಿದರು.

ಅಧಿಕಾರಿ ಶಾಹಿಯ ಅಹಂಕಾರದ ಅರಿವು ಗ್ರಾಮಗಳ ಜನರಿಗೆ ಅರಿವಾದುದು 27–01–24ರಂದು. ಮಂಡ್ಯತಾಲ್ಲೂಕು ಪಂಚಾಯಿತಿಯ ಇ.ಓ ಕೆರೆಗೋಡು ಪಂಚಾಯಿತಿಗೆ ಬಂದರು. 'ಶ್ರೀಹನುಮ ಧ್ವಜವನ್ನು ಈ ದಿನ ಇಳಿಸಿಯೇ ಹಿಂದಿರುಗುವೆ. ನೀವೇನೂ ಮಾಡಲಾಗುವುದಿಲ್ಲ' ಎಂದು ನೆರೆದ ಸಾಮಾನ್ಯ ಜನರ ಮುಂದೆ ದರ್ಪದ ಮಾತುಗಳನ್ನು ಆಡಿದರು. ಸೇರಿದ ಹನುಮಭಕ್ತರ ಆಕ್ರೋಶವು ಮೇರೆ ಮೀರುವಂತೆ ಕಂಡು ಬಂದಿತು. ಆಗ

ಮಣಿದಂತೆ ತೋರಿಸಿಕೊಂಡವರು; ಎರಡು ದಿನಗಳ ನಂತರ ಬರುತ್ತೇವೆಂದು ಅಲ್ಲಿಂದ ಮಂಡ್ಯಕ್ಕೆ ಹೊರಟರು. ಆದರೆ ನಡೆದ ಕುತಂತ್ರವೇ ಬೇರೆ! ಅಂದು ರಾತ್ರಿ ಸುಮಾರು 3.00 ಘಂಟೆಯ ಹೊತ್ತಿನಲ್ಲಿ ಪೊಲೀಸ್ ಪಡೆಗಳು ಒಂದರ ನಂತರ ಬಂದವು. ಬಂದು ಧ್ವಜಸ್ತಂಭದ ಬಳಿ ನೆರೆದವು. ನಡುರಾತ್ರಿ ಈ ಕುತಂತ್ರವನ್ನೂ ದುರುಳ ನೀತಿಯನ್ನೂ ಕಂಡ ಶ್ರೀ ಹನುಮ ಭಕ್ತರು ಮತ್ತು ಸುತ್ತ ಮುತ್ತಲಿನ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಬಂದು ಸೇರಿದರು. ಆಗ ರಾತ್ರಿ ಕಳೆಯುತ್ತಿದ್ದ ಘಂಟೆ 4.00 ಆಗಿತ್ತು.



28–01–24ರ ಬೆಳಿಗ್ಗೆ 8.00 ಘಂಟೆಯಲ್ಲಿ ಮಂಡ್ಯದ ಅಸಿಸ್ಟೆಂಟ್ ಕಮೀಷನರ್, ಮಂಡ್ಯದ ತಹಶೀಲ್ದಾರ್, ಜಿಲ್ಲಾ ಪಂಚಾಯಿತಿ ಸಿ.ಇ.ಓ, ತಾಲ್ಲೂಕು ಪಂಚಾಯಿತಿ ಇ.ಓ, ಗ್ರಾಮ ಪಂಚಾಯಿತಿ ಪಿ.ಡಿ.ಓ ಕೆರೆಗೋಡು ಅರ್ಜುನ ಧ್ವಜಸ್ತಂಭದ ಬಳಿ ಸೇರಿದ್ದರು. ಜೊತೆಯಲ್ಲಿ ಸಾವಿರಾರು ಪೊಲೀಸರ ಪಡೆಯೂ ಇದ್ದಿತು. ಧಾರ್ಮಿಕರಾದ ಶ್ರೀ ಹನುಮ ಭಕ್ತರನ್ನು ಪ್ರಚೋದಿಸುವ ಪ್ರಸಂಗಗಳು ನಡೆಯುತ್ತಲೇ ಇದ್ದವು. ಏಕಾಏಕಿ ಜಿಲ್ಲಾ ಪೊಲೀಸ್ ಸುಪರಿಟೆಂಡೆಟ್ ನೇತೃತ್ವದಲ್ಲಿ ಸೇರಿದ ಇತರ ಅಧಿಕಾರಿಗಳ ಸಮಕ್ಷಮದಲ್ಲಿ ಸಾವಿರಾರು ಪೊಲೀಸರು ಲಾಠಿಚಾರ್ಜ್ ಮಾಡಿದರು. ಸೇರಿದ ಮಹಿಳೆಯರನ್ನು ಎಳೆದಾಡುತ್ತಾ ಅಪಮಾನಿಸಿದರು. ಅವರ ಮೇಲೂ ಲಾಠಿ ಪ್ರಯೋಗ ನಡೆಯಿತು. ನೂರಾರು ಮಹಿಳೆಯರು ಅಸಹಾಯಕರಾಗಿ ವಿರೋಧಿಸುತ್ತಿರುವಂತೆಯೇ ಲಾಠಿಜಾರ್ಜ್ ತಡೆಯಿಲ್ಲದೆ ನಡೆಯುತ್ತಿದ್ದಂತೆಯೇ ಶ್ರೀಹನುಮ ಧ್ವಜವನ್ನು ಇಳಿಸಿದರು. ಸೇರಿದ ತಾಯಂದಿರು ಕಣ್ಣೀರಿಟ್ಟರು. ಬೇರೆ ದಾರಿಕಾಣದೆ ಗೋಳಿಟ್ಟರು.

ಮಧ್ಯಾಹ್ನ 3.00 ಘಂಟೆ. ಶ್ರೀಅರ್ಜುನ ಧ್ವಜಸ್ತಂಭದ ಎತ್ತರ 108 ಅಡಿ. ಅದಕ್ಕೆ ಹಾರಿಸಲೆಂದು ಅದಾಗಲೇ ಮೂಲೆ ಸೇರಿದ ಕೊಳಕಾದ ಚಿಕ್ಕ ತ್ರಿವರ್ಣಧ್ವಜವನ್ನು ಎಲ್ಲಿಂದಲೋ ಹುಡುಕಿ ತಂದರು. ಧ್ವಜಾರೋಹಣದ ಸಮಯದಲ್ಲಿ ಪಾಲಿಸಬೇಕಾದ ಶಿಷ್ಟಾಚಾರವೆಲ್ಲವನ್ನೂ ಉಲ್ಲಂಘಿಸಿ ರಾಷ್ಟ್ರಗೀತೆ, ಧ್ವಜ ವಂದನೆಗಳಿಲ್ಲದೆ ಧ್ವಜವನ್ನು ಆರೋಹಿಸಿದರು.

ಇವೆಲ್ಲ ಅಪಸವ್ಯಗಳು, ಗ್ರಾಮಸ್ಥರ ತೇಜೋವಧೆಯನ್ನು ಮಾಡಲೆಂದೇ ನಡೆದವು. ದೇಶವನ್ನು, ದೇಶದ ಪರಂಪರೆಯನ್ನು, ಸರ್ವಸ್ವವೆಂದು ನಂಬಿದ ಹಿಂದುಗಳ ಭಾವನೆಗಳಿಗೆ ನೋವುಂಟು ಮಾಡಲು ಎಲ್ಲ ಘಟನಾವಳಿಗಳನ್ನು ಪೋಣಿಸಲಾಯಿತು. ಇದೆಲ್ಲವನ್ನೂ ಮನಗಂಡ ಕೆರೆಗೋಡು ನಾಗರೀಕರು ಜನವರಿ 27ರಿಂದ 29ರ ವರೆಗೆ ಸ್ವಯಂಪ್ರೇರಿತರಾಗಿ ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಪ್ರತಿಭಟಿಸಿದರು. 29ರಂದು ಸಾವಿರಾರು ಸಂಖ್ಯೆಯಲ್ಲಿ ಮಂಡ್ಯದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪಾದಯಾತ್ರೆಯನ್ನು ನಡೆಸಿದರು.

ಈ ಪಾದಯಾತ್ರೆಯಲ್ಲೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಸೇರಿದಂತೆ, ಸಿ.ಟಿ.ರವಿ ಪ್ರೀತಮಗೌಡ ಸುರೇಶಗೌಡ, ಶಾಸಕ ಮಂಜುನಾಥರೂ ಜೊತೆಗೂಡಿದರು. ವಿಶ್ವ ಹಿಂದು ಪರಿಷದ್, ಬಜರಂಗದಳ, ಹಿಂದು ಜಾಗರಣ ವೇದಿಕೆಯ ಕಾರ್ಯಕರ್ತರೂ ಸುತ್ತಲಿನ 50 ಗ್ರಾಮಗಳ ಸಜ್ಜನರೂ ಪಾಲ್ಗೊಂಡರು. ಹಿಂದು ಧಾರ್ಮಿಕ ಭಾವನೆಗೆ ಧಕ್ಕೆ ತರಲೆಂದೇ ಕೈಗೊಂಡ ಅಧಿಕಾರಿಗಳ ಈ ಅಕ್ರಮವನ್ನು ಪ್ರತಿಭಟಿಸಲು ಕರ್ನಾಟಕದಲ್ಲಿ ಮನೆ ಮನೆಗಳ ಮೇಲೆ ಶ್ರೀ ಹನುಮ ಧ್ವಜವನ್ನು ಹಾರಿಸಲಾಯಿತು. ಮಂಡ್ಯನಗರವು ತನ್ನ ಸಕ್ರಿಯ ಸಹಾನುಭೂತಿಯನ್ನು ಪ್ರದರ್ಶಿಸಲು ಸ್ವಯಂ ಘೋಷಿತ ಬಂದನ್ನು ಆಚರಿಸಿತು. ಮಂಡ್ಯ ರೈಲ್ವೇ ನಿಲ್ದಾಣದ ಸಮೀಪದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಜಿಲ್ಲಾಧಿಕಾರಿಗಳ ಕಚೇರಿಯ ವರೆಗೆ ಮೆರವಣಿಗೆಯನ್ನು ಕೈಗೊಂಡಿತು. ಈ ರ್‍ಯಾಲಿಯನ್ನು ಉದ್ದೇಶಿಸಿ ಬಜರಂಗದಳದ ಕರ್ನಾಟಕ ದಕ್ಷಿಣದ ಸಹ ಸಂಯೋಜಕರಾದ ಮುರಳಿ ಕೃಷ್ಣರವರು ಮಾತನಾಡಿದರು. ಚಿಕ್ಕಬಳ್ಳಿ ಬಾಲು, ಹೊಸಂದುರು ಬಸವರಾಜು, ಕಿರಂಗದೂರು ಪುನೀತ್, ಕೆರೆಗೋಡು ಶ್ರೀನಿವಾಸ, ಬಸಂತ್, ತಾಳಮೇಳನದೊಡ್ಡಿ ವಿರೂಪಾಕ್ಷ ಅಂಕಣದ ದೊಡ್ಡಿ ಸಿದ್ಧು ರ್‍ಯಾಲಿಯ ನೇತೃತ್ವ ವಹಿಸಿದ್ದರು.

ಪೆಬ್ರವರಿ 11ರಂದು ಕರ್ನಾಟಕ ದಕ್ಷಿಣ ವಿಶ್ವ ಹಿಂದು ಪರಿಷದ್ ಸಹಕಾರ್ಯದರ್ಶಿಗಳಾದ ಶರಣ್ ಪಂಪ್‌ವೆಲ್ ಮೈಸೂರು ವಿಭಾಗ ಕಾರ್ಯದರ್ಶಿ ರಾ. ಸತೀಶರವರು ಕೆರೆಗೋಡಿಗೆ ಭೇಟಿ ನೀಡಿದರು. ಶ್ರೀಹನುಮ ಭಕ್ತರ ಪ್ರತಿಭಟನೆಯ ಶಕ್ತಿ ಸಾಮರ್ಥ್ಯಗಳನ್ನು ಮೆಚ್ಚಿ ಅದನ್ನು ಮುಂದುವರಿಸುವ ಸಾಧ್ಯತೆಗಳನ್ನು ಚರ್ಚಿಸಿದರು. ಇದೇ ಸಂದರ್ಭದಲ್ಲಿ ಕೆರೆಗೋಡಿನ 20 ಹನುಮಭಕ್ತರು ಅಯೋಧ್ಯೆಯ ರಾಮಲಲಾನ ದರ್ಶನ ಪಡೆದು ಬಂದು ಶ್ರೀ ಅರ್ಜುನ ಧ್ವಜಸ್ತಂಭದ ಬಳಿ ತಮ್ಮ ಭಕ್ತಿಯನ್ನೂ ದೃಢ ನಿರ್ಧಾರವನ್ನು ಪುನರುಚ್ಚರಿಸಿದರು. ■




ಅಂದ ಚಂದದ ಚಿಟ್ಟೆ ಬಂತು
ನಮ್ಮ ತೋಟಕ್ಕೆ...
ಅದನು ಹಿಡಿಯಲೆಂದು ಹೋದೆ
ನಾನು ಆಟಕ್ಕೆ......
ಚಿಟ್ಟೆ ಹಾರಿತು, ಹಾರಿ ಕುಳಿತಿತು..
ಹೂವಿನಿಂದ... ಹೂವಿಗೆಲ್ಲ
ತಿರುಗಿ ಬಂದಿತು.
ಕೆಂಪು, ಬಿಳೀ, ಹಳದಿ ಬಣ್ಣ
ಇರುವ ಹೂಗಳು..
ಹಾರುತಿರುವ ಚಿಟ್ಟೆಗೆಲ್ಲ
ಗೆಳೆಯರಾದರು.
ಹೂವು ಅಲ್ಲೇ ಗಿಡದಲಿರಲಿ.....
ಚಿಟ್ಟೆ ಹಾರಿ ಕುಣಿಯುತಿರಲಿ...
ನಾನು ನಿಂತು ನೋಡುತಿರುವೆ..
ಆಗ ನನ್ನ
ತೋಟವಿದು ಚಂದ ಚಂದವೆ.

**ಇಂದಿರಾ ಹಾಲಂಬಿ**

ಕನ್ನಡ ಮಕ್ಕಳ ಕಂಠಾಭರಣ ಸಂಕಲನದಿಂದ
ಸಂದೀಪ ಸಾಹಿತ್ಯ, ಅತ್ರಾಡಿ (ಉಡುಪಿ ಜಿಲ್ಲೆ)

# ಸತೀಶ್ – ಅಳಿಯದ ಸ್ನೇಹ

**– ಪ್ರೊ. ಗಂಗಾಧರ ಡಿ.ಪಿ.,** ಬೆಂಗಳೂರು

ನಮ್ಮೆಲ್ಲರಿಗೆ ಪ್ರಿಯ ಸ್ನೇಹಿತನಾಗಿದ್ದು ವಿಶ್ವ ಹಿಂದು ಪರಿಷತ್ತಿನ ಸಂಘಟನಾ ಕಾರ್ಯದಲ್ಲಿ ಒಡನಾಡಿಯಾಗಿದ್ದ ಸತೀಶ್ 19.03.2024 ರಂದು ಅಗಲಿ ಹೋದರು. ಎಲ್ಲರ ಜೀವನವೂ ಇದೇ ರೀತಿ ಕೊನೆಯಾಗುವುದೆಂದು ಖಚಿತವಾಗಿ ತಿಳಿದಿದ್ದರೂ ಅವರು ಇನ್ನಷ್ಟು ಕಾಲ ಜೊತೆಗಿದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅನಿಸುವುದು ಅಗಲಿದವರ ಸ್ನೇಹ ಮತ್ತು ಸಜ್ಜನಿಕೆಗೆ ಸಾಕ್ಷಿಯಾಗಿರುತ್ತದೆ. ಸತೀಶ್ ಅದೇ ರೀತಿ ಬದುಕಿದವರು. ತಮ್ಮ ಸ್ನೇಹವನ್ನು ಹಂಚಿಕೊಂಡವರು. ಹಲವು ಅಚ್ಚಳಿಯದ ನೆನಪುಗಳನ್ನು ನಮ್ಮಲ್ಲಿ ಉಳಿಸಿ ಬಿಟ್ಟವರು.

ಸ್ನೇಹಿತ ಸತೀಶ್, ಶ್ರೀಮತಿ ಸಾವಿತ್ರಮ್ಮ ಮತ್ತು ವಿ. ನಾಗರಾಜುರವರ ಪುತ್ರರು. ಅವರ ಜನನ 20.06.1983 ರಲ್ಲಿ. ಮೈಸೂರಿನಲ್ಲಿ ಅವರು 2009ರಲ್ಲಿ ತಮ್ಮ ಬಿ.ಎ.ಪದವಿಯನ್ನು ಪೂರೈಸಿದರು. ಆಗಲೇ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಪರ್ಕದಲ್ಲಿ ಬಂದರು. ಸಂಘವು ಪ್ರತಿಯೊಬ್ಬರಲ್ಲೂ ನೆಟ್ಟು ಬೆಳೆಸುವ ಪರೋಪಕಾರ, ಸ್ವಾಭಿಮಾನ, ಹಿಂದುತ್ವದ ಮೇಲೆ ಗೌರವ, ಸಾತ್ವಿಕವಾದ ಕೋಪ ಇವೆಲ್ಲವೂ ಸತೀಶ್‌ರಲ್ಲಿ ಯಥೇಚ್ಚವಾಗಿ ಕಾಣುತ್ತಿದ್ದವು. ಕುಟುಂಬದ ತನ್ನ ಜವಾಬ್ದಾರಿಗಳನ್ನು ಆದಷ್ಟು ಬೇಗ ನಿರ್ವಹಿಸಿ ಸಂಘದ ಪೂರ್ಣಕಾಲೀನ ಕಾರ್ಯಕರ್ತನಾಗಿ ಹೊರಡಬೇಕೆಂಬ ಬಯಕೆ ಅವರದಾಗಿದ್ದಿತು. ಅದಕ್ಕಾಗಿ ತನ್ನ ವಿವಾಹದ ಪ್ರಸ್ತಾಪವನ್ನು ಅವರು ತಿರಸ್ಕರಿಸಿದ್ದರು. ಅವರು ಬೆಂಗಳೂರಿನಲ್ಲಿ ನಮ್ಮೊಂದಿಗೆ ಇದ್ದಷ್ಟೂ ಕಾಲ ಅವರ ಸಮಾಜ ಪ್ರೀತಿಯು ನಮ್ಮನ್ನೂ ಉತ್ಸಾಹಗೊಳಿಸುತ್ತಿತ್ತು.

ಪರಿಷತ್ತಿನ ಪೂರ್ಣಕಾಲೀನ ಕಾರ್ಯಕರ್ತರಾಗಿದ್ದಾಗ ಅವರು ಸಂಘದ ಜ್ಯೇಷ್ಠ ಅಧಿಕಾರಿಗಳಾದ ಮೈ. ಚ. ಜಯದೇವರ ಕಾರು ಚಾಲಕರಾಗಿ, ಶಂಕರಪುರ ಜಿಲ್ಲಾ ಸಹಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಇತ್ತೀಚೆಗಿನ ರಾಮ ಜನ್ಮಭೂಮಿ ಮಂದಿರದ ಲೋಕಾರ್ಪಣೆಗಾಗಿ ನಡೆದ ಮಂತ್ರಾಕ್ಷತೆಯನ್ನೂ ಹಂಚುವ ಕಾರ್ಯಕ್ರಮದಲ್ಲಿ ಜಿಲ್ಲೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು.


ಅಕಾಲಿಕ ವ್ಯಾಧಿಯಿಂದ ಅಕಾಲಿಕವಾಗಿ ಅಗಲಿದ ಸತೀಶ್ ಉತ್ತಮ ಸ್ನೇಹಿತ, ಶ್ರೇಷ್ಠ ಮಾರ್ಗದರ್ಶಿ, ಜೊತೆಗಾರ, ಹಲವು ಬಾರಿ ನಮ್ಮ ತಪ್ಪುಗಳನ್ನು ತಿದ್ದಿದ ಜ್ಯೇಷ್ಠ, ಅವರ ನೆನಪು ಸದಾ ಹಸಿರಾಗಿರುತ್ತದೆ. ಸತೀಶ್ ನಿಮಗೆ ನಮಸ್ಕಾರಗಳು. ■



ಶ್ರದ್ಧಾಂಜಲಿ ಸಭೆ

# ಶಬ್ದಶೋಧ–196

ರಚನೆ: ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು




## ಎಡದಿಂದ ಬಲಕ್ಕೆ

1. ಪ್ರಾಚೀನವಾದ ಶಾಶ್ವತವಾದ ಎಂಬರ್ಥದ ಪದ (4)
3. ಮಹಾರಾಷ್ಟ್ರದ ಅಂಬಾಭವಾನಿಯನ್ನು ಇನ್ನೊಂದು ಭವಾನಿ ಎಂದೂ ಕರೆಯುತ್ತಾರೆ. (3)
5. ಕ್ಷಮೆಯಲ್ಲಾ, ಯೋಗ್ಯತೆ/ಅರ್ಹತೆ (3)
6. ಬಿಹಾರದಲ್ಲಿರುವ ಬೌದ್ಧರ ಪವಿತ್ರ ಸ್ಥಳವನ್ನು ಹುಡುಕಿ (4)
7. ಕಂಬಾರರ ಮೊದಲ ಕಾದಂಬರಿ (4)
9. ಸಭೆಯ ಬಾಸ್ ಅಲ್ಲಾ ಸದಸ್ಯ (4)
12. ಲಟ್ಟಣಿಗೆ ಹಿಡಿವ, ಬಾಣಸಿಗ (4)
14. ಇಲ್ಲಿ ಸಮುದ್ರವನ್ನು ಹುಡುಕಿ (3)
15. ಕೊನೆಯಲ್ಲಿ ದೀರ್ಘವಾದ ಮಧ್ಯವರ್ತಿ (3)

16. ಯಜ್ಞೋಪವೀತ (4)

### ಮೇಲಿನಿಂದ ಕೆಳಗೆ

1. ಒಂದೇ ಜಾತೀಯವ (4)
2. ಕಾಟಕೊಡುವವಗೊಂದು ಅನ್ವರ್ಥನಾಮ/ವಿಶ್ವಾಮಿತ್ರನ ಶಿಷ್ಯ (4)
3. ಹೀಗೆಂದರೆ ಕುದುರೆಯೂ ಹೌದು ಸೆರೆಮನೆಯೂ ಹೌದು (3)
5. ಮಾತೆಗೆ ಕೊಡುವ ಗೌರವ ಹಿಂದುಮುಂದಾಗಿದೆ (3)
6. ಬುದ್ಧನಿಗಿರುವ ಮತ್ತೊಂದು ಹೆಸರನ್ನು ಹುಡುಕಿ (4)
8. ಗವಾಯಿಗಳಿಗಿರುವ ಘನತೆ ಹಿಂದುಮುಂದಾಗಿದೆ (4)
10. ನಮ್ಮ ಕನ್ನಡದ ಕೊಳಲು/ ವೇಣು, ಹಿಂದಿಯಲ್ಲಿ (3)
11. ಕನ್ನಡದ ಬಾಗಿಲು, ಹಿಂದಿಯಲ್ಲಿನ ಹೀಗೆ (4)
12. ಡೊಳ್ಳು ಹೊಟ್ಟೆಯ ಗಣಪ (4)
13. ಮಹಾರಾಷ್ಟ್ರದ ಜಾನಪದ ಪ್ರಕಾರದ ಹಾಡು/ನೃತ್ಯ ಹಿಂದುಮುಂದಾಗಿದೆ (3)

## ಶಬ್ದಶೋಧ-195 ಉತ್ತರ

**ರಚನೆ:** ***ಉಮಾ.ಎಂ.ಎಸ್.,*** *ಬನಶಂಕರಿ, ಬೆಂಗಳೂರು*

| | | | | | | | | | |
|---|---|---|---|---|---|---|---|---|---|
| | | | | 1 ಚೋ | ಮ | | | | |
| | | | 2 ವೈ | | | 3 ಅ | | | |
| | | | 4 ದೇ | ವ | ನೂ | ರು | | | |
| 5 ಕು | ರಿ | ಗಾ | ಹಿ | | | 6 ಣ | ವಾ | ಡಿ | 7 ಕ |
| ಜ | | | | | | | | | ಥ |
| ವಾ | | | | | | | | | ಕ್ಕ |
| 8 ರ | ಕ | ಧು | 9 ಮ | | | 10 ಖಾ | ನಾ | ವ | ಳಿ |
| | | | 11 ಸ | ಹ | ವಾ | ಸ | | | |
| | | | ಣ | | | ಗಿ | | | |
| | | | | 12 ಗೋ | ರಾ | | | | |

# ನಿಮಗೆಷ್ಟು ಗೊತ್ತು

– ಬಿ.ಈ. ಸೀತಾಲಕ್ಷ್ಮೀ, ಯು.ಎಸ್.ಎ.

1) ಭಾರತೀಯ ಯುದ್ಧ ವಿಮಾನದ ಮೊದಲ ಮಹಿಳಾ ಪೈಲಟ್ ಯಾರು?
2) ಬ್ಲೀಚಿಂಗ್ ಪೌಡರ್ ನ ರಾಸಾಯನಿಕ ಹೆಸರೇನು?
3) 'ಷಟ್ಪದಿ ಬ್ರಹ್ಮ' ಎಂಬ ಬಿರುದು ಪಡೆದ ಕನ್ನಡದ ಕವಿ ಯಾರು?
4) ದೈತ್ಯರ ತಾಯಿ ಯಾರು?
5) ಭಾರತೀಯ ಚಿತ್ರ ರಂಗದ ಪಿತಾಮಹ ಯಾರು?
6) ಗಗನ ಚುಕ್ಕಿ ಭರ ಚುಕ್ಕಿ ಯಾವ ನದಿಯ ಜಲಪಾತಗಳಾಗಿವೆ?
7) ಪುರಾಣಗಳಲ್ಲಿ ಮಾಯಾಪುರಿ ಎಂಬ ಹೆಸರು ಪಡೆದಿದ್ದ ಸ್ಥಳದ ಈಗಿನ ಹೆಸರೇನು?
8) ಪ್ರಸಿದ್ಧ ಕೊನಾರ್ಕ್ ಸೂರ್ಯ ದೇವಾಲಯವು ಯಾವ ರಾಜ್ಯದಲ್ಲಿದೆ?
9) ವಿಶ್ವ ಆರೋಗ್ಯ ದಿನವನ್ನು ಎಂದು ಆಚರಿಸಲಾಗುತ್ತದೆ?
10) ಒಲಿಂಪಿಕ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಮಹಿಳೆ ಯಾರು?











**ಉತ್ತರಗಳು**

1) ಅವನಿ ಚತುರ್ವೇದಿ.
2) ಕ್ಯಾಲ್ಸಿಯಂ ಆಕ್ಸಿ ಕ್ಲೋರೈಡ್
3) ರಾಘವಾಂಕ.
4) ದಿತಿ.
5) ದಾದಾ ಸಾಹೇಬ್ ಫಾಲ್ಕೆ
6) ಕಾವೇರಿ
7) ಹರಿದ್ವಾರ.
8) ಒಡಿಶಾ
9) ಏಪ್ರಿಲ್ 7 ರಂದು.
10) ಕರ್ಣಂ ಮಲ್ಲೇಶ್ವರಿ.

**(9–10 ಉತ್ತರಗಳು ಸರಿಯಾದರೆ ಅತ್ಯುತ್ತಮ, 7–8 ಉತ್ತಮ)**

# ವಿಶ್ವ ಹಿಂದು ಪರಿಷದ್ ಕರ್ನಾಟಕ ದಕ್ಷಿಣ

**ದಿನಾಂಕ :** 09 ಮತ್ತು 10 ಮಾರ್ಚ್ 2024
**ಸ್ಥಳ :** ಸಂಘ ನಿಕೇತನ, ಪ್ರತಾಪನಗರ, ಮಂಗಳೂರು (ಕರ್ನಾಟಕ)

ಎರಡು ದಿನಗಳ ಕಾಲ ನಡೆದ ವಿಶ್ವ ಹಿಂದು ಪರಿಷದ್ ಸಭೆಯಲ್ಲಿ ಕರ್ನಾಟಕ ಸರ್ಕಾರವು ಮಂಡಿಸಿದ ತಿದ್ದುಪಡಿಗಳ ಕುರಿತು ಆಕ್ಷೇಪ.

## ಪ್ರಸ್ತಾವನೆ –01

### ಕರ್ನಾಟಕ ಸರಕಾರದ ಧಾರ್ಮಿಕ ದತ್ತಿ ಇಲಾಖೆಯ ಕಾಯಿದೆ ತಿದ್ದುಪಡಿಗೆ ವಿರೋಧ

ಕರ್ನಾಟಕ ಸರ್ಕಾರವು ಹಿಂದು ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯಿ ದತ್ತಿ (ತಿದ್ದುಪಡಿ) ವಿಧೇಯಕ 2024 ರ ಮಸೂದೆಯನ್ನು ಪರಾಮರ್ಶಿಸಿ ಅದು ಹಿಂದೂ ಸಮಾಜದ ದೇವಸ್ಥಾನಗಳ ಮೇಲೆ ಬೀರುತ್ತಿರುವ ಅಹಿತಕರ ಅಂಶಗಳನ್ನು ಸರ್ಕಾರ ಮತ್ತು ಸಮಾಜಕ್ಕೆ ತಿಳಿಸುತ್ತ ಅದನ್ನು ಸರಿಪಡಿಸುವ ಬಗ್ಗೆ ಈ ಕೆಳಗಿ ಠರಾವನ್ನ ಮಂಡಿಸಲಾಯಿತು.

1) ಹಿಂದೂ ದೇವಸ್ಥಾನಗಳು ಹಿಂದೂ ಸಮಾಜದ ಖಾಸಗಿ ಸಂಸ್ಥೆಗಳಾಗಿವೆ. ಅವುಗಳ ಆಡಳಿತದಲ್ಲಿ ಸರಕಾರ ಯಾವುದೇ ರೀತಿಯ ಹಸ್ತಕ್ಷೇಪ ಮಾಡಬಾರದು ಈಗಿನ ತಿದ್ದುಪಡಿ ವಿಧೇಯಕದಲ್ಲಿ ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರನ್ನು ಸರಕಾರವೇ ನೇಮಿಸುವ ಪ್ರಸ್ತಾವನೆ ಇದ್ದು ಅದು ದೇವಸ್ಥಾನಗಳ ಆಡಳಿತವನ್ನು ತನ್ನ ಹಿಡಿತಕ್ಕೆ ತೆಗೆದು ಕೊಳ್ಳುವ ವ್ಯವಸ್ಥೆಯಾಗಿದ್ದು, ಅದನ್ನು ಕೈ ಬಿಟ್ಟು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರನ್ನು ಸಮಿತಿಯವರೇ ಆಯ್ಕೆ ಮಾಡುವ ವಿಧಾನ ಮುಂದುವರಿಸತಕ್ಕದು.

2) ದೇವಸ್ಥಾನಗಳಿಗೆ ಮೂಲಭೂತ ಅಂಶಗಳನ್ನು ಒದಗಿಸುವುದು ಸರಕಾರ ಮತ್ತು ಸ್ಥಳಿಯಾಡಳಿತದ ಜವಾಬ್ದಾರಿಯಾಗಿದೆ. ಅದಕ್ಕಾಗಿ ಮೂಲಭೂತ ಸೌಕರ್ಯವನ್ನು ಯೋಜಿಸಲು ಸಮಿತಿಯನ್ನು ರಚಿಸಲು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ. ಈ ಸೌಕರ್ಯವನ್ನು ಒದಗಿಸುವ ಯೋಜನೆಗೆ ಯಾವುದೇ ರೀತಿಯಲ್ಲಿ ದೇವಸ್ಥಾನದ ಹಣ ಉಪಯೋಗಿಸಬಾರದು.

ದೇವಸ್ಥಾನಗಳು ಹಿಂದೂ ಸಮಾಜದ ಖಾಸಗಿ ಒಡೆತನದ ಸಂಸ್ಥೆಗಳಾಗಿರುವುದರಿಂದ ದೈವಸಾನದ ಪೂಜಾ ವಿಧಿಯಲ್ಲಾಗಲಿ ಆಡಳಿತದಲ್ಲಾಗಲಿ, ಸರಕಾರಕ್ಕೆ, ಯಾವುದೇ ಹಕ್ಕಿರುವುದಿಲ್ಲ. ದೇವಸ್ಥಾನದ ಹಣ ಯಾವುದಕ್ಕೆ, ಉಪಯೋಗಿಸಬೇಕು, ಉಪಯೋಗಿಸಬಾರದು ಎಂದು ಸರಕಾರ ನಿರ್ದೇಶನ ನೀಡಬಾರದು. ಸದ್ಯಕ್ಕೆ ಹಣ ದುರುಪಯೋಗ ವಾಗದಂತೆ ದೇವಸ್ಥಾನಗಳ ಭೂಮಿ, ಆಸ್ತಿಗಳನ್ನು ಯಾವುದೇ ಕಾರಣಕ್ಕೆ, ಅನ್ಯ ಉದ್ದೇಶಕ್ಕಾಗಲಿ ಸರಕಾರದ ಉದ್ದೇಶಕ್ಕಾಗಲಿ ಉಪಯೋಗವಾಗದಂತೆ ನೋಡಿಕೊಳ್ಳುವುದು ಸರಕಾರದ ಜವಾಬ್ದಾರಿ ಆಗಿರಬೇಕು.

## ಪ್ರಸ್ತಾವನೆ –02

### ರಾಜ್ಯ ಸರ್ಕಾರದ ಹಿಂದೂ ವಿರೋಧಿ ಆಡಳಿತವನ್ನು ಖಂಡಿಸುವ ನಿರ್ಣಯ

ಈಗಿನ ಸರಕಾರ ರಚಿತವಾದ ದಿನದಿಂದ ಸರಕಾರವು ಆಡಳಿತದಲ್ಲಿ ಹಲವು ಬಾರಿ ಹಿಂದೂ ದಮನ ನೀತಿಯನ್ನು ಅನುಸರಿಸಿದುದನ್ನು ಖಂಡಿಸಿ, ಹಿಂದೂ ಸಮಾಜವನ್ನು ಸರಕಾರದ ನೀತಿಯ ವಿರುದ್ಧ ಜಾಗ್ರತಗೊಳಿಸಿ, ಸಮಾಜವನ್ನು ಸದೃಢಗೊಳಿಸಿ ರಾಜ್ಯದಲ್ಲಿ ಎಲ್ಲಾ ಪ್ರಜೆಗಳು ಸುಖ ಶಾಂತಿ ನೆಮ್ಮದಿಯಿಂದ ಇರುವ ವಾತಾವರಣ ನಿರ್ಮಿಸಬೇಕೆಂದು ನಿರ್ಣಯಿಸಲಾಯಿತು.

ಸರಕಾರದ ಆಡಳಿತದಲ್ಲಿ ಅಳವಡಿಸಿರುವ ಹಿಂದೂ ದಮನ ನೀತಿಗೆ ಕೆಲವು ಉದಾಹರಣೆಗಳು

1) ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಹಣ ವಿನಿಯೋಗಿಸಲು ಅನುಮತಿ ಇಲ್ಲದಿದ್ದರೂ 10 ಸಾವಿರ ಕೋಟಿ ರೂಪಾಯಿಗಳನ್ನು ಅಲ್ಪಸಂಖ್ಯಾತರಿಗೆ ಕೊಡುತ್ತೇನೆ ಎಂದು ಹೇಳಿ ಹಿಂದೂ ಹಾಗು ಅಲ್ಪಸಂಖ್ಯಾತರ ಮಧ್ಯೆ ತಾರತಮ್ಯ ಮಾಡಿ ಸರಕಾರವು ಪ್ರಜೆಗಳ ಮಧ್ಯೆ ವೈಮನಸ್ಸಿಗೆ ಕಾರಣವಾಗಿದೆ.

2) ಮೇಲಿನಂತೆ ತುಷ್ಟಿಕರಣ ಮಾಡಿದುದರಿಂದ ವಿಧಾನ ಸಭೆಯಲ್ಲಿ ಪಾಕಿಸ್ತಾನ ಪರ ಘೋಷಣೆ ಹಾಕುವ ಹಾಗು ರಾಮೇಶ್ವರ ಕೆಫೆಯಲ್ಲಿ ಬಾಂಬ್ ಇಡುವ ಪರಿಸ್ಥಿತಿಯನ್ನು ಸರಕಾರದ ನೀತಿಗಳು ನಿರ್ಮಿಸಿವೆ.

3) ತಾನು ಅಲ್ಪಸಂಖ್ಯಾತರ ಪರ ಎಂದು ಹೆಜ್ಜೆ ಹೆಜ್ಜೆಗೂ ತೋರಿಸಿಕೊಡುವ ಸರಕಾರದ ಹಲವು ಮಂತ್ರಿಗಳಿಂದ ಅಲ್ಪಸಂಖ್ಯಾತರಿಗೆ ಹಿಂದೂ ದೇವ ದೇವತೆಗಳನ್ನು ಅಪಮಾನ ಮಾಡುವ ಧೈರ್ಯ ಬಂದಿದೆ ಇದರಿಂದಾಗಿ ಮಂಗಳೂರಿನ ಜೆರೊಸಾ ಪ್ರಕರಣ ಜರುಗಿದ್ದು, ತಪ್ಪಿತಸ್ಥರನ್ನು ಬಂಧಿಸದೇ, ನ್ಯಾಯ ಪರ ಇದ್ದ ಒಬ್ಬ ಶಾಸಕ, ಹಾಗು ಮತ್ತೊಬ್ಬ ಶಾಸಕರು ಸ್ಥಳದಲ್ಲಿ ಇಲ್ಲದಿದ್ದರೂ ಅವರ ಮೇಲೆ ಪ್ರಕರಣ ದಾಖಲಿಸಿದ್ದು, ಹಿಂದೂ ದೇವರಿಗೆ, ಧರ್ಮಕ್ಕೆ ಅಪಮಾನ ಮಾಡಿದ ಶಿಕ್ಷಕಿಯನ್ನು ಇನ್ನು ಬಂಧಿಸದೆ ಇದ್ದು ಹಿಂದೂಗಳ ದಮನ ಮಾಡಿದೆ.

4) ಗೌರವಾನ್ವಿತ ಹಿಂದೂ ಬಾಂಧವರೊಬ್ಬರು ಪ್ರಾಣಿಗಳ ಶುಶ್ರೂಷೆಗೆಂದು ದಾನ ನೀಡಿದ 500 ರಿಂದ 600 ಕೋಟಿ ಬೆಲೆಬಾಳುವ, ಬೆಂಗಳೂರಿನ ಚಾಮರಾಜಪೇಟೆಯ ಪಶುಸಂಗೋಪನಾ ಇಲಾಖೆಯ 2 ಎಕರೆ ಜಾಗವನ್ನು ಅಲ್ಪಸಂಖ್ಯಾತ ಇಲಾಖೆಗೆ ಕೊಟ್ಟಿರುವುದು.

5) ಸರಕಾರಿ ಶಾಲೆಯ ಎಲ್ಲಾ ಧರ್ಮದ ಮಕ್ಕಳನ್ನು ಏಕ ದೃಷ್ಟಿಯಿಂದ ನೋಡಬೇಕಾದ ಸರಕಾರ ರಂಜಾನಿಗೆ ಮುಸ್ಲಿಂ ಮಕ್ಕಳಿಗೆ ಬೇರೆ ನಿಯಮಗಳನ್ನು ಅಳವಡಿಸಿ, ಬೆಳೆಯುವ ಮಕ್ಕಳಲ್ಲೂ ಪ್ರತ್ಯೇಕತೆಯ ವಿಷ ಬೀಜ ಬಿತ್ತಿದ್ದು,

6) ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿರುವ ಅನುಸೂಚಿತ ಸಮುದಾಯಕ್ಕೆ ಮೀಸಲಿಟ್ಟ ಹಣವನ್ನು ದುರುಪಯೋಗ ಪಡಿಸಿದ್ದು, ಆ ಮೂಲಕ ಅಲ್ಪಸಂಖ್ಯಾತರಿಗೆ ಹೆಚ್ಚು ಹಣವನ್ನು ಕೊಡುತ್ತಿರುವುದು. ವಿಶ್ವ ಹಿಂದು ಪರಿಷದ್‌ನ ಈ ಸಭೆಯು ರಾಜ್ಯ ಸರಕಾರದ ಹಿಂದೂ ದಮನ ನೀತಿಗಳನ್ನು ತೀವ್ರವಾಗಿ ಖಂಡಿಸುತ್ತದೆ. ■

# ಬೀಜವೊಂದು ಮೊಳಕೆಯಾಗಿ

– ಶಾರದಾ ವಿ. ಮೂರ್ತಿ
ಮೈಕೋ ಬಡಾವಣೆ, ಬೆಂಗಳೂರು



ಪ್ರವಾಸಕ್ಕೆಂದು ದಿನವೊಂದನ್ನು ನಿಗದಿ ಪಡಿಸಿದಾಗಿನಿಂದ ಆ ಶಾಲೆಯ ನರ್ಸರಿ ಮಕ್ಕಳಿಗೆ ಖುಷಿಯೋ ಖುಷಿ. ಒಂದು ದಿನದ ಸ್ಥಳಿಯ ಪ್ರವಾಸವದು. ಆ ಶಾಲೆಯಲ್ಲೇ ಓದುತ್ತಿರುವ ನಮ್ಮ ಮೊಮ್ಮಗಳಿಗೂ ಹೇಳಲಾಗದ ಸಂಭ್ರಮ. ಶಿಕ್ಷಕಿಯರಂತೂ ದಿನ ನಿರ್ಧಾರವಾದಾಗಿನಿಂದ ಮಕ್ಕಳಿಗೆ ಆ ಪ್ರವಾಸದ ಬಗ್ಗೆ ವರ್ಣನೆ ಮಾಡುತ್ತಾ ಗಲಾಟೆ ಮಾಡದ ಮಕ್ಕಳನ್ನು ಮಾತ್ರ ಕರೆದುಕೊಂಡು ಹೋಗುವುದಾಗಿಯೂ ಹೇಳಿದ್ದರು. ಆದ್ದರಿಂದ ಶಾಲೆಯಲ್ಲೂ ಮಕ್ಕಳ ಗಲಾಟೆಯೂ ಕೇಳದೆ ಎಲ್ಲರೂ ಜಾಣರಾಗಿ ನಡೆದುಕೊಳ್ಳುತ್ತಿದ್ದರು.

ಮೊಲ, ಜಿಂಕೆ, ಗಿಣಿ, ಹಸುಗಳು ಇರುವ ವಿಶಾಲವಾದ ಜಾಗ. ಹಾಗೆಯೇ ಪೇರಲೆ, ಮಾವು, ಕಿತ್ತಳೆ ಮರಗಳು, ಬಣ್ಣಬಣ್ಣದ ಹೂ ಗಿಡಗಳು ಎಲ್ಲವೂ ಇರುವ ತೋಟ. ಮಕ್ಕಳಿಗೆ ಆಡಿ, ನಲಿದು ಮಾಡಬಹುದಾದ ರೆಸಾರ್ಟ್ ಅದು. ಬೇರೆ ಬೇರೆ ಶಾಲೆಯ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಬರುತ್ತಾರಂತೆ. ಮನೆಯ ಹೊರಗೆ ಆಡಲು ಮಣ್ಣಿನ ಜಾಗವೇ ಇಲ್ಲದೆ ಸದಾ ವಾಹನ ದಟ್ಟಣೆಯನ್ನೇ ನೋಡುತ್ತಿರುವ ಮಕ್ಕಳಿಗಂತೂ ಈ ಸ್ಥಳ ಒಂದು ಸುಂದರ ಅನುಭವವನ್ನು ಕೊಟ್ಟಿತ್ತು.

ಅಲ್ಲಿ ವ್ಯವಸ್ಥೆಯಾಗಿದ್ದಂತೆ ಸಾಲಾಗಿ ಕುಳ್ಳಿರಿಸಿ ತಿಂಡಿ, ಹಾಲು ಕೊಟ್ಟಿದ್ದನ್ನು ಮಕ್ಕಳು ಅಚ್ಚುಕಟ್ಟಾಗಿ ತಿಂದಿದ್ದೂ ಆಯಿತು. ಯಾವುದನ್ನೂ ವ್ಯರ್ಥಮಾಡದೆ ಅಚ್ಚುಕಟ್ಟಾಗಿ ತಿಂದು ಶಿಕ್ಷಕಿಯರ ಸೂಚನೆಯನ್ನು ಪಾಲಿಸಿದ್ದರು. ಅದಕ್ಕಾಗಿ ಮತ್ತೊಂದು ಆಕರ್ಷಣೆಯೂ ಇತ್ತು. ಪ್ರವಾಸದ ಸಮಯದಲ್ಲಿ ಜಾಣರಾಗಿದ್ದರೆ ಮಕ್ಕಳು ಮರಳಿ ಹೋಗುವಾಗ ಒಂದು ಚಿಕ್ಕ ಪಾಟ್ ಮತ್ತು ಅದರಲ್ಲಿ ನೆಡಲು ಬೀಜ ಕೊಡುವುದಾಗಿ ಹೇಳಿದ್ದು ಮಕ್ಕಳಿಗೆ ಮತ್ತಷ್ಟು ಕುತೂಹಲವನ್ನುಂಟು ಮಾಡಿತ್ತು.

ಮಕ್ಕಳಿಗೆ ಮರ-ಗಿಡಗಳ ಪರಿಚಯ ಮಾಡಿಕೊಟ್ಟರು. ಮೊಲ, ಜಿಂಕೆ, ಹಸು ಕರುಗಳನ್ನು ನೋಡಿ, ಆಡಿ ಖುಷಿಯೂ ಆಯಿತು. ಕಾಲಕಾಲಕ್ಕೆ ಅವರಿಗೆ ಇಷ್ಟವಾಗುವಂತೆ ಹಣ್ಣಿನ ಪಾನಕ, ಬಿಸ್ಕೆಟ್ ಸರಬರಾಜಾಯಿತು.

ಪೋಷಕರು ಹೋಗಿ ಮಕ್ಕಳನ್ನು ಕರೆತಂದಿದ್ದೂ ಆಯಿತು. ಮರಳಿ ಬಂದ ಮೊಮ್ಮಗಳು ಸಂತೋಷದಿಂದ ಪ್ರವಾಸದ ಅನುಭವಗಳನ್ನು ಹಂಚಿಕೊಂಡರೂ ಅವಳಿಗೆ ಸಣ್ಣದಾದ ಬೇಸರವೂ ಇತ್ತು. 'ಪಾಟ್ ಕೊಡ್ತೀನಿ ಅಂದಿದ್ದ್ರು ಕೊಡಲೇ ಇಲ್ಲ" ಎಂದ ಅವಳಿಗೆ "ನಾಳೆ ಕೊಡಬಹುದು ಪುಟ್ಟಿ.' ಎಂದು ಸಮಾಧಾನಿಸಿದ್ದಾಯಿತು.

ಮಕ್ಕಳಿಗೆ ಒಂದು ಆಶ್ವಾಸನೆ ಕೊಟ್ಟರೆ ಅವರು ಅದನ್ನು ಖಂಡಿತ ಮರೆಯಲಾರರು. ಹಾಗೆಯೇ ಮರುದಿನ ಶಾಲೆಯಿಂದ ಬಂದವಳಿಗೆ ಸಂಭ್ರಮವೋ ಸಂಭ್ರಮ. ಪುಟ್ಟದಾದ ಪಾಟ್, ಎರಡು ಪುಟ್ಟ ಪುಟ್ಟ ಹಾಳೆಗಳಲ್ಲಿ ಮಣ್ಣು ಹಾಗೂ ಮೆಂತೆಯ ಕಾಳುಗಳನ್ನು ಪೊಟ್ಟಣ ಮಾಡಿ ಕೊಟ್ಟಿದ್ದರು. ಆ ಪಾಟ್‌ಗೆ ಮಣ್ಣು ಹಾಕಿ, ಕಾಳು ಹಾಕಿ ನಾಲ್ಕು ಚಮಚೆಗಳಷ್ಟು ನೀರನ್ನು ಹಾಕಲು ಹೇಳಿ ಕಳುಹಿಸಿದ್ದರು. ಟೀಚರ್. ಪುಟ್ಟಿ ಕುಣಿಯುತ್ತಲೇ ಮ್ಯಾಮ್‌ನ ಸೂಚನೆಯನ್ನು ಪಾಲಿಸಿದ್ದೂ ಆಯಿತು. ಮುಂದಿನ ಒಂದು ವಾರವಿಡೀ ಬೀಜದಿಂದ ಮೊಳಕೆ ಬರುವುದನ್ನು ಕುತೂಹಲದಿಂದ ನೀರಿಕ್ಷಿಸುತ್ತಲೇ ಇದ್ದಳು. ಮೊಳಕೆ ಬಂದಾಗ ಅದೇನು ಸಂಭ್ರಮ! ಮೊಳಕೆ ಗಿಡಗಳಾದವು. ತುಸು ದೊಡ್ಡದಾಗುತ್ತಿದಂತೆ ಬಗ್ಗಿ ನಲುಗಿ ಹೋದವು. ಅವುಗಳಿಗೆ ಸ್ಥಳ ಇಕ್ಕಟ್ಟಾಯಿತೇನೊ? ಮತ್ತೆ ಬೇರೆ ಬೀಜಗಳನ್ನು ಹಾಕುವಂತೆ ಹೇಳಿ ಸ್ವಾಂತ್ವನಿಸಿದ್ದಾಯಿತು. ಅದರಂತೆಯೇ ಮತ್ತೆ ಕಾಳುಗಳನ್ನು ಹಾಕಿ ನೀರು ಹಾಕಿ ಗಮನಿಸುತ್ತಾ ಬಂದಳು. ಈಗ ಚೆನ್ನಾಗಿ ಬಂದ ಸಸಿಗಳನ್ನು ಕಂಡು ಆನಂದವೇ ಆನಂದ.

ಶಾಲೆಯವರು ಹೀಗೆ ಪಾಟ್, ಮತ್ತು ಬೀಜ ಕೊಟ್ಟಿದ್ದರಿಂದ ಚಿಕ್ಕ ಮಕ್ಕಳಿಗೆ ಪರಿಸರ, ಗಿಡದ ಬಗ್ಗೆ ಆಸಕ್ತಿ ಮೂಡಿತು. ಸ್ವತಃ ಬೀಜ ಹಾಕುವಂತೆ ಹೇಳಿದ್ದರಿಂದ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಅನುಭವ ಮುಂದಿನ ಸಸ್ಯ ಬೆಳವಣಿಗೆಗೆ ಅಭಿರುಚಿಯುಂಟು ಮಾಡಿದಂತಾಯಿತು. ಅದರಲ್ಲೂ ಶಾಲೆಯಲ್ಲಿ ಏನು ಹೇಳಿದರೂ ಮಕ್ಕಳಿಗೆ ಅದರಲ್ಲಿ ವಿಶ್ವಾಸ, ನಂಬಿಕೆ ಹೆಚ್ಚು. ಶಾಲೆಯವರಿಂದ ಮಕ್ಕಳಿಗೆ ಪರಿಸರದ ಕುರಿತಾದ ಉತ್ತಮ ಪಾಠವಿದು. ಕೆಲವು ಮಕ್ಕಳಿಗಾದರೂ ಆ ಶ್ರದ್ಧೆ, ನಂಬಿಕೆ, ಆಸಕ್ತಿ ಖಂಡಿತ ಉಳಿಯುತ್ತದೆ. ಇನ್ನು ಅನೇಕ ಶಾಲೆಗಳಲ್ಲಿ ಹೀಗೆಯೇ ಪಾಟ್‌ಗಳನ್ನು ಕೊಟ್ಟು ಬೀಜ ಹಾಕಿಸುವ ಅಭ್ಯಾಸ ಮಾಡಿಕೊಂಡಿದ್ದಾರಂತೆ. ಹಿಂದೆಲ್ಲಾ ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರೂ ಸೇರಿ ತೋಟ ಬೆಳೆಸುತ್ತಿದ್ದರು. ಶಿಕ್ಷಕರ ಮಾರ್ಗ ದರ್ಶನ ಪರಿಶ್ರಮ, ಆಸಕ್ತಿಯಿಂದಾಗಿ ಮಕ್ಕಳಿಗೆ ನಮ್ಮ ತೋಟ ಎಂಬ ಭಾವ ಮೊಳೆಯುತ್ತಿತ್ತು.

ಈಗಂತೂ ಕೃಷಿ ಬಲು ತ್ರಾಸದಾಯಕ ಎಂಬುದೇ ಎಲ್ಲರ ಅಭಿಮತ. ಹಾಗೂ ಕೃಷಿಯಿಂದ ಲಾಭವಂತೂ ನಿರೀಕ್ಷಿಸಲಾಗದು ಎಂಬುದೇ ಅಭಿಪ್ರಾಯ ಕೂಡ. ಕೃಷಿ ಕೆಲಸಕ್ಕೆ ಜನರು ಸಿಗುವುದೇ ಕಷ್ಟ; ಖರ್ಚು ಹೆಚ್ಚು; ಮಳೆ ಬಾರದಿದ್ದರೆ. ನೀರಿನ ಸೌಲಭ್ಯವಿಲ್ಲದಿದ್ದರೆ ಬೆಳೆ ಒಣಗೀತು. ಇನ್ನು ಸಸಿಗಳನ್ನು ನೆಟ್ಟಾಗ, ಅಥವಾ ಕೊಯಿಲು ಸಮಯದಲ್ಲಿ ಪ್ರವಾಹದಂತೆ ಮಳೆ ಬಂದು ಬಿಟ್ಟರೆ ಅಲ್ಲಿಯವರೆಗಿನ ಶ್ರಮವೆಲ್ಲಾ ಪ್ರವಾಹದೊಂದಿಗೆ ಕೊಚ್ಚಿಕೊಂಡು ಹೋಗುವುದನ್ನು ಹತಾಶೆಯಿಂದ ಅಸಹಾಯಕತೆಯಿಂದ ರೈತರು ನೋಡಬೇಕಾದೀತು ಎಂಬ ಅಂಶಗಳೆಲ್ಲಾ ಕೆಲವು ಸಂದರ್ಭಗಳಲ್ಲಿ ನಿಜವೇ ಹೌದು...

ಆದರೆ ಮಕ್ಕಳಲ್ಲಿ ಕೃಷಿಯ ಬಗ್ಗೆ ಆಸಕ್ತಿ ಹುಟ್ಟಿಸಿದರೆ ಅವರು ಈಗಿನ ಕೆಲವು ಸೌಲಭ್ಯಗಳನ್ನು ಒದಗಿಸಿಕೊಂಡು ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪರಿಣಿತ ಕೃಷಿಕರಾಗಬಹುದು. ಹಾಗಾಗಿ ಅನೇಕರು ಕೃಷಿಯನ್ನು ಅವಲಂಬಿಸಬಹುದು.

ಹಾಗೆಯೇ ಭೂತಾಯಿ ನಂಬಿದವರನ್ನು ಕೈ ಬಿಡುವುದಿಲ್ಲ. ಅದರಲ್ಲೂ ಸಾವಯವ ಕೃಷಿಯಿಂದ ಭೂತಾಯಿಗೂ ಧಕ್ಕೆಯಾಗದು. ಹೀಗೆಲ್ಲಾ ಯೋಚಿಸುವ ಹಲವಾರು ಯುವಕರು ಕೃಷಿಯಲ್ಲಿ ತೊಡಗಿರುವುದು ಆಶಾದಾಯಕವಾದ ಸಂಗತಿ. ಅವರು ಸಾವಯವ ಕೃಷಿಯಲ್ಲಿ ಯಶಸ್ವಿಯಾಗುತ್ತಾ, ಒಳ್ಳೆಯ ಬೆಳೆಯನ್ನು ಬೆಳೆಯುತ್ತಿದ್ದಾರೆ. ಉತ್ತಮ ಆಹಾರವನ್ನು ಕೊಡುವುದರ ಮೂಲಕ ಜನರ ಆರೋಗ್ಯವನ್ನು ರಕ್ಷಿಸುತ್ತಿದ್ದಾರೆ.

ಹೀಗೆ ಕೃಷಿಯ ವಿಷಯ ಪ್ರಸ್ತಾಪಿಸುವಾಗ ವಿರಾಟ್ ರವಿಕಶ್ಯಪ್‌ನ ಬಗ್ಗೆ ಹೇಳಲೇಬೇಕು. ಹುಡುಗನಿಗೆ ಕೃಷಿ ತುಂಬಾ ಇಷ್ಟ. ಜೊತೆ ಜೊತೆಯೇ ವಿಜ್ಞಾನ, ಪರಿಸರದ ಬಗ್ಗೆ ಕಾಳಜಿ, ಸಸ್ಯಶಾಸ್ತ್ರ, ಜೀವಶಾಸ್ತ್ರ ಎಲ್ಲವೂ ಇಷ್ಟ. ಹತ್ತನೇಯ ತರಗತಿಯಲ್ಲಿ ಒಳ್ಳೆಯ ಅಂಕಗಳನ್ನು ತೆಗೆದಿರುವ ವಿರಾಟ್, ಬೇರೆ ವಿದ್ಯಾರ್ಥಿಗಳಂತಲ್ಲದೆ ಭಿನ್ನವಾಗಿ ಯೋಚಿಸಿ, ನಿರ್ಧಾರ ತೆಗೆದುಕೊಂಡಿದ್ದಾನೆ. ನ್ಯಾಷನಲ್ ಓಪನ್ ಯೂನಿವರ್ಸಿಟಿಯಲ್ಲಿ ಓದುವ ತನ್ನ ಮನದಿಚ್ಛೆಯನ್ನು ಪೋಷಕರಿಗೆ ತಿಳಿಸಿ ಮನ ಒಲಿಸಿದ್ದಾನೆ. ಈಗಾಗಲೇ ತನ್ನನ್ನು ಕೃಷಿಯಲ್ಲಿ ತೊಡಗಿಸಿಕೊಂಡಿರುವ ವಿರಾಟ್, ಅಜ್ಜ, ಅಮ್ಮ ನೋಡಿಕೊಳ್ಳುತ್ತಿರುವ ಗೋಶಾಲೆಯ ಬಗ್ಗೆಯೂ ಮುತುವರ್ಜಿ ವಹಿಸಿದ್ದಾನೆ. ಅಜ್ಜ ಅಜ್ಜಿಯರಿಗೂ ವಿಶ್ವಾಸ ಹುಟ್ಟಿಸಿದ್ದಾನೆ.

ಆನೇಕಲ್‌ಗೆ ಆರು ಕಿ. ಮೀ ದೂರದಲ್ಲಿ ಗೋಶಾಲೆಯಿದೆ. ಒಟ್ಟು ತೊಂಬತ್ತೈದು (ದೇಶೀ ಹಸುಗಳು, ಹಾಗೂ ಎತ್ತುಗಳು ಕರುಗಳನ್ನು ಸೇರಿ) ಹಸುಗಳಿವೆ. ಅಲ್ಲಿರುವ ಬಂಜರು ಭೂಮಿಯನ್ನು ಹಸಿರಾಗಿಸುವ ಪ್ರಯತ್ನ ವಿರಾಟ್‌ನಿಂದ ನಡೆಯುತ್ತಿದೆ. ಅಜ್ಜ ಶ್ರೀಯುತ ಶೇಷಾದ್ರಿಯವರು. ಅಮ್ಮ ಶಾರದಾ ಅವರ ಮಾರ್ಗದರ್ಶನದಲ್ಲಿ ಮೊಮ್ಮಗ ಉತ್ಸಾಹದಿಂದ ಕ್ರಿಯಾಶೀಲನಾಗಿದ್ದಾನೆ. ಸಾವಯವ ಕೃಷಿಯ ಬಗ್ಗೆ ಸಾಕಷ್ಟು ತಿಳಿದುಕೊಂಡು ಕೃಷಿಯಲ್ಲಿ ತೊಡಗಿಸಿಕೊಂಡಿರುವ ಅವನ ಬಗ್ಗೆ ಅಚ್ಚರಿಯಾಗುತ್ತದೆ. ಮೆಚ್ಚುಗೆಯಾಗುತ್ತದೆ. ವಿರಾಟ್‌ನ ತಾಯಿ ಶ್ರೀಮತಿ ಶಾರದಾ ಶೇಷಾದ್ರಿಯವರು ಅನೇಕ ಸೇವಾ ಚಟುವಟಿಕೆಗಳಲ್ಲಿ ಅಧ್ಯಾತ್ಮಿಕ ಕ್ರಿಯೆಗಳಲ್ಲಿ ಪರಿಸರ ಸಂರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೃಕ್ಷಾ ವರ್ಲ್ಡ್ ಫೌಂಡೇಶನ್‌ಗಾಗಿ ಶ್ರಮಿಸುತ್ತಾ ಸಸ್ಯ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ಆಸಕ್ತಿಯುಳ್ಳವರಿಗೆ ಅಗ್ನಿಹೋತ್ರವನ್ನು ಹೇಳಿಕೊಡುತ್ತಾರೆ.

ಬಿ.ಎಂ.ಎಸ್, ಕಾಲೇಜಿನಲ್ಲಿ ಅಧ್ಯಾಪಕಿಯಾಗಿರುವ ಇವರು ಹೆಸರಾಂತ ಆರ್ಕಿಟೆಕ್ಟ್ ಆಗಿದ್ದಾರೆ. ಸಮಾನ ಮನಸ್ಸಿನ ಪತಿ ಶ್ರೀ ಆದಿತ್ಯರೊಂದಿಗೆ ಪರಿಸರ ಸ್ನೇಹಿ ಕಟ್ಟಡಗಳಿಗೆ ಯೋಜನೆಯನ್ನು ಸಿದ್ಧಪಡಿಸಿ ಕೊಡುತ್ತಾರೆ. ಯೋಗ, ಧ್ಯಾನಕ್ಕೆ ಇವರು ರೂಪಿಸಿಕೊಡುವ ಯೋಜನೆಗಳು ಬಹಳ ಒಳ್ಳೆಯ ಅನುಭವವನ್ನು ಉಂಟು ಮಾಡುತ್ತವೆ. ಶ್ರೀ ಶೇಷಾದ್ರಿಯವರ ಸತತ ಹತ್ತು ವರ್ಷಗಳ ಪ್ರಯತ್ನ, ಪರಿಶ್ರಮದಿಂದ ಅಲ್ಲೇ ಒಂದು ಕೆರೆ ನಳನಳಿಸುತ್ತದೆ. ಅರಣ್ಯವು ಇಲ್ಲಿಗೆ ಸಮಿಪವೇ ಇರುವುದರಿಂದ ಆನೆಗಳು ಬಂದು ನೀರು ಕುಡಿದು, ಓಡಾಡಿಕೊಂಡು ಹೋಗುತ್ತವೆ.

ಮತ್ತೊಂದು ವಿಶೇಷ, ವಿಶಿಷ್ಟವಾದ, ವಿಸ್ಮಯದ ಕಾರ್ಯವನ್ನು ಶಾರದಾ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ವಿಶ್ವೇಶ್ವರಪುರಮ್‌ನಲ್ಲಿ ಇಪ್ಪತ್ತು ಅಡಿ ಉದ್ದ ಬೆಳೆದು ನಿಂತಿರುವ ಅರಳಿ ಮರಗಳನ್ನು ಕಟ್ಟಡಕ್ಕಾಗಿ ಕಡಿಯಲು ನಿವೇಶನದ ಮಾಲೀಕರಿಗೆ ಮನಸ್ಸು ಬಾರದು.

ಕೊನೆಗೆ ತಾಯಿ ಬೇರಿಗೆ ತೊಂದರೆಯಾಗದಂತೆ ಜೋಪಾನವಾಗಿ ಲಾರಿಯಲ್ಲಿ ಸಾಗಿಸಿ ಅದಕ್ಕೆ ಹೊಂದುವಂತಹ ಸಿದ್ಧಪಡಿಸಿಟ್ಟ ಗುಂಡಿಗಳಲ್ಲಿ ನೆಡಲಾಯಿತು. ಈಗ ಕೆರೆಯ ಸನಿಹದಲ್ಲಿ ಅರಳಿಮರಗಳು ನೆಮ್ಮದಿಯನ್ನು ಕಂಡುಕೊಂಡು ಬೇರೆಯವರಿಗೆ ನೆರಳು ಕೊಡುತ್ತಿವೆ.



ಇಲ್ಲಿರುವ ದೇಶಿತಳಿ ಗೋವುಗಳು ಕೆರೆಯ ಬದಿಯಲ್ಲಿ ಮೇಯಲು ಕಾಲಾಡಲು ಹೋಗಿ ಬರುತ್ತವೆ. ಆದರೆ ಬರುವ ಖರ್ಚು ತುಸು ಹೆಚ್ಚೇ ಆದರೂ ಹೇಗೋ ನಿಭಾಯಿಸುತ್ತಿದ್ದಾರೆ. ಗೋಸೇವೆಗೆ ಹಣ ಕೊಡುವವರಿಗೆ 80ಜಿ ವ್ಯವಸ್ಥೆಯೂ ಇದೆ.

ಮಳೆ ಬಾರದೆ ಇರುವುದರಿಂದ ಹುಲ್ಲಿಗೆ ಹಣವನ್ನು ಸಾಕಷ್ಟು ಖರ್ಚು ಮಾಡಬೇಕಾಗುತ್ತದೆ. ಶಕ್ತಿ ಕುಂದಿದ, ನಿತ್ರಾಣಗೊಂಡ ಹಸು ಎತ್ತುಗಳಿಗೆ ವಿಶೇಷ ಆರೈಕೆ ಮಾಡುತ್ತಾರೆ. ಹಾಲು ಕರೆಯದೆ ಕರುಗಳಿಗೇ ಹಾಲು ಕುಡಿಯಲು ಬಿಟ್ಟು ಬಿಡುವುದು ಇಲ್ಲಿನ ಮತ್ತೊಂದು ವಿಶೇಷ ಗೋವು, ಪರಿಸರ, ಕೆರೆ ಗಿಡ ಮರಗಳನ್ನು ಎಲ್ಲರೂ ನೋಡಿಕೊಳ್ಳಬೇಕು. ಅದರಲ್ಲೂ ಮಕ್ಕಳು ಎಲ್ಲವನ್ನೂ ನೋಡಿ ವಹಿಸಬೇಕು. ಎಂಬುದು ವಿರಾಟ್ ಹಾಗೂ ಶಾರದಾರ ಅಭಿಲಾಷೆ.

ಶಾರದಾ ಅವರು ಗೋಶಾಲೆಗೆ ತುಸು ದೂರದಲ್ಲಿರುವ ಹಳ್ಳಿಯ ಏಕಮಾತ್ರ ಕನ್ನಡ ಶಾಲೆಯ ಮಕ್ಕಳಿಗೆ ಅಂತರ್ಜಾಲದ ಮೂಲಕ ಸಂಸ್ಕಾರ ಕಲಿಸುವ ಸದಭಿರುಚಿಯ ಪಾಠವನ್ನು ಮಾಡುತ್ತಿದ್ದಾರೆ. ಇಲ್ಲಿಯ ಗೋಶಾಲೆಯಲ್ಲಿ ಅಗ್ನಿಹೋತ್ರ ಮಾಡುವವರಿಗಾಗಿ ಚಚ್ಚೌಕಾಕಾರದ ಸಗಣಿಯ ಬಿಲ್ಲೆಗಳನ್ನು ಮಾಡಿಸುತ್ತಾರೆ. ಲೋಕಕಲ್ಯಾಣಕ್ಕಾಗಿ ಇಲ್ಲಿ ತಿಂಗಳಿಗೊಮ್ಮೆ ರುದ್ರಹೋಮವೂ ನಡೆಯುತ್ತದೆ. ಮಕ್ಕಳ ಹುಟ್ಟುಹಬ್ಬ, ಮದುವೆಯ ವಾರ್ಷಿಕೋತ್ಸವ ಅಥವಾ ಯಾವುದಾದರೂ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲು ಇಚ್ಛಿಸುವವರಿಗೆ ಇಲ್ಲಿ ಪೂಜೆಗೆ ಊಟಕ್ಕೆ ಎಲ್ಲಾ ರೀತಿಯಲ್ಲೂ ವ್ಯವಸ್ಥೆ ಮಾಡಿಕೊಡುತ್ತಾರೆ.

ಎಲ್ಲರಿಗೂ ಒಳ್ಳೆಯ ಪ್ರವಾಸವೂ. ಮನಸ್ಸಿಗೆ ಹಿತಕರವೂ, ಪವಿತ್ರ ಗೋಸೇವೆಯ ಅವಕಾಶವೂ ದೊರೆಯುವ ಸ್ಥಳವಿದು. ಮುತ್ತ್ಯಾಲ ಮಡು, (ಪರ್ಲ್ ವ್ಯಾಲಿ) ವಿನಿಂದ ಕೇವಲ ಎರಡು ಕಿ. ಮೀ ಅಂತರವಿರುವುದರಿಂದ ಪ್ರವಾಸವನ್ನು ಒಟ್ಟಾಗಿಯೂ ಮಾಡಬಹುದು.

ಎಲ್ಲವನ್ನೂ ನೋಡಿ ಮನೆಗೆ ಹಿಂತಿರುವಾಗ, ವಿರಾಟ್‌ನಂತಹ ಯುವಕರು ಹೆಚ್ಚಾಗಲಿ; ಶಾರದಾರಂತಹ ಸೇವಾಸಕ್ತರು ಮತ್ತಷ್ಟಾಗಲಿ, ಶೇಷಾದ್ರಿಯವರಂತಹ ಬಹುವಿಧದ ಕಾರ್ಯಕುಶಲರು, ಆಧ್ಯಾತ್ಮ ಬಲ್ಲವರು ವೃದ್ಧಿಸಲಿ ಎಂದು ಮನಸ್ಸು ಬಯಸುತ್ತಿತ್ತು. ಇಂತಹವರಿಗೆ ಕೈಜೋಡಿಸುವ, ಮನಸ್ಸು ತೆರೆದಿರುವ ಭಾಗ್ಯ ನಮ್ಮದಾಗಲಿ ಅಲ್ಲವೆ? ಮಕ್ಕಳಲ್ಲಿ ಪರಿಸರ ಪ್ರೀತಿಯ ಬೀಜ ನೆಟ್ಟರೆ ಅದು ಮುಂದೆ ನೂರಾರು ಹೆಮ್ಮರಗಳಿಗೆ ದಾರಿ ಮಾಡಿಕೊಟ್ಟೀತು! ■


ದೀಪ ಲಕ್ಷ್ಮೀ ಪೂಜೆ – ಶಿವಮೊಗ್ಗ


ಶಿವರಾತ್ರಿ ಜಾಗರಣಾ ಸತ್ಸಂಗ – ನಾಗರಭಾವಿ, ಬೆಂಗಳೂರು

## ಬಾಲ ಸಂಸ್ಕಾರ ವರ್ಗಗಳು




ಸಾಗರ


ಯಲಹಂಕ


ಮಾರತಹಳ್ಳಿ


ಬಜರಂಗ ದಳದಿಂದ ಬಜರಂಗಿ ದೇವಸ್ಥಾನ
ಗರಡಿ ಭೀಮಾನಾಂಜನೇಯ ಗುಡಿ, ನಾಗಮಂಗಲ


ಒತ್ತುವರಿ, ಕಸ ಸಂಗ್ರಹದ ವಿಲೇವಾರಿ




ಕಡಬ ಕಾಲೇಜು ಆಸಿಡ್ ಪ್ರಕರಣ
ದುರ್ಗಾವಾಹಿನಿಯಿಂದ ಸಾಂತ್ವನ


ಕ್ರೈಸ್ತ ಮತಾಂತರ ಪ್ರಯತ್ನ– ಸಾವಿರಾರು ಪುಸ್ತಕ ಮುಟ್ಟುಗೋಲು
ಚನ್ನೇನಹಟ್ಟಿ, ಚಿತ್ರದುರ್ಗ

Regd. No. RNP/KA/BGS/636/2024-2026
Post at Bengaluru PSO 560 026 on 6/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 44
RNI No. KARKAN/2002/08081
Date of Publication 01-04-2024



ಅಯೋಧ್ಯೆಯಿಂದ ಮರಳಿದ ಪೂಜ್ಯ ಪೇಜಾವರ ಶ್ರೀಗಳಿಗೆ ಸ್ವಾಗತ



ಅಖಿಲ ಭಾರತ ಕಸ್ಟಮ್ ಮತ್ತು ಸೆಂಟ್ರಲ್ ಎಕ್ಸೈಜ್ ಸಿ ಗ್ರೂಪ್ ಅಧಿಕಾರಿಗಳ ಫೆಡರೇಶನ್ ಅಧ್ಯಕ್ಷರಾಗಿ ಮಾ. ಚಂದ್ರಶೇಖರ್ (ಜಯನಗರ ಜಿಲ್ಲೆ ಪರಿಷದ್ ಉಪಾಧ್ಯಕ್ಷರು) ಆಯ್ಕೆ



ಮಂಗಳೂರು ಸೇವಾ ಪ್ರಮುಖ್ ದಿಲೀಪ್ ಮರೋಳಿ
ಅವರಿಗೆ ಕೊರಗಜ್ಜ ಸೇವಾ ಸಮಿತಿ ಗೌರವ

ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

# ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8 & 8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy